ತುಳುವ
ಶ್ರೀ ಕೃಷ್ಣ ದೇವರಾಯ

ಸಂಪಾದಕರು

ಡಾ. ದುಗ್ಗಪ್ಪ ಕಜೆಕಾರ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಹಾನಗರಪಾಲಿಕೆ ಕಟ್ಟಡ, ಲಾಲ್‌ಬಾಗ್ ಮಂಗಳೂರು - 575 003.
ದೂರವಾಣಿ / ಫ್ಯಾಕ್ಸ್ : 0824-2459389, 4259481
E-mail : tulu.academy@yahoo.co.in
Website: www.tuluacademy.org

ತುಳುವ
ಶ್ರೀ ಕೃಷ್ಣದೇವರಾಯ

ಸಂಪಾದಕರು

ಡಾ. ದುಗ್ಗಪ್ಪ ಕಜೆಕಾರ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಭಾಗ್,

ಮಂಗಳೂರು – 575 003.

ದೂರವಾಣಿ/ಫ್ಯಾಕ್ಸ್ : 0824–2459389, 4259481

Tuluva Sri Krishnadevaraya *;*
A collection of essays edited by Dr. Duggappa Kajekar,
Assistant Professor, Govt First Grade College Thenkanidiyur, Udupi,

Chief Editor	:	Dr. Palthady Ramakrishna Achar President , Karnataka Tulu sahithya Academy
Editor	:	Dr. Duggappa Kajekar
Publisher	:	Sri Chandrahasa Rai B. Registrar, Karnataka Tulu Sahitya Academy City Corparation Building, Lalbaug, Mangalore- 575003. Telephone / Fax : 0824 – 2459389, 4259481 E-mail : tulu.academy@yahoo.co.in
Website	:	www.tuluacademy.org
First Impression	:	2010
Pages	:	80+4
Price	:	Rs. 40/-
Copy Right	:	Karnataka Tulu Sahitya Academy
Cover Page	:	Sri Krishnadevaraya
Printed By	:	Fine Prints, Bejai, Mangalore - 575 003. ☎ : 0824 - 4273477

ಈ ಕೃತಿಯಲ್ಲಿ ......

ಕ್ರ.ಸಂ.	ಬರಹಗಳು	ಪುಟ ಸಂಖ್ಯೆ
1.	ಅಧ್ಯಕ್ಷರ ನುಡಿ – ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್	5
2.	ಸಂಪಾದಕೀಯ – ಡಾ. ದುಗ್ಗಪ್ಪ ಕಜೆಕಾರ್	10
3.	ವಿಜಯನಗರ ಕಾಲದ ಸಾಂಸ್ಕೃತಿಕ ತುಳುನಾಡು – ಪ್ರೊ. ಅಮೃತ ಸೋಮೇಶ್ವರ	12
4.	ಕನ್ನಡ ರಾಜ್ಯ ರಮಾರಮಣ, ಆಂಧ್ರ ಭೋಜ, ತುಳುವಂಶದ ಶ್ರೀ ಕೃಷ್ಣದೇವರಾಯ – ಪ್ರೊ. ಎ. ವಿ. ನಾವಡ	20
5.	ಕೃಷ್ಣ ದೇವರಾಯನ ವಂಶಪರಂಪರೆ – ಡಾ. ಮುಕುಂದ ಪ್ರಭು	28
6.	ವಸಾಹತು ಶಾಹಿ ಇತಿಹಾಸ ಮತ್ತು ಚರಿತ್ರೆಯ ವಾಸ್ತವ – ಡಾ. ಬಾರ್ಕೂರು ಉದಯ	38
7.	ವಿಜಯನಗರ ಕಾಲದ ಬಾರಕೂರು – ಡಾ। ಬಿ.ಜಗದೀಶ ಶೆಟ್ಟಿ, ಬ್ರಹ್ಮಾವರ.	48
8.	ಪ್ರವಾಸಿ ಸಾಹಿತ್ಯ ಮತ್ತು ವಿಜಯನಗರ – ಪ್ರಸಾದ್ ರಾವ್ ಎಂ.	59
9.	ಕೃಷ್ಣ ದೇವರಾಯನ ಗೃಹ ಜೀವನದ ಕಿರುನೋಟ – ತುಕಾರಾಂ ಪೂಜಾರಿ	69
10.	Temples of Vijayanagara – Under the Tuluvas - *Dr Aravind Kumar*	73

ಲೇಖಕರ ವಿಳಾಸ

1. ಪ್ರೊ.ಅಮೃತ ಸೋಮೇಶ್ವರ
ಒಲುಮೆ ಕೋಟೆಕಾರು ಮಂಗಳೂರು.

2. ಪ್ರೊ. ಎ.ವಿ. ನಾವಡ
301, ಎಬೋಡ್ ಅಪಾರ್ಟ್‌ಮೆಂಟ್ ಕಲ್ಪನಾ ರಸ್ತೆ,
ವಾಸ್ ಲೇನ್, ಮಂಗಳೂರು–575002.

3. ಡಾ। ಎಂ. ಮುಕುಂದ ಪ್ರಭು
729–1, ಬಿಜೈ ಹೊಸರಸ್ತೆ, ಅಂಚೆ ಬಿಜೈ, ಮಂಗಳೂರು–575 004.

4. ಡಾ. ಬಾರ್ಕೂರು ಉದಯ
ಪ್ರವಾಚಕರು, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

5. ಡಾ। ಬಿ.ಜಗದೀಶ ಶೆಟ್ಟಿ, ಬ್ರಹ್ಮಾವರ.
ಮುಖ್ಯಸ್ಥರು, ಇತಿಹಾಸ ವಿಭಾಗ,
ಪೂರ್ಣಪ್ರಜ್ಞ ಕಾಲೇಜು, ಉಡುಪಿ.

6. ಶ್ರೀ ಪ್ರಸಾದ್ ರಾವ್ ಎಂ,
ಮುಖ್ಯಸ್ಥರು, ಸ್ನಾತಕೋತ್ತರ ಆಂಗ್ಲಭಾಷಾ ವಿಭಾಗ,
ಸರಕಾರಿ ಪ್ರಥಮ ದರ್ಜೆ ಕಾಲೇಜು, ತೆಂಕನಿಡಿಯೂರು, ಉಡುಪಿ.

7. ಶ್ರೀ ತುಕಾರಾಮ್ ಪೂಜಾರಿ
ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ವಿ.ಎಸ್. ಕಾಲೇಜು
ಬಂಟ್ವಾಳ ತಾಲೂಕು ದ.ಕ.

8. Dr Aravind Kumar
Asst professor, Dept of History, Archaeology and Culture,
Dravidian University, Kuppam – 517425.

ಅಧ್ಯಕ್ಷರ ನುಡಿ :

ತುಳುವ ಶ್ರೀಕೃಷ್ಣದೇವರಾಯ

ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಶ್ರೀ ಕೃಷ್ಣ ದೇವರಾಯನ ಆಡಳಿತಾವಧಿಯನ್ನು ಕರ್ನಾಟಕದ ಸುವರ್ಣ ಯುಗವೆಂದೇ ಕರೆಯಲಾಗಿದೆ. ಕ್ರಿ.ಶ.1336ರಲ್ಲಿ ವಿಜಯನಗರ ಸಾಮ್ರಾಜ್ಯವು ಸ್ಥಾಪನೆಯಾದಂದಿನಿಂದ ಹಿಡಿದು ಕೊನೆಯವರೆಗೂ ಪ್ರತಿಯೊಂದು ಘಟ್ಟಗಳಲ್ಲಿ ರಾಜ್ಯವು ತನ್ನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಬದಲಾವಣೆಗಳನ್ನು ಕಂಡಿದೆ. ಇತಿಹಾಸಕಾರರ ಪ್ರಕಾರ ವಿಜಯನಗರ ಸಾಮ್ರಾಜ್ಯವನ್ನು ಸಂಗಮ, ಸಾಳ್ವ, ತುಳುವ, ಅರವೀಡು – ಹೀಗೆ ನಾಲ್ಕು ವಂಶದ ರಾಜರುಗಳು ಆಳಿದರು. ಅವರಲ್ಲಿ ತುಳು ವಂಶದ ಶ್ರೀಕೃಷ್ಣ ದೇವರಾಯನ ಆಡಳಿತ ಕಾಲದಲ್ಲಿ ರಾಜ್ಯವು ವಿಸ್ತರಣೆಗೊಂಡಿತು ಮಾತ್ರವಲ್ಲ ಸಮಗ್ರ ಸಮೃದ್ಧಿಯನ್ನು ಪಡೆಯಿತು. ಶ್ರೀಕೃಷ್ಣ ದೇವರಾಯ ತುಳುವ ವಂಶದವನೆಂಬುದು ತುಳುವರಿಗೆಲ್ಲ ಅಭಿಮಾನದ ವಿಷಯ. ಆದರೆ ಈ ಅಭಿಪ್ರಾಯವನ್ನು ಇತ್ತೀಚೆಗಿನ ಇತಿಹಾಸಕಾರರು ಕೆಲವರು ಒಪ್ಪಿಕೊಳ್ಳುವುದಿಲ್ಲ. ವಿಜಯನಗರದ ಕುರಿತು ಇಂದೂ ಕೂಡ ಸಂಶೋಧನೆಗಳು ಹಾಗೂ ಮರು ನಿರೂಪಣೆಗಳು ನಡೆಯುತ್ತಿರುವುದು ಈ ಕಾರಣದಿಂದಾಗಿಯೇ ಎಂದು ನಾನು ಭಾವಿಸಿದ್ದೇನೆ.

ವಿಜಯನಗರದ ಆಳ್ವಿಕೆಯು ತೌಳವ ಸಂಸ್ಕೃತಿಯೊಂದಿಗೆ ಬೆಸೆದುಕೊಂಡಿರುವುದಕ್ಕೆ ಅನೇಕ ಸಾಕ್ಷಗಳು ದೊರೆಯುತ್ತದೆ. ಹೆಚ್ಚಿನ ವಿದ್ವಾಂಸರು ವಿಜಯನಗರದ ತೌಳವ ವಂಶವು ನಮ್ಮ ತುಳು ನಾಡಿಗೆ ಸಂಬಂಧಪಟ್ಟದ್ದಾಗಿದೆ ಎಂದಿದ್ದಾರೆ. ತೌಳವ ಎನ್ನುವ ಹೆಸರಿನೊಂದಿಗೆ ನಮ್ಮ ಸಂಸ್ಕೃತಿಯನ್ನು ಥಳಕು ಹಾಕಿ ನಮ್ಮ ನಾಡಿನ ಚರಿತ್ರೆಗೆ ಶ್ರೇಷ್ಠತೆ ಒದಗಿಸಿಕೊಡಬೇಕೆಂಬ ಕಾರಣವನ್ನು ಬದಿಗಿರಿಸಿ ನೋಡಿದರೂ ವಿಜಯನಗರ, ಕೃಷ್ಣ ದೇವರಾಯ ಮತ್ತು ತುಳುನಾಡ ಸಂಸ್ಕೃತಿಗಳೊಂದಿಗೆ ಒಂದು ರೀತಿಯ ಸಂಬಂಧ ಇದ್ದುದನ್ನು ನಾವು ಕಾಣಬಹುದು. ವ್ಯಾಪಾರ ವ್ಯವಹಾರಕ್ಕೆ ಸಂಬಂಧಪಟ್ಟು ತುಳುನಾಡ ಕಡಲ ತೀರದ ಬಂದರುಗಳು ಹಾಗೂ ಪೇಟೆಗಳು ವಿಜಯನಗರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದವು ಎನ್ನುವುದಂತೂ ಸುಳ್ಳಲ್ಲ.

ತುಳು ಜಾನಪದದಲ್ಲಿ ವಿಜಯನಗರದ ಉಲ್ಲೇಖಗಳು ಹಲವು ಕಡೆ ಕಂಡು ಬರುತ್ತವೆ. ಕಾರ್ಕಳದ ಗೊಮ್ಮಟನನ್ನು ಕೆತ್ತಿಸಿದ ಭೈರವರಸು ವಿಜಯನಗರ ಸಾಮ್ರಾಜ್ಯದ ಸಾಮಂತನಾಗಿದ್ದನು ಎಂಬ ವಿಚಾರ ಪಂಜುರ್ಲಿ ಪಾಡ್ದನದಲ್ಲಿ ಬರುತ್ತದೆ. ಕಾಲ ಕಾಲಕ್ಕೆ ಸರಿಯಾಗಿ ವಿಜಯನಗರದ ಅರಸರಿಗೆ ಕಪ್ಪ ಕಾಣಿಕೆಗಳನ್ನು ಕೊಡದೆ ಇದ್ದಾಗ ರಾಜ್ಯದ ಮೇಲೆ ದಾಳಿ ಮಾಡಿ ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ ಓಲೆ ಕಳುಹಿಸಿ ಕೊಟ್ಟ ಪ್ರಸ್ತಾವ ಈ ಪಾಡ್ದನದಲ್ಲಿದೆ. ಕಾರ್ಕಳದ ಗೊಮ್ಮಟನನ್ನು ಕೆತ್ತಿದ ಬೀರು ಕಲ್ಕುಡನ ತಂದೆ ಶಂಭು ಕಲ್ಕುಡನು ಆನೆಗೊಂದಿ ಸಂಸ್ಥಾನದ ಗುರುಪೀಠಕ್ಕೆ ಸೇರಿದ ಶಿಷ್ಯ ವರ್ಗದವನೆಂಬುದು ಕಲ್ಕುಡ ಕಲ್ಲುರ್ಟಿ ಪಾಡ್ದನದಲ್ಲಿದೆ. ಈ ಪಾಡ್ದನದಲ್ಲಿ "ಕಂಚಿನ ದೇಸ ಐಗುಂಡಿ ಸಂಸ್ಥಾನ, ಕೆಲ್ಲ ಪುತ್ತಿಗೆ, ಮಾರ್ನಾಡುಡ್ ಶಂಭು ಅಚ್ಚಾವೆರೆ ಮಗೆ ಬೀರು ಅಚ್ಚಾವೆರ್ ಪುಟ್ಟಿಯೆರ್" ಎಂಬ ಉಲ್ಲೇಖವಿದೆ. ಗೊಮ್ಮಟನನ್ನು ಕೆತ್ತಿದ ಶಿಲ್ಪಿ ಕುಟುಂಬದವರು ಮೂಡಬಿದಿರೆಯ ಸಮೀಪದ ಕೆಲ್ಲ ಪುತ್ತಿಗೆಯ ನಿವಾಸಿಗಳಾಗಿದ್ದರೂ, ಅವರು ವಿಜಯ ನಗರ ಸಾಮ್ರಾಜ್ಯದ ಚಕ್ರವರ್ತಿಗಳಿಂದ ಮೆಚ್ಚುಗೆ ಪಡೆದ ಆನೆಗೊಂದಿ (ಐಗುಂಡಿ) ವಿಶ್ವಬ್ರಾಹ್ಮಣ ಗುರುಪೀಠದ ಶಿಷ್ಯವರ್ಗದವರಾಗಿದ್ದರು. ವಿಜಯನಗರದಿಂದಲೆ ಅವರು ವಲಸೆ ಬಂದಿರುವ ಸಾಧ್ಯತೆ ಇದೆ. ಕೃಷ್ಣದೇವರಾಯನೂ ಈ ಗುರುಪೀಠದ ಶಿಷ್ಯವರ್ಗದಲ್ಲಿ ಸೇರಿದ್ದನು ಎಂಬುದಕ್ಕೆ ತಾಮ್ರ ಶಾಸನಗಳಿವೆ ಬಲಿಯೇಂದ್ರ ಪಾಡ್ದನದಲ್ಲಿ ವಿಜಯನಗರ (ಈಜನಗರ)ದ ಉಲ್ಲೇಖ ಇದೆ. ಈಜ ನಗರದಿಂದ ಬಂದ ಬ್ರಾಹ್ಮಣ ವಟುಗಳಿಬ್ಬರು ಬಲಿಯೇಂದ್ರನನ್ನು ಮೋಸಗೊಳಿಸಿ ಕಡಲಾಚೆಗೆ ಕಳುಹಿಸಿಕೊಟ್ಟರು ಎಂಬ ಕಥೆ ಈ ಪಾಡ್ದನದ್ದಾಗಿದೆ. ವೈದಿಕ ಧರ್ಮವು ತುಳುನಾಡಿನಲ್ಲಿ ಪ್ರಬಲಗೊಳ್ಳಲು ವಿಜಯನಗರದ ಅರಸರ ಪ್ರೋತ್ಸಾಹವಿತ್ತೆಂಬುದು ಇಲ್ಲಿ ವ್ಯಕ್ತವಾಗುತ್ತದೆ. ವಿಜಯನಗರದ ಕಾಲದಲ್ಲಿಯೇ ತುಳುನಾಡಿನ ಕಟಪಾಡಿ ಮತ್ತು ಮೂಡಬಿದ್ರೆಯಲ್ಲಿ ವೈದಿಕ ವಿಶ್ವಬ್ರಾಹ್ಮಣ ಮಠಗಳು ಸ್ಥಾಪನೆಗೊಂಡವು. ಇವು ಆನೆಗೊಂದಿ ಯತಿಪೀಠಕ್ಕೆ ಸೇರಿದವುಗಳಾಗಿದ್ದವು ಎಂಬುದು ಈ ಪಾಡ್ದನಗಳ ಉಲ್ಲೇಖಗಳನ್ನು ಸ್ಪಷ್ಟೀಕರಿಸುತ್ತವೆ. ಪಾಡ್ದನದಲ್ಲಿ ಅರಸರ ಹೆಸರುಗಳನ್ನು ಉಲ್ಲೇಖಿಸದೆ ಕನ್ನಡದ ಕರ್ತುಲು ಎಂಬುದಾಗಿ ಹೇಳಲಾಗಿದೆ. ತುಳು ಲಿಪಿಯಲ್ಲಿ ಬರೆಯಲಾದ ಪ್ರಾಚೀನ ತುಳು ಗ್ರಂಥಗಳಾದ ತುಳು ಭಾಗವತ, ಭಾರತ, ದೇವಿ ಮಹಾತ್ಮೆ ಮುಂತಾದ ಗ್ರಂಥಗಳೆಲ್ಲಾ ವಿಜಯನಗರದ ಅರಸರ ಕಾಲದಲ್ಲಿಯೇ ಬರೆಯಲ್ಪಟ್ಟವುಗಳಾಗಿವೆ.

ಡಾ.ವೆಂಕಟರಾಜ ಪುಣಿಂಚತ್ತಾಯರು ಇತ್ತೀಚೆಗೆ ಕರ್ಣ ಪರ್ವವೆಂಬ ತುಳು ಲಿಪಿಯಲ್ಲಿ ಬರೆದ ತುಳು ಭಾಷಾ ಗ್ರಂಥವನ್ನ ಸಂಪಾದಿಸಿದ್ದಾರೆ. ಅವರು ಈ ಗ್ರಂಥದ ಕರ್ತೃ ವಿಜಯನಗರದ ಒಬ್ಬ ಅರಸ ಎಂದು ಹೇಳುತ್ತಾರೆ. ಇದನ್ನೆಲ್ಲಾ ಪರಿಗಣಿಸಿದಾಗ ವಿಜಯನಗರದ ಅರುಸರು ತುಳುನಾಡಿನ ವಿಶೇಷ ಸಂಬಂಧವನ್ನು ಹೊಂದಿದ್ದರು. ಮತ್ತು ಶ್ರೀಕೃಷ್ಣ ದೇವರಾಯ ತುಳುವನೆಂಬುದು ಹೆಚ್ಚು ಖಚಿತವಾಗುತ್ತದೆ.

ಶ್ರೀಕೃಷ್ಣ ದೇವರಾಯ ತಿರುಪತಿ ವೆಂಕಟ್ರಮಣನ ಮಹಾಭಕ್ತ. ಡಾ.ಅಮೃತ ಸೋಮೇಶ್ವರ ಅವರು ಹೇಳುವಂತೆ, ತಿರುಪತಿಯ ವೆಂಕಟ್ರಮಣ ದೇವರನ್ನು ತುಳುನಾಡಿಗೆ ಪರಿಚಯಿಸಿದವರು ವಿಜಯನಗರದ ಅರಸರು. ಈಗ ತುಳುನಾಡಿನ ವೈದಿಕ ಅವೈದಿಕ ಸಂಪ್ರದಾಯದ ಎಲ್ಲಾ ಮನೆಗಳಲ್ಲೂ ಶೈವ, ವೈಷ್ಣವ, ಮತಕ್ಕೆ ಸೇರಿದವರೆಲ್ಲರು ವರ್ಷಕ್ಕೊಮ್ಮೆ ವೆಂಕಟ್ರಮಣನ ಆರಾಧನೆ ನಡೆಸುತ್ತಾರೆ. "ಮುಡಿಪು" ಕಟ್ಟುತ್ತಾರೆ. ಈ ಹರಿ ಸೇವೆಯೇ ತುಳುವರಲ್ಲಿ 'ಅರ್ಸಯ'ವಾಗಿದೆ. ಮುಡಿಪಿನ ಪಾತ್ರೆ ತುಂಬಿದಾಗ ಅದನ್ನು ತಿರುಪತಿ ವೆಂಕಟ್ರಮಣನಿಗೆ ಸಲ್ಲಿಸುತ್ತಾರೆ. ಸಂಕಷ್ಟ ಬಂದಾಗ ಪರಿಹಾರಕ್ಕೆ ವೆಂಕಟ್ರಮಣನ ಹೆಸರಿನಲ್ಲಿ ಹರಕೆ ಹೊತ್ತು ಕಾಲಿಗೆ ಅಥವಾ ಕೈಗೆ ಬೆಳ್ಳಿಯ ಬೇಡಿ (ಸರಿಗೆ) ಧರಿಸಿಕೊಳ್ಳುತ್ತಾರೆ. ತುಳುನಾಡಿನ ಹೊರಗಿನಿಂದ ಬಂದ ವೈಷ್ಣವ ಮತಾವಲಂಬಿಗಳಾದ ದಾಸ ಕುಲದವರು ಈ ಅರ್ಸಯದ ಅರ್ಚಕರಾಗಿ ಕಾರ್ಯ ನಿರ್ವಹಿಸುತ್ತಾರೆ. ತುಳುನಾಡಿನ ಪ್ರಸಿದ್ಧ ಆರಾಧನ ಕಲೆಯಾದ ಭೂತಾರಾಧನೆಯು ಪ್ರವರ್ಧಮಾನಕ್ಕೆ ಬಂದುದು ವಿಜಯನಗರದ ಅರಸರ ಆಡಳಿತ ಕಾಲದಲ್ಲಿ ಎಂಬುದಕ್ಕೆ ಎರಡು ಮಾತಿಲ್ಲ. ತೆಲುಗು ರಾಜ್ಯವು ತುಳುನಾಡಿನ ಪಕ್ಕದ ರಾಜ್ಯವಲ್ಲದಿದ್ದರೂ, ಕೆಲವು ಭಾಷಾ ವಿದ್ವಾಂಸರು ತೆಲುಗಿಗು ತುಳುವಿಗೂ ನಿಕಟ ಸಂಬಂಧವಿದೆ ಎಂದಿದ್ದಾರೆ. ಕವಿ ರತ್ನಾಕರ ವರ್ಣಿಯು ತನ್ನ ಕಾವ್ಯ ಭರತೇಶ ವೈಭವದಲ್ಲಿ ಈ ಕಾವ್ಯವನ್ನು ತೆಲುಗರು ಮೆಚ್ಚಿಕೊಳ್ಳಬೇಕು (ರೈಯ ಮಂಚಿದಿಯನೆ ತೆಲುಗ) ಎಂದು ತುಳು ಕನ್ನಡ ತೆಲುಗನ್ನು ಒಂದೇ ಸಾಲಿಗೆ ಸೇರಿಸಿದ್ದಾನೆ.

ತುಳುವ ಎಂಬ ಪದ ಕೇವಲ ತುಳು ಮಾತನಾಡುವವರಿಗಷ್ಟೇ ಅಲ್ಲ. ತುಳುನಾಡಿನಲ್ಲಿ ಹುಟ್ಟಿದವರೆಲ್ಲರೂ ತುಳುವರೆಂದು ಕರೆಯಲ್ಪಡುತ್ತಾರೆ. ತುಳುನಾಡು ವಿಜಯನಗರ ಕಾಲದಲ್ಲಿ ಬಹಳ ವಿಸ್ತಾರವಾಗಿತ್ತು. ಕರಾವಳಿ ಕರ್ನಾಟಕವಲ್ಲದೆ ಇನ್ನಿತರ ಮಲೆನಾಡಿನ ಹಲವು ಭಾಗಗಳು ಈ ನಾಡಿಗೆ ಸೇರಿದ್ದುವು. ತುಳುವ ಎಂಬ ಒಂದು ಜಾತಿಯವರು ಕೂಡಾ ಆ

ಕಾಲದಲ್ಲಿದ್ದರು. ಕುಂದಾಪುರ ತಾಲೂಕಿನಲ್ಲಿ ಈಗಲೂ ಕೂಡ ತುಳುವೇಶ್ವರ ದೇವಾಲಯವಿದೆ. ಅದು ವಿಜಯನಗರ ಕಾಲದಲ್ಲಿ ಸ್ಥಾಪನೆಗೊಂಡಿರುವ ಸಾಧ್ಯತೆ ಇದೆ. ಹೀಗೆ ಎಲ್ಲಾ ವಿಚಾರಗಳನ್ನು ಸೂಕ್ಷ್ಮವಾಗಿ ಸಂಶೋಧಿಸಿ ನೋಡಿದಾಗ ವಿಜಯನಗರದ ಅರಸರಿಗು ತುಳುನಾಡಿಗು ಇದ್ದ ನಿಕಟ ಸಂಬಂಧ ಕಂಡು ಬರುತ್ತಿದೆ. ಶ್ರೀ ಕೃಷ್ಣದೇವರಾಯ ತುಳುವನೆಂಬ ಬಗೆಗೆ ಹೆಚ್ಚು ಹೆಚ್ಚು ಪುರಾವೆಗಳು ದೊರೆಯುತ್ತವೆ. ಶ್ರೀಕೃಷ್ಣದೇವರಾಯನು ಕ್ರಿ.ಶ.1509ರಲ್ಲಿ ಪಟ್ಟವೇರಿದನು. ಆತನ ಪಟ್ಟಾಭಿಷೇಕದ 500ನೇ ವರ್ಷದ ಆಚರಣೆಯನ್ನು ನಮ್ಮ ತುಳು ಅಕಾಡೆಮಿಯ ಮೂಲಕ ಉಡುಪಿಯಲ್ಲಿ ನಡೆಸಿರುವುದಕ್ಕೆ ನಾವು ತುಂಬಾ ಸಂತೋಷ ಪಡುತ್ತೇವೆ

ಉತ್ಸವ ಆಚರಣೆಗಳು ಕೇವಲ ದುಂದುವೆಚ್ಚ ಎಂದು ಭಾವಿಸುವವರೂ ಇದ್ದಾರೆ. ಆದರೆ ಇಂತಹ ಉತ್ಸವ ಸಮ್ಮೇಳನಗಳಿಂದಲೇ ನಮ್ಮ ಸಂಸ್ಕೃತಿಯ ವಿವಿಧ ಮುಖಗಳು ಎಲ್ಲರಿಗೂ ಪರಿಚಿತವಾಗಲು ಸಾಧ್ಯ. ಮಾಧ್ಯಮಗಳು ಮತ್ತು ಜನ ಸಮುದಾಯಗಳು ನಮ್ಮ ಸಾಂಸ್ಕೃತಿಕ ವೈವಿಧ್ಯತೆಯನ್ನು ಮನಗಾಣದ ಹೊರತು ಹೇಗೆ ತಾನೆ ನಮ್ಮ ಗುರುತನ್ನು ಹಾಗೂ ಹಿರಿತನವನ್ನು ಉಳಿದವರಿಗೆ ತಿಳಿಸಲು ಸಾಧ್ಯ. ಹಾಗೆಂದೇ ತುಳು ಅಕಾಡೆಮಿಯು ವಿಶಿಷ್ಟ ರೀತಿಯಲ್ಲಿ ಸಂಘಟಿಸಿದ ವಿವಿಧ ಉತ್ಸವಗಳಲ್ಲಿ ಇದೂ ಒಂದು. ಆದರೆ ಉತ್ಸವಗಳು ಬರೇ ವಿಜೃಂಭಣೆಯ ಆಚರಣೆಗಳಾಗಿ ಅಳಿದು ಹೋಗಬಾರದು ಎನ್ನುವ ಕಾಳಜಿ ನಮ್ಮೆಲ್ಲರಲ್ಲೂ ಇದೆ. ಕೃಷ್ಣದೇವರಾಯನ ಸಾಧನೆ, ಕೊಡುಗೆ ಹಾಗೂ ಶ್ರೇಷ್ಠತೆಯನ್ನು ನೆನಪಿಸಿಕೊಳ್ಳುವುದರ ಜೊತೆಗೆ ಅವುಗಳನ್ನು ಇಂದಿನ ಕಾಲದಲ್ಲಿ ಮತ್ತೊಮ್ಮೆ ವಿಮರ್ಶಿಸುವ ಮತ್ತು ಆ ಮೂಲಕ ಮರುಮೌಲ್ಯ ಮಾಪನ ಮಾಡುವ ಪ್ರಯತ್ನವನ್ನು ಈ ಉತ್ಸವವು ತನ್ನ ವಿಚಾರ ಸಂಕಿರಣದ ಮೂಲಕ ನೆರವೇರಿಸಿದೆ ಎಂದರೆ ತಪ್ಪಾಗಲಾರದು.

ವಿಜಯನಗರದ ಕಾಲದ ಆಳ್ವಿಕೆ, ಆಕ್ರಮಣಗಳು ಜನಜೀವನ ವ್ಯಾಪಾರ ಇನ್ನೂ ಮುಂತಾಗಿ ಅನೇಕ ವಿಷಯಗಳ ಬಗ್ಗೆ ವಿಷಯ ತಜ್ಞರು ಪ್ರಬಂಧಗಳನ್ನು ಮಂಡಿಸಿದ್ದಾರೆ. ಈ ಪ್ರಬಂಧಗಳಲ್ಲಿ ಅವರು ತಮ್ಮ ದೃಷ್ಟಿಕೋನದಿಂದ ಒಂದು ಸಾಮ್ರಾಜ್ಯದ ಇಂದಿನ ಪ್ರಸ್ತುತತೆಯ ಬಗ್ಗೆ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಅವುಗಳನ್ನು ಗಮನಿಸಿದಾಗ ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಸಮಗ್ರ ಚಿತ್ರಣ ನಮಗೆ ದೊರೆಯುತ್ತದೆಂದು ನಾನು ಭಾವಿಸಿದ್ದೇನೆ.

ಈ ಚಿಂತಕರ ಅಭಿಪ್ರಾಯ ಏಕರೂಪಿಯಾಗಿಲ್ಲ ಎನ್ನುವುದು ಒಂದು ವಿಶೇಷವೇ. ಆ ಮೂಲಕವೇ ವಿಚಾರ ಸಂಕಿರಣಕ್ಕೆ ಕಳೆ ಬಂದಿತೆನ್ನುವುದೂ ಹಾಗೂ ಚಿಂತನ ಮಂಥನಕ್ಕೆ ಅವಕಾಶ ವಿದೆಯೆನ್ನುವುದೂ ಸತ್ಯ. ಆದುದರಿಂದಲೇ ಆ ಪ್ರಬಂಧಗಳ ಸಂಕಲನವನ್ನು ಪ್ರಕಟಿಸಲು ಅಕಾಡೆಮಿ ನಿರ್ಧರಿಸಿದೆ. ಲೇಖಕರು ತಮ್ಮ ಪ್ರಬಂಧಗಳಲ್ಲಿ ನೀಡಿದ ಅಭಿಪ್ರಾಯಗಳು ಅವರ ವೈಯ್ಯಕ್ತಿಕ ಅಭಿಪ್ರಾಯಗಳಾಗಿವೆ. ಅವರ ಅಭಿಪ್ರಾಯಗಳಿಗೂ ಅಕಾಡೆಮಿಗೂ ಯಾವುದೇ ಸಂಬಂಧವಿಲ್ಲವೆಂಬುದನ್ನು ಓದುಗರು ಗಮನಿಸಿಕೊಳ್ಳಬೇಕು.

ಉತ್ಸವಕಾಲದ ವಿಚಾರ ಸಂಕಿರಣದ ಚಿಂತನ ಮಂಥನವು ಮುಂದುವರೆಯಲಿ ಹಾಗೂ ಇನ್ನಷ್ಟು ಮಂದಿ ಈ ಚಿಂತನೆಯಲ್ಲಿ ಪಾಲು ಪಡೆಯಲಿ ಎನ್ನುವುದೇ ಈ ಪ್ರಕಟಣೆಯ ಉದ್ದೇಶ. ಉಡುಪಿಯಲ್ಲಿ ನಡೆಸಿದ ಶ್ರೀಕೃಷ್ಣ ದೇವರಾಯನ 500ನೇ ವರ್ಷದ ಆಚರಣೆಯ ಸಮಾರಂಭದ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ ಮಾಡಿದ ಎಲ್ಲಾ ವಿದ್ವಾಂಸರುಗಳಿಗೂ, ಪ್ರಬಂಧಗಳನ್ನು ಸಂಪಾದಿಸಿ, ಪರಿಷ್ಕರಿಸಿ, ಗ್ರಂಥ ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತುಕೊಂಡು ಸಾಧನೆ ನಡೆಸಿದ ಅಕಾಡೆಮಿ ಸದಸ್ಯ ಡಾ. ದುಗ್ಗಪ್ಪ ಕಜೆಕಾರ್ ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಅಂದವಾಗಿ ಈ ಕೃತಿಯನ್ನು ಮುದ್ರಿಸಿ ಕೊಟ್ಟ ಫೈನ್ ಪ್ರಿಂಟ್ಸ್ ಇವರಿಗೂ ಅಭಿನಂದನೆಗಳು. ಈ ನಿಟ್ಟಿನಲ್ಲಿ ಸಹಕರಿಸಿದ ಎಲ್ಲರನ್ನು ನೆನಪಿಸಿಕೊಳ್ಳುತ್ತಾ, ಈ ಕೃತಿಯನ್ನು ನಿಮ್ಮ ಮುಂದಿಡುತ್ತಿದ್ದೇವೆ.

–ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್,
ಅಧ್ಯಕ್ಷರು,
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಸಂಪಾದಕೀಯ ....

ಶ್ರೀ ಕೃಷ್ಣದೇವರಾಯನಿಗೂ ತುಳುನಾಡಿಗೂ ಇರುವ ಸಂಬಂಧವನ್ನು ಇತಿಹಾಸ ಸಂಶೋಧಕರು ತಮ್ಮದೇ ದೃಷ್ಟಿಕೋನದಲ್ಲಿ ವಿಶ್ಲೇಷಿಸಿರುವುದೇ ತುಳುವರಲ್ಲಿ ಅವನ ಕುರಿತು ಆಸಕ್ತಿ ಹುಟ್ಟಲು ಕಾರಣವಾಯಿತೆಂದರೆ ಅತಿಶಯೋಕ್ತಿಯಲ್ಲ. ಅದಕ್ಕಿಂತಲೂ ಮಿಗಿಲಾಗಿ ಕೃಷ್ಣದೇವರಾಯನ ಆಡಳಿತಾವಧಿಯಲ್ಲಿ ಆದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳು ಸಮಸ್ತ ಕನ್ನಡಿಗರೂ ಅವನನ್ನು ಸ್ಮರಿಸುವಂತೆ ಮಾಡಿದೆ. ಕರ್ನಾಟಕ ಸರಕಾರವು ವಿಶಿಷ್ಟ ರೀತಿಯಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ವರ್ದಂತಿಯನ್ನು ಆಚರಿಸದ್ದನ್ನು ಇಲ್ಲಿ ನೆನಪಿಸಬಹುದು. ಅತ್ಯಂತ ಕುತೂಹಲಕಾರಿ ಅಂಶವೆಂದರೆ ಕೃಷ್ಣದೇವರಾಯನ ಬಗೆಗಿನ ಸಮಕಾಲೀನ ಮಾಹಿತಿ ಪಾಶ್ಚಾತ್ಯ ಪ್ರವಾಸಿಗರಿಂದ ಹಾಗೂ ಶಿಲಾ ಶಾಸನಗಳಿಂದಲೇ ದೊರೆತಿರುವುದು. ಈ ಅರಸನ ವ್ಯಕ್ತಿತ್ವದ ಬಗೆಗಿನ ಎಲ್ಲಾ ದಾಖಲೆಗಳೂ ಕೂಡ ಅವನೊಬ್ಬ ಅಸಾಮಾನ್ಯ ಆಡಳಿತಗಾರ ಮಾತ್ರವಲ್ಲ ಅಪ್ರತಿಮ ದಂಡನಾಯಕ ಕೂಡ ಎಂದು ಉಲ್ಲೇಖಿಸಿವೆ.

ಕೃಷ್ಣದೇವರಾಯನ ಕಾಲದಲ್ಲಿ ಸಾಹಿತ್ಯ ಮತ್ತು ಕಲೆಗೆ ವಿಶೇಷ ಮಹತ್ವವಿತ್ತೆಂಬುದು ಹೊಸದಾಗಿ ತಿಳಿದುಕೊಳ್ಳಬೇಕಾದ ವಿಷಯವೇನಲ್ಲ. ಹೊಯ್ಸಳ ಶೈಲಿಯಲ್ಲಿರುವ ಹಂಪಿಯ ವಿಠಲ ದೇವಾಲಯವು ಈತನ ಕಲಾಸಕ್ತಿಯನ್ನು ಬಿಂಬಿಸಿದರೆ, ಕೃಷ್ಣದೇವರಾಯ ತಾನೇ ಸ್ವತಃ ತೆಲುಗಿನಲ್ಲಿ ಬರೆದಿರುವ 'ಆಮುಕ್ತಮಾಲ್ಯದಾ' ಕೃತಿಯು ಆತನ ಸಾಹಿತ್ಯ ಪ್ರೇಮ ಮತ್ತು ಪ್ರತಿಭೆಯನ್ನು ಪ್ರತಿಫಲಿಸುತ್ತದೆ. ಅವನ ನೇತೃತ್ವದಲ್ಲಿ ಕನ್ನಡ, ತೆಲುಗು, ತಮಿಳು ಹಾಗೂ ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ಕೃಷಿ ನಡೆಯುತ್ತಿತ್ತು ಎನ್ನುವುದಕ್ಕೆ ಗ್ರಂಥಗಳು ಸಾಕ್ಷಿಯಾಗಿವೆ. ಕೃಷ್ಣದೇವರಾಯನ ಬಗ್ಗೆ ಮುಸ್ಲಿಮರನ್ನು ಯುದ್ಧದಲ್ಲಿ ಸದೆಬಡಿದ ಆರೋಪಗಳಿದ್ದರೂ ಪರಧರ್ಮ ಸಹಿಷ್ಣುವಾಗಿ ಎಲ್ಲ ವರ್ಗದವರನ್ನೂ ಸಮಾನತೆಯಿಂದ ಹಾಗೂ ಪ್ರೀತಿಯಿಂದ ಕಾಣುತ್ತಿದ್ದ ಎನ್ನುವುದು ಇತಿಹಾಸದಿಂದ ತಿಳಿಯಬಹುದಾಗಿದೆ.

ಇಂತಹ ಮೇರು ವ್ಯಕ್ತಿತ್ವದ ಕೃಷ್ಣದೇವರಾಯನನ್ನು ತುಳುವ ಎಂದುಕೊಳ್ಳಲು ತುಳುವರು ಹೆಮ್ಮೆಪಡುವುದರಲ್ಲಿ ತಪ್ಪಿಲ್ಲ. ತುಳುನಾಡಿನ ಅಂದಿನ ರಾಜಧಾನಿ ಎನಿಸಿದ್ದ ಬಾರ್ಕೂರಿನಲ್ಲಿ ಕೃಷ್ಣ ದೇವರಾಯನ ಆಡಳಿತಕ್ಕೆ ಸಂಬಂಧಿಸಿದ ಕುರುಹುಗಳಿವೆ. ಈ

ಕಾರಣಕ್ಕಾಗಿಯೇ ಕೃಷ್ಣದೇವರಾಯನ ಪಟ್ಟಾಭಿಷೇಕ 500ನೇ ವರ್ಷವನ್ನು ಬಾರ್ಕೂರಿನಲ್ಲಿ ಆಚರಿಸಲು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ನಿರ್ಧರಿಸಿತ್ತು. ಆದರೆ ತಾಂತ್ರಿಕ ಕಾರಣಗಳಿಗೋಸ್ಕರ ಉತ್ಸವವನ್ನು ಉಡುಪಿಗೆ ಸ್ಥಳಾಂತರಿಸಬೇಕಾಯಿತು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಕಳೆದ 2010 ಮೇ ತಿಂಗಳಿನಲ್ಲಿ ಉಡುಪಿಯಲ್ಲಿ ಕೃಷ್ಣದೇವರಾಯನ ಪಟ್ಟಾಭಿಷೇಕ ಮಹೋತ್ಸವದ 500ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಿತೆನ್ನಲು ಸಂತೋಷವಾಗುತ್ತಿದೆ. ಈ ಶುಭಾವಸರದಲ್ಲಿ ಮಂಡನೆಯಾದ ವಿಚಾರಗೋಷ್ಠಿಗಳ ಪ್ರಬಂಧಗಳನ್ನು ಸಂಪಾದಿಸಿ ಪ್ರಕಟಿಸುತ್ತಿದ್ದೇವೆ. ಇದರ ಉದ್ದೇಶ ಸಮಕಾಲೀನ ಶಿಕ್ಷಿತ ಸಮುದಾಯ ಕೃಷ್ಣದೇವರಾಯನ ಕುರಿತು ಮತ್ತಷ್ಟು ಜ್ಞಾನ ಗಳಿಸಲಿ ಎನ್ನುವುದು. ಜೊತೆಗೆ ತೌಳವ ಕೃಷ್ಣದೇವರಾಯನ ಕುರಿತ ಸಂಶೋಧನೆಯೂ ಇಂದಿನ ಅಗತ್ಯ. ಯುವ ಪೀಳಿಗೆಗೆ ಈ ಕಿರು ಹೊತ್ತಿಗೆಯು ಸಂಶೋಧನಾ ಸ್ಫೂರ್ತಿಯಾಗಬಹುದೆಂಬುದು ನಮ್ಮ ಅನಿಸಿಕೆ.

ಇಲ್ಲಿರುವ ಲೇಖನಗಳು ಓದುಗರಿಗೆ ಆಸಕ್ತಿದಾಯಕ ಬರಹಗಳಾಗುವುದರಲ್ಲಿ ಎರಡು ಮಾತಿಲ್ಲ. ಮೊದಲನೆಯದಾಗಿ ಪ್ರಕಟಣಾ ಯೋಗ್ಯವಾದ ಎಂಟು ಪ್ರಬಂಧಗಳು ಎಂಟು ವಿಭಿನ್ನ ದೃಷ್ಟಿಕೋನಗಳಿಂದ ಹೊರ ಹೊರಮ್ಮಿವೆ. ಎರಡನೆಯದಾಗಿ ಪ್ರಬಂಧಗಳು ಇತಿಹಾಸದ ನಿರೂಪಣೆಗಳಾಗದೆ ವೈಚಾರಿಕ ಹಾಗೂ ಸಂಶೋಧನಾ ನೆಲೆಗಟ್ಟನ್ನು ಹೊಂದಿವೆ. ಕುಪ್ಪಂ ದ್ರಾವಿಡ ವಿಶ್ವವಿದ್ಯಾನಿಲಯದ ಡಾ. ಅರವಿಂದ ಕುಮಾರ್ ಅವರ ಪ್ರಬಂಧವು ಆಂಗ್ಲ ಭಷೆಯಲ್ಲಿದ್ದು ತುಳು, ಕನ್ನಡಿಗರು ಮಾತ್ರವಲ್ಲದೆ ಅನ್ಯ ಭಾಷಿಗರೂ ಕೃಷ್ಣದೇವರಾಯನ ಕುರಿತು ತಿಳಿಯಲೆಂಬ ಉದ್ದೇಶದಿಂದ ಪ್ರಬಂಧವನ್ನು ಅದೇ ಭಾಷೆಯಲ್ಲಿ ಪ್ರಕಟಿಸಲಾಗಿದೆ. ಈ ಸಂಕಲನದ ಪ್ರಕಟಣೆಯ ಕುರಿತು ತಡವಾಗಿ ನಿರ್ಧರಿಸಿದ್ದರಿಂದ ಪ್ರಬಂಧಕಾರರಿಗೆ ಕೊಂಚ ಅನಾನುಕೂಲವಾಗಿದೆ. ನಮ್ಮ ಕೋರಿಕೆಯಂತೆ ಪ್ರಬಂಧಗಳನ್ನು ಕಳುಹಿಸಿಕೊಟ್ಟ ಎಲ್ಲಾ ವಿದ್ವಾಂಸರುಗಳಿಗೆ, ಇದನ್ನು ಸಂಪಾದಿಸಲು ಸೂಚಿಸಿ ಪ್ರಕಟಣೆಗೆ ಸಹಕರಿಸಿದ ಅಕಾಡೆಮಿಯ ಅಧ್ಯಕ್ಷರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರಿಗೆ, ಕೃತಿ ಪ್ರಕಟಣೆಗೆ ಆಡಳಿತಾತ್ಮಕ ಸಹಕಾರ ನೀಡಿದ ರಿಜಿಸ್ಟ್ರಾರ್ ಚಂದ್ರಹಾಸ ರೈಯವರಿಗೆ ಅಂದವಾಗಿ ಮುದ್ರಿಸಿದ ಫೈನ್ ಪ್ರಿಂಟ್ಸ್‌ರವರಿಗೆ ಹಾಗೂ ಈ ಲೇಖನಗಳನ್ನು ಓದಿ ತುಳು ಭಾಷೆ ಹಾಗೂ ಸಂಸ್ಕೃತಿಯ ಏಳಿಗೆಗೆ ಕೈ ಜೋಡಿಸುವ ತಮಗೆ ಹೃತ್ಪೂರ್ವಕ ಕೃತಜ್ಞತೆಗಳು.

ಡಾ. ದುಗ್ಗಪ್ಪ ಕಜೆಕಾರ್

ವಿಜಯನಗರ ಕಾಲದ ಸಾಂಸ್ಕೃತಿಕ ತುಳುನಾಡು

ಪ್ರೊ. ಅಮೃತ ಸೋಮೇಶ್ವರ

ಕರ್ನಾಟಕದಲ್ಲಿ ಅರಸೊತ್ತಿಗೆ ಮಾಡಿದ ಕದಂಬ, ಚಾಲುಕ್ಯ, ಹೊಯ್ಸಳ ಮೊದಲಾದ ಪ್ರಮುಖವಾದ ಎಲ್ಲ ರಾಜವಂಶಗಳೂ ನಾನಾ ಕಾರ್ಯಗಳಿಂದ ಕರುನಾಡಾದ ತುಳುನಾಡನ್ನು ತಮ್ಮ ಅಂಕಿತಕ್ಕೆ ಒಳಪಡಿಸಿದವುಗಳೇ ಆಗಿವೆ. ಇಲ್ಲಿನ ವಿವಿಧ ಸಂಪನ್ಮೂಲಗಳಲ್ಲದೆ ,ಸಾಗರೋತ್ತರ ವ್ಯಾಪಾರ ವ್ಯವಹಾರಗಳಿಗೆ ಅನುಕೂಲವಾದ ಹಲವು ರೇವು- ಪಟ್ಟಣಗಳು ತುಳುನಾಡಿನಲ್ಲಿದ್ದುದೂ ಒಂದು ಮುಖ್ಯ ಕಾರಣವಾಗಿದೆ. ಬೇರೆ ಬೇರೆ ಅರಸೊತ್ತಿಗೆಗಳ ಆಡಳಿತ ಪ್ರಭಾವವು ಆಯಾ ಕಾಲದಲ್ಲಿ ಇಲ್ಲಿ ತಕ್ಕಷ್ಟು ಕಂಡು ಬಂದಿದ್ದರೂ ವಿಜಯನಗರ ಸಂಸ್ಥಾನದ ಆಳ್ವಿಕೆಯ ಕಾಲದ ಪ್ರಭಾವ ತುಂಬ ಪ್ರಬಲವಾಗಿತ್ತು ಎನ್ನಬಹುದು.

ಕ್ರಿ.ಶ. 1336ರಲ್ಲಿ ಸ್ಥಾಪಿತವಾದ ವಿಜಯನಗರದ ಪ್ರಭುತ್ವವು ಅತ್ಯಂತ ಆಶ್ಚರ್ಯಕರ ವೇಗದಲ್ಲಿ ಹಾಗೂ ದೊಡ್ಡ ಪ್ರಮಾಣದಲ್ಲಿ ಸಾಮ್ರಾಜ್ಯವಾಗಿ ಬೆಳೆದು ನಿಂತುದು ಸುವಿದಿತ. ವಿಜಯನಗರ ಸಾಮ್ರಾಜ್ಯದೊಂದಿಗೆ 1345ರಲ್ಲಿ ಸೇರ್ಪಡೆಗೊಂಡ ತುಳುನಾಡು ಸುಮಾರು ಇನ್ನೂರೈವತ್ತು ವರ್ಷಗಳ ಕಾಲಾವಧಿಯಲ್ಲಿ ತುಳುನಾಡಿನ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಿ ವಿಶಿಷ್ಟವಾದ ಸಂಚಲನ ಉಂಟಾಯಿತೆಂಬುದು ಸ್ಪಷ್ಟ. ಆ ಮೊದಲಿನ ರಾಜವಂಶಗಳ ಕಾಲದ ಶಾಸನಗಳಿಗಿಂತ ಅದೆಷ್ಟೋ ಹೆಚ್ಚು ಸಂಖ್ಯೆಯ ಇಲ್ಲಿನ ಶಾಸನಗಳು ವಿಜಯನಗರದ ಬೇರೆ ಬೇರೆ ಅರಸರಕಾಲದ್ದಾಗಿದೆ. ಇವುಗಳ ಸಂಖ್ಯೆಯೂ, ಶಾಸನಗಳ ವಿವರ ವೈವಿಧ್ಯವೂ, ಜಯನಗರ ಪ್ರಭುತ್ವವು ತುಳುನಾಡಿನ ಆಗುಹೋಗುಗಳ ಬಗೆಗೆ ವಹಿಸಿದ್ದ ಕಾಳಜಿಯನ್ನೂ ತುಳು ನಾಡಿಗೆ ನೀಡಿದ್ದ ಪ್ರಾಶಸ್ತ್ಯವನ್ನೂ ವಿಷದ ಪಡಿಸುತ್ತವೆ.

ಅನೇಕ ಶಾಸನಗಳು ದೇವಸ್ಥಾನ ಕೇಂದ್ರಿತವಾಗಿದ್ದು, ಜೀರ್ಣೋದ್ಧಾರ, ನಿರಂತರ ದೇವ ಸೇವಾ ವ್ಯವಸ್ಥೆ, ಅಗ್ರಹಾರ, ಬ್ರಾಹ್ಮಣಭೋಜನಾದಿಗಳಿಗೆ ಧಾರಾಳ ದಾನವಿತ್ತುದು ತಿಳಿದು ಬರುತ್ತದೆ. ದೇವಸ್ಥಾನಗಳಲ್ಲಿ ನರ್ತನ ಸೇವೆ ಮಾಡುತ್ತಿದ್ದ ದೇವದಾಸಿಯರಿಗೂ (ಕೂತಾಡುವ ನಂಗೆಯರು) ಸಾಕಷ್ಟು ಪ್ರೋತ್ಸಾಹವಿತ್ತು.

ವ್ಯಾಪಾರ ಹಾಗೂ ವಿವಿಧ ವಾಣಿಜ್ಯ ಸಂಸ್ಥೆಗಳಿಗೆ ಸಂಬಂಧಿಸಿದ ಶಾಸನಗಳು ಆರ್ಥಿಕ ವ್ಯವಹಾರಗಳ ಕುರಿತಾದ ಎಚ್ಚರವನ್ನು ಸೂಚಿಸುತ್ತದೆ.

ಬಹುಮಟ್ಟಿಗೆ ತುಳುನಾಡಿನಲ್ಲಿ ಧಾರ್ಮಿಕ ಸಮನ್ವಯ ಹಾಗೂ ಸಾಮಾಜಿಕ ಸಾಮರಸ್ಯ ಊರ್ಜಿತವಾಗಿದ್ದರೂ ಒಮ್ಮೊಮ್ಮೆ ವಿವಿಧ ಕಾರಣಗಳಿಂದ ಕಲಹಗಳು ಏರ್ಪಟ್ಟು, ಸಾಮರಸ್ಯ ಕದಡಿ ಹೋಗುವ ಪ್ರಸಂಗಗಳೂ ಜರಗಿದ್ದಿವೆ. ಅಂಥ ವೇಳೆ ಬೇರೆ ಬೇರೆ ಪಂಗ್ಡಡಗಳೊಳಗೆ ಶರ್ತಸಹಿತ ಸಂಧಾನವೇರ್ಪಡಿಸಿ ಶಾಂತಿ ನೆಲೆಸುವಂತೆ ಮಾಡಿದ ವಿಚಾರಗಳೂ ಶಾಸನೋಕ್ತವಾಗಿವೆ. ಸಾಮಾನ್ಯವಾಗಿ ಶಾಸನಗಳನ್ನು ದೇವರ ಅಥವಾ ದೈವಗಳ ಸಾಕ್ಷಿಯೊಂದಿಗೆ ಬರೆಯಿಸಲಾಗಿದೆ.

ಆದರೂ, ಜನಸಾಮಾನ್ಯರ ಬದುಕಿನ ಬಗೆಗೆ ಶಾಸನಗಳೂ,ಇತಿಹಾಸವೂ ಬಹುತೇಕ ಮೌನ ವಹಿಸಿದೆ. ಒಂದಿಷ್ಟಾದರೂ ಅಂಥ ವಿವರಗಳು ತುಳುನಾಡಿನ ಜನಪದ ಸಾಹಿತ್ಯದಲ್ಲಿ, ಮುಖ್ಯವಾಗಿ ಪಾಡ್ದನಗಳಲ್ಲಿ ದೊರಕುತ್ತವೆ. ಕುಪ್ಪೆ ಪಂಜುರ್ಲಿ ಪಾಡ್ದನವೊಂದರಲ್ಲಿ ಕಾರ್ಕಳದ ಭೈರವರಸನ ಪ್ರಜಾಪೀಡೆಯ ಮಾರ್ಮಿಕ ವಿವರವಿದೆ. ಪ್ರಜೆಗಳು ಸಹಿಸಲಾಗದೆ ಕನ್ನಡ ಕರ್ತು ಗಳಿಗೆ ದೂರು ನೀಡಿದ ವಿಚಾರವೂ ಸೂಚಿತವಾಗಿದೆ. ಈ ವಿಚಾರಕ್ಕೆ ಪೂರಕವಾದ ಮಾಹಿತಿಯನ್ನು ಇತಿಹಾಸವು ಒದಗಿಸುತ್ತದೆ. ಕೃಷ್ಣದೇವರಾಯನು ವಿಜಯನಗರ ರಾಜ್ಯದ ಸಾಮ್ರಾಟನಾಗಿದ್ದ ಕಾಲದಲ್ಲಿ ಕಾರ್ಕಳದ ಭೈರವರಸನಾದ 5ನೇ ಭೈರವ (2ನೇ ವೀರ ಭೈರರಸ ಒಡೆಯ) ನು ಅವನನ್ನು ಪ್ರತಿಭಟಿಸುವ ಸಾಹಸ ಮಾಡುತ್ತವೆ. ಆಗ ಕೃಷ್ಣದೇವರಾಯನು ತಾನೇ ಸೇನೆಯ ನಾಯಕತ್ವ ವಹಿಸಿ, ತುಳುನಾಡಿನಮೇಲೆ ದಂಡೆತ್ತಿ ಬಂದು ಯುದ್ಧದಲ್ಲಿ ಭೈರವರಸನನ್ನು ಸೋಲಿಸಿ ರಾಜ್ಯದಿಂದ ಓಡಿಸುತ್ತಾನೆ. ರಾಜ್ಯವನ್ನು ಕಳೆದುಕೊಂಡ ಭೈರವರಸನು ವಿಜಯನಗರದ ಸೈನ್ಯವು ಹಿಂದಕ್ಕೆ ಹೊರಟು ಹೋದರೆ ಕಳಸದ ಶ್ರೀ ಕಳಸನಾಥ ದೇವಸ್ಥಾನದಲ್ಲಿ ಜೀರ್ಣೋದ್ಧಾರ ಮಾಡಿಸುವುದಾಗಿ ಬೇಡಿಕೊಳ್ಳುತ್ತಾನೆ.ಈ ವಿಚಾರವು ಕ್ರಿ.ಶ. 1516 ರ ಕಳಸ ಶಾಸನದಲ್ಲಿದೆ (ಡಾ. ಬಿ.ಎ. ವಿವೇಕ ರೈ – ತುಳು ಜಾನಪದ ಸಾಹಿತ್ಯ – ಪುಟ 48 – 1985)

ಜನರ ಮೊರೆ ಕೇಳಿ ಭೈರವರಸನನ್ನು ಶಿಕ್ಷಿಸ ಬಂದ ಮೇಲಿನ ರಾಜ್ಯದ ಕನ್ನಡ ಅರಸುವಿನ ವೃತ್ತಾಂತ ಒಡ್ತೆ ಪಂಜುರ್ಲಿ ಯ ಪಾಡ್ದನದಲ್ಲೂ ಇದೆ.

ತುಳುನಾಡಿನ ಒಳಗಿನ ಸಾಮಾನ್ಯ ಆಡಳಿತೆಯನ್ನು ಕೆಲವು ತುಂಡರಸರೂ, ಬಲ್ಲಾಳರೂ, ನಿರ್ವಹಿಸುತ್ತಿದ್ದರೂ, ಕೆಲವೊಂದು ಸಂದರ್ಭಗಳಲ್ಲಿ ಮೇಲರಸುಗಳ ಹಸ್ತಕ್ಷೇಪ ಅಥವಾ ನಿಯಂತ್ರಣ ಬೇಕಾಗುತ್ತಿತ್ತು.

ಕಾರ್ಕಳದ ಭೈರವರಸನು ಕೆಲ್ಲತ್ತ ಮಾರ್ನಾಡಿನ ಪ್ರಸಿದ್ಧ ತರುಣ ಶಿಲ್ಪಿ ಬೀರು ಕಲ್ಕುಡನ ಮೂಲಕ ಕಾರ್ಕಳದಲ್ಲಿ ಗೋಮಟೇಶ್ವರನ ವಿಗ್ರಹವನ್ನು ಕೆತ್ತಿಸಿ ನಿಲ್ಲಿಸಿದ ವಿಚಾರ ಕಲ್ಕುಡ-ಕಲ್ಲುರ್ಟಿಯರ ಪಾಡ್ದನಗಳಲ್ಲಿ ಉಕ್ತವಾಗಿದೆ. ಇದೂ ಇತಿಹಾಸ ಪ್ರಸಿದ್ಧ ವಿಚಾರವೇ ಆಗಿದೆ. ಕಾರ್ಕಳದ ವೀರಪಾಂಡ್ಯ ಭೈರರಸ ಒಡೆಯನು ತನ್ನ ಗುರುವಾದ ಲಲಿತಕೀರ್ತಿ ಭಟ್ಟಾರಕರ ಅನುಮೋದನೆಯಂತೆ ಬಂಡೆ ಬೆಟ್ಟದ ಮೇಲೆ ಬಾಹುಬಲಿಯ ವಿಗ್ರಹವನ್ನು ತುಳುನಾಡಿನಲ್ಲಿ ಸರ್ವ ಪ್ರಥಮವಾಗಿ ಕ್ರಿ.ಶ. 1432ರಲ್ಲಿ ಪ್ರತಿಷ್ಠಾಪಿಸಿದ ವಿಚಾರ ಖ್ಯಾತವಾಗಿದೆ. ಈ ಸಮಾರಂಭಕ್ಕೆ ವಿಜಯನಗರದ ಅರಸ 2ನೇ ದೇವರಾಯ ಉಪಸ್ಥಿತನಿದ್ದ. (ದ.ಕ. ಜಿಲ್ಲೆಯ ಪ್ರಾಚೀನ ಇತಿಹಾಸ – ಗಣಪತಿರಾವ್ ಐಗಳ್ ಪುಟ – 217) ಆದರೆ ಜನಪದ ಕವಿಗಳು ಒಂದು ಹೆಜ್ಜೆ ಮುಂದೆ ಹೋಗಿ ಭೈರವರಸನು ಗೋಮಟ ಶಿಲ್ಪಿಯ ಕೈ ಕಾಲುಗಳನ್ನು ಕಡಿಸಿದ. ಕರುಣಾಜನಕ ಕಥೆಯನ್ನು ನಿರೂಪಿಸುತ್ತಾರೆ. ಜನಪದರಿಗೆ ಕಾರ್ಕಳದ ಭೈರವರಸರ ವಿಚಾರದಲ್ಲಿ ಆದರ ಭಾವ ಇರಲಿಲ್ಲವೆನಿಸುತ್ತದೆ. ಇದಕ್ಕೆ ಕೆಲವರು ಅರಸರ ಕ್ರೌರ್ಯವು ಕಾರಣವಾಗಿರಬಹುದು. ಕಾರ್ಕಳದ ಕೈಫಿಯತಿನಲ್ಲೂ ಕಲ್ಕುಡನ ಕೈಕಾಲು ಕಡಿಸಿದ ಉಲ್ಲೇಖವಿದೆ.

ವಿಜಯನಗರದ ಅಧಿಪತ್ಯಕ್ಕೆ ಮೊದಲೇ ತುಳುನಾಡಿನಲ್ಲಿ ಸಾಕಷ್ಟು ದೇವಸ್ಥಾನಗಳೂ, ದೈವಾರಾಧನೆಯ ನೆಲೆಗಳೂ ಇದ್ದವಾದರೂ ವಿಜಯನಗದರಸರ ಕಾಲದಲ್ಲಿ ಧಾರ್ಮಿಕ ಕ್ಷೇತ್ರಗಳಿಗೆ ಸಂದ ಪ್ರಾಶಸ್ತ್ಯ ಶಾಸನಗಳಿಂದಲೇ ಸುವ್ಯಕ್ತವಾಗುತ್ತದೆ. ಶಿವ, ವಿಷ್ಣು, ದೇವಿ, ಗಣಪತಿ, ಸುಬ್ರಮಣ್ಯ ಮೊದಲಾದ ದೇವರುಗಳ ನಾನಾ ನಾಮಾಂತರಗಳ ದೇಗುಲಗಳು ವಿಪುಲ ಸಂಖ್ಯೆಯಲ್ಲಿ ನಿರ್ಮಾಣ, ಪುನರ್ನಿರ್ಮಾಣಗೊಂಡುದನ್ನು ಗಮನಿಸಬಹುದು. ಎಲ್ಲ ಪಂಥಗಳ ಆರಾಧನಾಲಯಗಳಿಗೂ ವಿಜಯನಗರದ ದೊರೆಗಳು ಪ್ರೋತ್ಸಾಹವಿತ್ತುದು ಧರ್ಮ ಸಮನ್ವಯದೃಷ್ಟಿಯಿಂದ ಶ್ಲಾಘ್ಯವಾಗಿದೆ. ಕೆಲವು ದೇವಸ್ಥಾನಗಳ ಪುನರ್ವ್ಯವಸ್ಥೆಯ ಮಾರ್ಗದರ್ಶನದ ಸಲುವಾಗಿ ವಿಜಯನಗರದ ಪ್ರಭಾವಿ ಗುರುಗಳಾದ ಕ್ರಿಯಾ

ಶಕ್ತಿದೇವ ಒಡೆಯರಂಥ ಮಹಾನುಭಾವರು ಸ್ವತ: ತಾವೇ ತುಳುನಾಡಿಗೆ ಬಂದ ವಿಚಾರ ಶಾಸನಗಳಲ್ಲಿದೆ. ಈ ಆಸಕ್ತಿ ವಿಶೇಷವಾದುದಾಗಿದೆ.

ಒಂದು ಪ್ರದೇಶದ ಜನಪ್ರಿಯ ದೇವರನ್ನು ಇನ್ನೊಂದು ಪ್ರದೇಶದ ಜನ ಆದರಿಸಿ ಆರಾಧಿಸುವ ವಿಚಾರ ಅಲ್ಲಲ್ಲಿ ಪ್ರಚಲಿತವಿದೆ. ತುಳುನಾಡಿನಲ್ಲೂ ಅಂಥ ಉದಾಹರಣೆಗಳಿವೆ. ವಿಜಯನಗರದ ರಾಜರು ವಿಶೇಷ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದ ಆಂಧ್ರದ ತಿರುಪತಿಯ ದೇವರ ವಿಚಾರವಾಗಿ ತುಳುನಾಡಿನ ಹೆಚ್ಚಿನ ಮಂದಿಗೆ ಭಕ್ತಿ, ನಿಷ್ಠೆ ಏರ್ಪಟ್ಟದ್ದನ್ನೂ, ಅದರ ಸಂಕೇತವಾಗಿ ಮುಡಿಪು (ಮೀಸಲು ಹಣ) ಕಟ್ಟುವ ಪದ್ಧತಿ ಪ್ರಾರಂಭವಾದುದನ್ನು ಗಮನಿಸಬಹುದು. ತುಳುನಾಡಿನ ಧಾರ್ಮಿಕ ನಂಬಿಕೆಯಲ್ಲಿ ತಿರುಪತಿಯ ಮುಡಿಪು ಹಾಸು ಹೊಕ್ಕಾಗಿ ಬಿಟ್ಟಿದೆ. ದೈವಾರಾಧನೆಯಿಂದ ಭಿನ್ನವಾದ ಕಲಾಪವಾದರೂ, ಈ ಮುಡಿಪು ಕಟ್ಟುವ ಕ್ರಿಯೆ ದೈವಾರಾಧಕರಿಗೆ ಇಷ್ಟಕರವಾದ ವಿಷಯವಾಗಿದೆ. ಈ ಪದ್ಧತಿ ವಿಜಯನಗರದ ಕಾಲದಲ್ಲಿ ತೊಡಗಿರಬೇಕು. ಈ ಪದ್ಧತಿ ತುಳುನಾಡಿನ ಅನೇಕ ಸಮಾಜಗಳ ಪುರಾತನ ಮೂಲ ಮನೆಗಳಲ್ಲಿ ಈಗಲೂ ನಡೆದುಕೊಂಡು ಬರುತ್ತದೆ. ಮುಡಿಪನ್ನು ವಿಧಿಪೂರ್ವಕವಾಗಿ ತಿರುಪತಿಗೆ ಒಯ್ಯುವ ಕ್ರಮವು ಮಹತ್ವದ್ದಾಗಿದೆ. ಹಿಂದೆ ಸುರಕ್ಷತೆಯ ದೃಷ್ಟಿಯಿಂದ ಗುಂಪಾಗಿ ಗೋವಿಂದ ಘೋಷದೊಂದಿಗೆ ತಿರುಪತಿಗೆ ಯಾತ್ರೆ ಹೊರಡುತ್ತಿದ್ದುದುಂಟು.

ಮುಡಿಪು ಸಂಬಂಧವಾಗಿ ಏರ್ಪಡಿಸುವ ಹರಿಸೇವೆ, ಪಾನಕ ಪೂಜೆಗಳಂಥ ಸೇವೆಗಳ ವೇಳೆ ಸ್ವಾಮಿಯ ದರ್ಶನ ಬರಿಸುವುದಿದೆ. ಈ ದರ್ಶನ ಸೇವೆಯನ್ನು ದಾಸಯ್ಯ ಎಂಬ ಪಂಗಡದವರು ನಿರ್ವಹಿಸುತ್ತಾರೆ. ಇಲ್ಲಿ ವಿಶೇಷವೆಂದರೆ, ದರ್ಶನದ ದಾಸಯ್ಯನ ಮೇಲೆ ಆವೇಶಗೊಳ್ಳುವ ಸ್ವಾಮಿ ಕಾಳ ಭೈರವನಾಗಿದ್ದಾನೆ! ಕಾಳಭೈರವನು ತಿರುಪತಿ ವೆಂಕಟರಮಣನ ಕಿಂಕರನೆಂದು ಹೇಳಲಾಗಿದ್ದರೂ, ಒಂದು ರೀತಿಯಲ್ಲಿ ಕಾಳಭೈರವನೇ ವೆಂಕಟರಮಣನ ಮೂಲ ಸ್ವರೂಪವೆಂದು ಹೇಳಲು ಕಾರಣಗಳಿವೆ. (ಈ ವಿಚಾರವನ್ನಲ್ಲಿ ವಿಸ್ತರಿಸುವುದಿಲ್ಲ) ತುಳು ನಾಡಿನ ಮುಖ್ಯ ದೈವಗಳು ಒಬ್ಬನಾದ ಮೂಡದಾಯ (ಈತನಿಗೆ ಮುಂಡತ್ತಾಯ, ಮೂಡಂದಾಯ, ಮುಡದೇಯ, ಕಾಳಭೈರವ, ವೈದ್ಯನಾಥ ಇತ್ಯಾದಿ ನಾಮಾಂತರಗಳಿವೆ.) ಕಾಳಭೈರವನ ಅಥವಾ ವೆಂಕಟರಮಣದೇವರ ಭೂತರೂಪವಾಗಿದ್ದಾನೆ. ತಾನು ಕಾಶಿಯಲ್ಲಿ ಕಾಳಭೈರವನೆಂದೂ ತಿರುಪತಿಯಲ್ಲಿ ತ್ಯಾಂಪ (ತಿಮ್ಮಪ್ಪ) ದೇವರೆಂದೂ ಕರೆಯಿಸಿ ಕೊಳ್ಳುತ್ತೇನೆಂದು

ಮೂಡದಾಯನು ತನ್ನ ನುಡಿಗಟ್ಟಿನಲ್ಲಿ ಹೇಳುವುದುಂಟು. ಮೂಡದಾಯ ಮೂಡಂದಾಯ ಎಂದರೆ ಮೂಡುದಿಕ್ಕಿನಿಂದ ಬರುವನೆಂದರ್ಥ. ಈ ದೈವ ಮೂಡು ದಿಕ್ಕಿನಿಂದ ಗಟ್ಟವಿಳದು ಬಂದುದಷ್ಟೆ? ಇಲ್ಲಿ ಮೂಡು ಎಂಬುದಕ್ಕೆ ತಿರುಪತಿಯ ಹೆಸರುಗಳಲ್ಲೊಂದಾದ ಮೂಡಲಗಿರಿ ಎಂಬುದೂ ಹೊಂದುತ್ತದೆ. ಈ ದೈವ ವಿಜಯನಗರಕಾಲದಲ್ಲೆ ಪ್ರಾರಂಭಗೊಂಡದ್ದೆನ್ನಬಹುದು.

ತಿರುಪತಿ ದೇವರ ಹೆಸರಲ್ಲಿ ಕಾಲಿಗೆ ಅಥವಾ ಕೈಗೆ ಬೇಡಿ ಎಂಬ ಬೇಯ ಸರಿಗೆಯನ್ನು ದೇವರ ಸರಿಗೆ ಯಾಗಿ ಒಂದು ಹರಕೆಯ ರೂಪದಲ್ಲಿ ಧರಿಸುವುದುಂಟು, ಇದನ್ನು ಮುಡಿಪಿನ ಜೊತೆಗೆ ತಿರುಪತಿಗೇ ಕಳುಹಿಸಿಕೊಡಬೇಕಾಗುತ್ತದೆ.

ತುಳುನಾಡಿನಲ್ಲಿ ನೂರಾರು ದೈವಗಳಿದ್ದು ಕೆಲವು ಪುರಾತನವಾದುವುಗಳು. ಇನ್ನು ಕೆಲವು ಕಳೆದ 500-600 ವರ್ಷಗಳಲ್ಲಿ ಮೂಡಿಬಂದವುಗಳೆಂದು ಊಹಿಸಲಾಗುತ್ತಿದೆ. ಮನುಷ್ಯ ಮೂಲದ ಕೆಲವು ದೈವಗಳ ಚರಿತ್ರೆ ಬಹಳಷ್ಟು ಪ್ರಾಚೀನಕ್ಕೆ ಸರಿಯುವುದಿಲ್ಲ ಎನ್ನಲಾಗಿದೆ. ನಿರ್ದಿಷ್ಟವಾದ ಕಾಲವನ್ನು ಹೇಳಲಾಗದಿದ್ದರೂ ಹೆಚ್ಚಿನ ಮಾನವ ಮೂಲದ ದೈವಗಳು ಕಳೆದ 500-600 ವರ್ಷಗಳ ಕಾಲಾವಧಿಯಲ್ಲಿ ಉದಯಿಸಿದವುಗಳೆಂದು ಸ್ಥೂಲವಾಗಿ ಊಹಿಸಬಹುದು. ಕೇರಳದ ಅನೇಕ ತೆಯ್ಯಂ ಗಳ ಇತಿಹಾಸವೂ ಇದಕ್ಕೆ ಸುಮಾರಾಗಿ ಸಂವಾದಿಯಾಗುತ್ತದೆ. ವ್ಯಕ್ತಿಗಳು ನಿರ್ದಿಷ್ಟ ಕಾರಣಗಳಿಂದ ದೈವೀಕರಣಗೊಳ್ಳುವ ಪ್ರವೃತ್ತಿ ಕೆಲವು ಕಾಲ ಘಟ್ಟಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ವೀರಗಲ್ಲು, ಸತೀ ಕಲ್ಲುಗಳಿಗೆ ಸಂಬಂಧಿಸಿದ ಶಾಸನಗಳೂ ಸಾಕಷ್ಟು ಬಲಿದಾನಗೊಂಡ ಕೆಲವರು ಕ್ರಮೇಣ ದೈವೀಕರಣಗೊಂಡರೆ ಆಶ್ಚರಯವಿಲ್ಲ.

ವಿಜಯನಗರವು ಈಜಾನಗರವಾಗಿ ಅನೇಕ ಪಾಡ್ದನಗಳಲ್ಲಿ ಉಲ್ಲೇಖಗೊಂಡಿದೆ. ಉದಾ: ಗಟ್ಟದ ಮಿತ್ತ್ ಈಜಾನಗರೊಡು ಕರ್ಮಿನ ಸಾಲೆಡ್ (ಗಟ್ಟದ ಮೇಲೆ ಈಜಾನಗರದಲ್ಲಿ ಕರ್ಮಿನ ಸಾಲೆಯಲ್ಲಿ) – (ಪಂಜುರ್ಲಿ ಪಾಡ್ದನ)

ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಉದಾ: ಕೆಲವರು ಮಹಾನುಭಾವರ ಪ್ರಥಮ ಕ್ಷೌರ ಸಂದರ್ಭದಲ್ಲಿ ಕ್ಷೌರ ಕ್ರಮಕ್ಕಾಗಿ ವಿಜಯನಗರದಿಂದ 'ಬಿನ್ನಾಣಿಗಾರ' ಕ್ಷೌರಿಕರನ್ನು ವಿಶೇಷವಾಗಿ ಕರೆಯಿಸಲಾಗುತ್ತಿತ್ತು ಎಂಬ 'ಅತಿಶಯ' ವಿಷಯವನ್ನು ವಾರ್ದೆಗಳು ನಿರೂಪಿಸುವುದಿದೆ. "ಮೋಣೆದ ಕುಲಿ ಕಳೆಯೆರೆ, ಸಿರಿ ಒದ್ಯರೆ ಗಟ್ಟದ ಮಿತ್ತ್‌ಡ್

ಆಯೆರೆ ನಾಡ್‌ಡ್ ಈಜಾ ನಗರೋಡ್ ಕಿಲೆಸಿಮಗೆ ಬಿನ್ನಾಣಿಗಾರೆ ಉಳ್ಳೆ" (ಮೋರೆಯ ಕಲಿ ಕಳೆಯಲು, ಸಿರಿಯೊದಗಿಸಲು ಗಟ್ಟದ ಮೇಗಡೆ ಆಚೆಗಿನ ಊರಲ್ಲಿ ಈಜಾ ನಗರದಲ್ಲಿ ಕ್ಷೌರಿಕ ಬಿನ್ನಾಣಗಾರ ಇದ್ದಾನೆ – ಅತ್ತಾವರ ದೈಯ್ಯೊಂಗುಳು ಪಾಡ್ದನ) ತೋಡಕ್ಕಿನಾರ ದೈವದ ಪಾಡ್ದನದಲ್ಲೂ ಇದೇ ವಿಚಾರವಿದೆ.

ಕೆಲವೊಂದು ಮಹತ್ವದ ಬೇಟೆಯ ಸಂದರ್ಭಗಳಲ್ಲಿ ಉತ್ತಮ ತಳಿಯ ಬೇಟೆ ನಾಯಿಗಳನ್ನು ಈಜಾನಗರದಿಂದ ತರಿಸಿಕೊಳ್ಳುತ್ತಿದ್ದರೆಂಬ ಹೇಳಿಕೆ ಸ್ವಾರಸ್ಯವಾಗಿದೆ. "ಗಟ್ಟದ ಮಿತ್ತ್‌ಡ್ ಈಜಾನಗರೊಡ್ಡು ಪದ್‌ರಾಡ್ ಕಟ್ಟಿನಾಯಿ, ಪದ್‌ರಾಡ್ ಬುಡು ನಾಯಿ ಕೊಂಡು ಬರೊಡಾಂಡ್" (ಗಟ್ಟದ ಮೇಗಡೆ ಈಜಾನಗರದಿಂದ ಹನ್ನೆರಡು ಕಟ್ಟಿಹಾಕಿದ ನಾಯಿಗಳನ್ನು, ಹನ್ನೆರಡು ಬಿಡುನಾಯಿಗಳನ್ನು ತರಿಸಬೇಕಾಯ್ತು- ಕೋಟಿ ಚೆನ್ನಯ ಪಾಡ್ದನ)

ಕ್ವಚಿತ್ತಾಗಿ ವಿಜಯನಗರವನ್ನು 'ವಿದ್ಯಂನಗರ' ಎಂದೂ ಉಲ್ಲೇಖಿಸಿದ್ದುಂಟು. "ರಾಯೆರೆ ನಾಡ್‌ಡ್ ಗಟ್ಟಂದ ಮಿತ್ತ್ ಗರುಡಂದ ರಾಜ್ಯೊಡು ವಿದ್ಯಂನಗರೊಡು ಕಮಿಕನ್ ಸಾಲೆಡ್ ಉದಿಪನ ಆವೊಂಡೆರ್......" (ರಾಯರ ನಾಡಿನಲ್ಲಿ ಗಟ್ಟದ ಮೇಲೆ ಗರುಡ ರಾಜ್ಯದಲ್ಲಿ ವಿದ್ಯಂನಗರದಲ್ಲಿ ಕಮಿಕನಸಾಲೆಯಲ್ಲಿ ಉದಿಸಿದರು – ಬಲೀಂದ್ರ ಸಂಧಿ)

ಕೆಲವು ಪಾಡ್ದನಗಳಲ್ಲಿ ನಿರ್ದಿಷ್ಟ ಕಾರಣಗಳಿಗಾಗಿ ತಿರುಪತಿಯ ಉಲ್ಲೇಖ ಬರುತ್ತದೆ. ಉದಾ : ಕಲ್ಕುಡ-ಕಲ್ಲುರ್ಟಿ ಪಾಡ್ದನದ ಕೊನೆಯಲ್ಲಿ ಅವಳಿಗಳಾದ ಅವರಿಬ್ಬರೂ ಬಟ್ಟಿಗೆ ಆತ್ಮಾಹುತಿ ಮಾಡಿಕೊಂಡ ಬಳಿಕ ಶುದ್ಧರಾಗುವ ವಿಧಿಯನ್ನು ಪೂರೈಸುವ ಸಲುವಾಗಿ, "ತೆನ್ಕಾಯಿ ಕಾವೇರಿ ಮಾಯೆರ್ ತಗೆತಂಗಡಿ ಬಡಕಾಯಿ ಗಂಗೆ ಮಾಯೆರ್. ತಿರ್ಪತಿಗ್ ಬತ್ತೆರ್. ಅನಂತನೋಂಪು ರಂಗಪೂಜೆ ಕೈಕೊಂಡೆರ್. ಅಳ್ಳ್ ನಾಮ ಪಾಡ್ಯೊಳು, ನಾಗಬೆತ್ತ ಪತ್ಯೊಳು, ಬುಗುತಿದ ಕರಡಿಗೆ ದೆತ್ತೊಂಡಳ್. ತಿಮ್ಮಪ್ಪ ದೇವೆರೆಡ, ಈರೆ ಕಪಟನಾಟಕ ಎಂಕ್ ಕೊರೊಡುಂದಳ್, ದೆತ್ತೊಂಡಳ್" (ದಕ್ಷಿಣದ ಕಾವೇರಿಯಲ್ಲಿ ಮಿಂದರು ಅಣ್ಣ ತಂಗಿ ಬಡಗಣ ಗಂಗೆ (ಗಂಗಾವಳ್ಳಿ)ಯಲ್ಲಿ ಮಿಂದರು. ತಿರುಪತಿಗೆ ಬಂದರು. ಅನಂತ ನೋಂಪಿ, ರಂಗಪೂಜೆ ಕೈಕೊಂಡರು. ಅಲ್ಲಿ ನಾಮ ಹಾಕಿಕೊಂಡಳು, ನಾಗರಬೆತ್ತ ಹಿಡಿಕೊಂಡಳು, ವಿಭೂತಿಯ ಕರಡಿಗೆ

ತೆಕೊಂಡಳು. ತಿಮ್ಮಪ್ಪ ದೇವರಲ್ಲಿ ನಿಮ್ಮ ಕಪಟನಾಟಕ ನನಗೆ ಕೊಡಬೇಕೆಂದಳು, ತೆಕೊಂಡಳು.

ಎ.ಮೇನರ್ ಅವರ ಪಾಡ್ದನ ಸಂಗ್ರಹ 1886) "ಮುಡಿಪು ಮುದ್ರೆ ಎಂಕುಳು ಕಟ್ಟಾವೊ, ತಿರ್ತ ರಾಜ್ಯೋದ ಬತ್ತಿ ಬಂಗಾರ್ ಎಂಕುಳು ತರ್ಪುಡು ಕೊರ್ಪೊ" (ಮುಡಿಪು ಮುದ್ರೆ) ನಾವು ಕಟ್ಟಿಸುತ್ತೇವೆ. ಕೆಳರಾಜ್ಯದ ವಸ್ತು ಬಂಗಾರ ನಾವು ತರಿಸಿ ಕೊಡುತ್ತೇವೆ. – ಅದೇ ದೈವದ ಬೇರೊಂದು ಪಾಠ. (ಮೇನರ್ ಅವರ ಸಂಗ್ರಹ) ಆವೇಶದ ವೇಳೆ ಕಾಳಭೈರವನಂತೆಯೇ ಕಲ್ಲುರ್ಟಿಯೂ ನಾಗರಬೆತ್ತದ ಸೂಡಿಯಿಂದ ತನ್ನ ಮೈಗೇ ಬಡಿದುಕೊಳ್ಳುವುದಿದೆ.

ತುಳುನಾಡಿನಲ್ಲಿನ ಹಲವು ಮಾರಿಗುಡಿಗಳು, ಹನುಮಂತನ ದೇವಸ್ಥಾನಗಳು ವಿಜಯನಗರ ಕಾಲದಲ್ಲೆ ನಿರ್ಮಿತವಾದವುಗಳೆಂದು ಹೇಳಬೇಕಾಗುತ್ತದೆ. ತುಳುನಾಡಿನ ಹಲವು ದೇವಸ್ಥಾನಗಳಲ್ಲಿ ನವರಾತ್ರಿ ಅಥವಾ ಮಹಾನವಮಿ ಉತ್ಸವ ಪ್ರಾರಂಭವಾದುದು ವಿಜಯನಗರ ಪ್ರಭುತ್ವದ ಕಾಲದಲ್ಲಿ, ವಿಜಯನಗರದಲ್ಲಿ ಅದ್ಧೂರಿಯಾಗಿ ನಡೆಯುತ್ತಿದ್ದ ಅಂಥ ಉತ್ಸವದ ಮಾದರಿಯಲ್ಲಿ ಎನ್ನಬಹುದು.

ವಿಜಯನಗರ ಪ್ರಭುತ್ವ ಕಾಲದಲ್ಲಿ ವಿಜಯನಗರವು ಸಂಪತ್ ಸಮೃದ್ಧಿ ವೈಭವದೊಂದಿಗೆ ವಿವಿಧ ಕಲೆ ಸಾಹಿತ್ಯಾದಿಗಳಲ್ಲೂ ಸಮೃದ್ಧವಾಗಿ ಬೆಳೆದು ಬಂದುದು ಸರ್ವವಿದಿತ. ವಿಜಯನಗರದಿಂದ ಸಾಕಷ್ಟು ದೂರದಲ್ಲಿದ್ದರೂ ಆ ಸಾಮ್ರಾಜ್ಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ತುಳುನಾಡು ಕೂಡ ಹಲವು ವಿಧಗಳಲ್ಲಿ ಸಮೃದ್ಧವಾಗಿದ್ದುದಲ್ಲದೆ ಇಲ್ಲಿಯೂ ವಿವಿಧ ಕಲೆಗಳು ಅಭಿವೃದ್ಧಿಗೊಂಡಿದ್ದವು. ವಿಜಯನಗರ ಕಾಲದಲ್ಲಿ ಕನ್ನಡದಲ್ಲೂ ತೆಲುಗಿನಲ್ಲೂ ಯಕ್ಷಗಾನವು ಒಟ್ಟೊಟ್ಟಿಗೆ ಪ್ರಸಾರಗೊಂಡಂತೆ ತಿಳಿಯುತ್ತದೆ. ಕ್ರಮೇಣ ತುಳುನಾಡಿಗಿಳಿದ ಈ ಕಲೆ ಕರುನಾಡಿನಲ್ಲಿ ಹಸನಾಗಿ ವಿಕಾಸವಾದುದನ್ನು ಕಾಣುತ್ತೇವೆ.

ಹರಿಕಥೆಯ ಕಲೆ ಬಹುಶ: ವಿಜಯನಗರ ಕಾಲದಲ್ಲೇ ಜನಪ್ರಿಯವಾಗಿರ ಬೇಕು. ಆಧ್ಯಾತ್ಮ, ಭಕ್ತಿ ಸಾಹಿತ್ಯಗಳಿಗೂ ವಿಜಯನಗರದಲ್ಲಿ ಪ್ರಾಶಸ್ತ್ಯವಿತ್ತು. ವಿಜಯನಗರದಲ್ಲಿದ್ದನೆಂದು ಹೇಳಲಾದ ಹಿರಿಯ ಹರಿದಾಸನೂ, ಕವಿಯೂ, ದಾಸಕೂಟದ ಪ್ರಮುಖನೂ ಆಗಿದ್ದ ಕನಕದಾಸ ತುಳುನಾಡಿನ ಉಡುಪಿಗೂ

ಬಂದಿದ್ದನೆಂಬ ವೃತ್ತಾಂತವೂ, ಭಕ್ತಿ ಆಂದೋಲನದ ವಿಚಾರದಲ್ಲೊಂದು ಬಗೆಯ ಸಂಚಲನ ಮಾಡಿದ್ದನೆಂಬ ವಿಚಾರವೂ ಕುತೂಹಲಕರವಾಗಿದೆ.

ವಾಣಿಜ್ಯ ವ್ಯವಹಾರಗಳಿಗೂ, ಆರ್ಥಿಕತೆಯ ವೃದ್ಧಿಗೂ ಅನುಕೂಲವಾಗಿ ಕರೆನಾಡ ಮೂಲಕ ಹಾದು ಒಳನಾಡುಗಳ ಸಂಪರ್ಕವಡೆದು ವಿಜಯನಗರದವರೆಗೂ ಹೇರು ಸಾಗಿಸುವ ಹೆದ್ದಾರಿ ಇದ್ದುದಾಗಿ ತಿಳಿದುಬರುತ್ತದೆ. ವಿವಿಧ ಪ್ರದೇಶಗಳೊಂದಿಗಿನ ಸಂಪರ್ಕಕ್ಕೂ ಇದು ಸಾಧನವಾಗಿತ್ತು. ವಿಜಯನಗರ ಕಾಲದಲ್ಲಿ ವರಾಹ ಲಾಂಛನದ ವರಹ ಅಂದು ಪ್ರಸಿದ್ಧವಾದ ಚಿನ್ನದ ನಾಣ್ಯವು ತುಳು ಜನಪದ ಸಾಹಿತ್ಯದಲ್ಲಿ ವರಣ್ ಎಂಬ ರೂಪದಲ್ಲಿ ಆಗಾಗ ಉಲ್ಲೇಖಗೊಳ್ಳುತ್ತಿತ್ತು. ನಾಲ್ಕು ಬೆಳ್ಳಿ ರೂಪಾಯಿಗಳಿಗೆ ಒಂದು ವರಹ ಸಮಾನವೆಂಬ ಹೇಳಿಕೆ ಇತ್ತು.

ಕೃಷ್ಣದೇವರಾಯನು 'ತುಳುವ' ವಂಶದವನೆಂದು ಹೇಳಲಾದ ವಿಚಾರ ತುಳುನಾಡಿನವರಿಗೆ ಅತ್ಯಂತ ಅಭಿಮಾನಾಸ್ಪದ ವಿಚಾರವಾಗಿದ್ದರೂ ಆತನ ಮೂಲಸ್ಥಳ, ಹಿರಿಯರ ಹಿನ್ನೆಲೆ ಇತ್ಯಾದಿಗಳ ಬಗೆಗೆ ಇನ್ನೂ ನಿಖರವಾದ ಮಾಹಿತಿಗಳು ದೊರಕುವುದು ಅಪೇಕ್ಷಣೀಯ. ಈಚೆಗೆ ಪ್ರಸಿದ್ಧ ಕನ್ನಡ-ತುಳು ವಿದ್ವಾಂಸ ಸಂಶೋಧಕರಾದ ಡಾ. ವೆಂಕಟರಾಜ ಪುಣಿಂಚಿತ್ತಾಯರಿಗೆ ಹಳೆಯ ತುಳುಭಾಷೆ ಹಾಗೂ ತುಳು ಲಿಪಿಯಲ್ಲಿ ಬರೆಯಲಾದ 'ಕರ್ಣಪೂರ್ವ' ಎಂಬ ಕಾವ್ಯಕೃತಿಯೊಂದರ ಅಪೂರ್ಣ ಪ್ರತಿಯ ಓಲೆಗ್ರಂಥವು ದೊರಕಿದ್ದು ಅದರ ಕವಿಯ ಹೆಸರು 'ಹರಿಯಪ್ಪಾ ನೃಪತಿ' ಎಂದು ಕಾವ್ಯದಲ್ಲೇ ಉಲ್ಲೇಖಗೊಂಡಿದೆ. ಈ 'ಹರಿಯಪ್ಪಾ ನೃಪತಿ' ವಿಜಯನಗರದ ಅರಸ ಹರಿಹರನೇ ಆಗಿರಬೇಕೆಂದು ಡಾ. ಪುಣಿಂಚಿತ್ತಾಯರು ಅಭಿಪ್ರಾಯಪಡುತ್ತಾರೆ. ಇದು ಅಹುದಾಗಿದ್ದರೆ ಅದು ತುಳುವಿನ ತುರಾಯಿಗೆ ಮತ್ತೊಂದು ಗರಿಯೆಂದೇ ಹೆಮ್ಮೆ ಪಡಬೇಕಾಗುತ್ತದೆ.

ಕನ್ನಡ ರಾಜ್ಯ ರಮಾರಮಣ, ಆಂಧ್ರ ಭೋಜ, ತುಳುವಂಶದ ಶ್ರೀ ಕೃಷ್ಣದೇವರಾಯ – ಕೆಲವು ಪ್ರಶ್ನೆಗಳು

ಪ್ರೊ. ಎ. ವಿ. ನಾವಡ

ಸಮಸ್ತ ಕನ್ನಡಿಗರ ಅಭಿಮಾನದ ಸಂಕೇತ, ಕನ್ನಡ ರಾಜ್ಯರಮಾರಮಣ, ಆಂಧ್ರಭೋಜ ಶ್ರೀಕೃಷ್ಣದೇವರಾಯ ತುಳುಬಳಿ (ವಂಶ) ಯವನೆ? ಹೌದೆನ್ನುವ ತುಳುವರಿಗೆ ಅವ ನಮ್ಮವ ಎನ್ನುವಲ್ಲಿ ಒಂದು ಪುಳಕ. ಈ ಹಿನ್ನೆಲೆಯಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಕೃಷ್ಣ ದೇವಾರಾಯನು ಪಟ್ಟವೇರಿದ ಅಯ್ನೂರನೆ ವರ್ದಂತಿಯ ನೆನಪಿಗಾಗಿ ನಡೆಸಿದ ಕಲಾಪಗಳ ಮುಗಿತಾಯದ ಕಾರ್ಯಕ್ರಮದಲ್ಲಿ ಕೃಷ್ಣದೇವರಾಯನ 'ಬಿಂಬ' ವನ್ನು ಕುರಿತು ನಾಲ್ಕು ಮಾತನಾಡಲು ಬಯಸುತ್ತೇನೆ.

ಕನ್ನಡಿಗರ ಹೆಮ್ಮೆಯ ಸಂಕೇತ

ವಿಜಯನಗರ ಸಾಮ್ರಾಜ್ಯ ತನ್ನ ಇನ್ನಿಲ್ಲದ ಏರೆತ್ತರವನ್ನು ಕಂಡುದು ತುಳುವಂಶಸ್ಥ ಕೃಷ್ಣದೇವರಾಯನ ಕಾಲದಲ್ಲೇ ಎನ್ನುವುದರಲ್ಲಿ ಎರಡು ಮಾತಿಲ್ಲ. ಚರಿತ್ರೆಕಾರರು ಹೇಳಿದಂತೆ ಈತ ಅಪ್ರತಿಮ ಸಾಹಿಸಿ, ಮಹಾನ್ ಯುದ್ಧವೀರ, ನಿಪುಣ ಆಡಳಿತಗಾರ. ಸಾಹಿತ್ಯ ಕಲೆಗಳಿಗೆ ಇನ್ನಿಲ್ಲದ ಪ್ರೋತ್ಸಾಹ ನೀಡಿದವನು. ಸ್ವತಃ ಕವಿ, ಪಂಡಿತ. ಧರ್ಮಕ್ಕೆ, ಧರ್ಮಪೀಠಕ್ಕೆ ತಗ್ಗಿ ನಡೆದವನು. ಶ್ರೀ ವೈಷ್ಣವ, ವೈಷ್ಣವ (ಮಧ್ವ) ಧರ್ಮ ಪರಂಪರೆಯನ್ನು ವಿಶೇಷವಾಗಿ ಮನ್ನಿಸಿದವನು. ಆಡಳಿತಾವಧಿಯುದ್ದಕ್ಕೂ ಯುದ್ಧ ನಡೆಸಿ ರಾಜ್ಯದ ಎಲ್ಲೆಕಟ್ಟನ್ನು ವಿಸ್ತರಿಸಿದವನು, ಯಾವತ್ತೂ ಸೋಲಿನ ಕಹಿರುಚಿಯನ್ನು ಕಾಣದೆ ಹೋದ ವೀರ ಸರದಾರ, ಜೈತ್ರಯಾತ್ರೆ, ತೀರ್ಥಯಾತ್ರೆ ಅವನ ಬದುಕಿನ ಎರಡು ಪ್ರಧಾನ ಚಲನೆಗಳು. ರಾಯಚೂರು, ಗುಲಬರ್ಗಾ, ಬೀದರ್, ಗೊಲ್ಕಂಡ ಗೋವಾರಾಜ್ಯವನ್ನು ಇತರರಿಂದ ಸೆಳೆದುಕೊಂಡವನು. ಉಮ್ಮತ್ತೂರಿನ ಸಂಸ್ಥಾನಿಕರನ್ನು ವಶಪಡಿಸಿಕೊಂಡು ಒರಿಸ್ಸಾದ ಗಜಪತಿಯನ್ನು ಸೋಲಿಸಿ ಮುಂದೆ ಸ್ವ ಸಮುದ್ರಂ, ಫಿರೋಜಾಬಾದ್, ಸಗರ, ಉದಯಗಿರಿ, ಕೊಂಡವೀಡು, ರಾಜ ಮಹೇಂದ್ರಿ ಹಾಗೂ ತೆಲಂಗಾಣದ ಬಹುಪಾಲನ್ನು ತನ್ನ ಆಳೊತ್ತಿಗೆ ಒತ್ತಿಕೊಂಡವನು

ಕೃಷ್ಣ ದೇವರಾಯ . ಪಶ್ಚಿಮ ಕರಾವಳಿಯಿಂದ ತೊಡಗಿ ಪೂರ್ವದ ವಿಶಾಖ ಪಟ್ಟಣ, ದಕ್ಷಿಣದ ಹಿಂದೂ ಮಹಾಸಾಗರದ ಸಣ್ಣಪುಟ್ಟ ದ್ವೀಪ ಸಮುದಾಯಗಳನ್ನು ವಿಜಯನಗರದ ಅಂಕೆಗೆ ಬರುವಂತೆ ಮಾಡಿ ತನ್ನ ಸಾಮ್ರಾಜ್ಯದ ಗಡಿಗೆರೆಯನ್ನು ಹಿಗ್ಗಲಿಸಿದವನು. ತಿರುಪತಿ, ಶ್ರೀಶೈಲಂ, ಅಹೋಬಲಂ, ಪನ್ನೋಬಳಂ, ಕದ್ರಿ ಕಾಳಹಸ್ತಿ, ಉಡುಪಿ, ಹಂಪಿ, ಕಂಚಿ, ಮುಂತಾದ ಪುಣ್ಯಕ್ಷೇತ್ರಗಳಿಗೆ ಪದ ಬೆಳೆಸಿ ದಾನ ದತ್ತಿ ಬರೆಸಿ ಕ್ಷೇತ್ರೋದ್ಧಾರ ಕೈಂಕರ್ಯವನ್ನು ಕೈಗೊಂಡವನು. ಕನ್ನಡ ರಾಜ್ಯ ರಮಾ ರಮಣ, ಯವನರಾಜ್ಯ ಪ್ರತಿಷ್ಠಾಪನಾಚಾರ್ಯ, ಆಂಧ್ರ ಭೋಜ ಮುಂತಾದ ಬಿರುದುಗಳು ಅವನ ಜನ ಮೆಚ್ಚುಗೆಯ ಸೊಲ್ಲುಗಳು. ಆಸ್ಥಾನದೊಳಗೆ ಕವಿಗಳಿಗೆ, ಪಂಡಿತರಿಗೆ ವಿಶೇಷ ಮನ್ನಣೆ ನೀಡಿದ. ತನ್ನ ಆಸ್ಥಾನ ಕವಿಗಳನ್ನು ಅಷ್ಟ ದಿಗ್ಗಜರೆಂದು ಕರೆದು ಮನ್ನಿಸಿದ. ತನ್ನ ಆಸ್ಥಾನದಲ್ಲಿ ತೆಲುಗು, ತಮಿಳು, ಕನ್ನಡ, ಸಂಸ್ಕೃತ ಕವಿಗಳನ್ನು ಗೌರವಿಸಿದ. ರಾಮಾನುಜೀಯ ಪಂಥದ ತಾತಾಚಾರ್ಯರನ್ನು ದ್ವೈತ ಮತಾಚಾರ್ಯ ವ್ಯಾಸರಾಜರನ್ನು ಸಮಭಾವದಿಂದ ಕಂಡು ಗೌರವಿಸಿದವನು. ಕೃಷ್ಣದೇವರಾಯ. ಕನಕ ದಾಸ, ಪುರಂದರದಾಸರು ಕನ್ನಡಕ್ಕೆ ಕೋಡು ಮೂಡಿಸಿದ ದಾಸವರೇಣ್ಯರು. ಆದರೆ ಅವರೇನೂ ಕೃಷ್ಣದೇವರಾಯನ ಚಾವಡಿಗೆ ಬಂದಿರಲಾರರು.

ಕೃಷ್ಣ ದೇವರಾಯ ತನ್ನ ರಾಜ್ಯವನ್ನು ವಿಸ್ತರಿಸುವ ಸಾಧನೆಯ ಜತೆಗೆ ರಾಜ್ಯದಲ್ಲಿ ಹೊಸ ಅರ್ಥವ್ಯವಸ್ಥೆಯನ್ನು ಹುಟ್ಟು ಹಾಕಿದನು. ತುಂಗಭದ್ರಾನದಿಗೆ ದೇಸೀಯ ತಂತ್ರ ಜಾಣಿಕೆಯನ್ನು ಬಳಸಿ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿ, ನಾಲೆಗಳನ್ನು ಕಡಿಸಿ ಅದರಲ್ಲಿ ನೀರು ಹರಿಯಿಸಿ ವಿಸ್ತಾರವಾದ ಕೃಷಿ ಭೂಮಿಗೆ ನೀರುಣಿಸುವ ಕೆಲಸ ಮಾಡಿದ. ಹಂಪಿಯ ಸುತ್ತಲಿನ ಉಪನಗರಗಳಿಂದ ಕುಡಿವ ನೀರನ್ನು ಸರಬರಾಜು ಮಾಡಿಸಿ ಹಂಪಿಯೊಳಗಿನ ಲಕ್ಷಾಂತರ ಮಂದಿ ಸೈನಿಕರಿಗೆ, ಪ್ರಜೆಗಳಿಗೆನೀರಿನ ವ್ಯವಸ್ಥೆ ಮಾಡಿಸಿದ. ಕೃಷ್ಣದೇವರಾಯ ಅಂದು ಕಡಿದ ತುರ್ತಾ ಕಾಲುವೆ, ರಾಮಸಾಗರ ಕಾಲುವೆ, ಕಂಪ್ಲಿ ಕಾಲುವೆಗಳು, ಬಸವಣ್ಣ ಕಾಲುವೆಗಳು ಇಂದಿಗೂ ಒಣಭೂಮಿಯನ್ನು ಹಸುರಾಗಿಸುವ ಕೆಲಸ ಮಾಡುತ್ತಿವೆ. ಹಂಪಿ ಪರಿಸರದ ಭೂಮಿಯ ಏರು ತಗ್ಗು, ಬೆಟ್ಟಗಳ ಸಹಜ ಭೂಸ್ಥಿತಿಯನ್ನು ಬಳಸಿಕೊಂಡು ನದೀ ನೀರನ್ನು ಸಂಗ್ರಹಿಸಿ ಕೆರೆಗಳನ್ನು ಕಟ್ಟಿಸಿದ. ಕೃಷಿ ಕಾರ್ಯದಲ್ಲಿ ಸೆಣಬನ್ನು ಗೊಬ್ಬರವಾಗಿ ಬಳಸುತ್ತಿದ್ದ (ಈಗಲೂ) ವಿವರಗಳು ಅತ್ತಿಮಬ್ಬೆಯ ಶಾಸನದಲ್ಲಿ ಹೇಳುತ್ತವೆ. ಕೃಷಿ ಚಟುವಟಿಕೆಗಳಿಗೆ ಬೆಂಬಲ

ನೀಡುವ ಜತೆಗೆ ವ್ಯಾಪಾರ ಚಟುವಟಿಕೆಗಳನ್ನು ಬೆಂಬಲಿಸುವ ಮೂಲಕ ವಿಜಯನಗರದಲ್ಲಿ ಕೃಷ್ಣದೇವರಾಯ ಹೊಸ ಅರ್ಥವ್ಯವಸ್ಥೆಗೆ ಅನುವು ಮಾಡಿದ. ರಾಜಧಾನಿ ಹಂಪಿಯೇ ಈ ವ್ಯಾಪಾರ ಚಟುವಟಿಕೆಗಳಿಗೆ ಕೇಂದ್ರವಾಗಿದ್ದು ಸುತ್ತಲಿನ ಗುತ್ತಿ, ಅದೋನಿ, ಪೆನುಕೊಂಡ, ಉದಯಗಿರಿ, ಆನೆಗೊಂದಿ, ಕಂಪ್ಲಿ ಇಲ್ಲೆಲ್ಲ ಕೃಷಿ ಆಧಾರಿತ ಅರ್ಥವ್ಯವಸ್ಥೆ ರೂಪುಗೊಳ್ಳುವಂತೆ ಕೃಷ್ಣದೇವರಾಯ ವ್ಯವಸ್ಥೆ ಮಾಡಿದ. ದೂರದ ಭಟ್ಕಳ, ಹೊನ್ನಾವರ, ಮುರುಡೇಶ್ವರ , ಬಸರೂರು, ಬಾರ್ಕೂರು, ಮಂಗಳೂರು, ಕುಂಬಳೆ, ಮಂಜೇಶ್ವರ ಮುಂತಾದ ಕರಾವಳಿಯ ಬಂದರು ಪ್ರದೇಶಗಳಲ್ಲಿ ಬಡಸಾಲೆ ನಿರ್ಮಿಸಿ ನದಿ ವ್ಯಾಪಾರ, ಸಮುದ್ರ ವ್ಯಾಪಾರಕ್ಕೆ ಎಲ್ಲ ಏರ್ಪಾಟುಗಳನ್ನು ಮಾಡಿದ. ಈ ಮೂಲಕ ಉತ್ಪಾದನೆ ಹಾಗೂ ಮಾರುಕಟ್ಟೆ ವ್ಯವಸ್ಥೆ ಬಲಗೊಂಡು ವಿಜಯನಗರದ ಆರ್ಥಿಕ ವ್ಯವಸ್ಥೆಯನ್ನು ಗಟ್ಟಿಗೊಳಿಸಿದನು. ಬಂದರು ಕಟ್ಟೆ ಉಳ್ಳ ಪಟ್ಟಣಗಳ ಮೂಲಕ ವಿದೇಶೀ ವ್ಯಾಪಾರವೂ ಸಾಧ್ಯವಾಯಿತು. ಆದರೆ ಪೋರ್ಚುಗೀಸ್ ವ್ಯಾಪಾರಿಗಳ ಏಕಸ್ವಾಮ್ಯವನ್ನು ಸರಿಗಟ್ಟಲಾರದೆ ಕರಾವಳಿ ವ್ಯಾಪಾರವನ್ನು ನಿಯಂತ್ರಿಸುವಲ್ಲಿ ಕೃಷ್ಣ ರಾಮನಿಗೆ ಪೂರ್ತಿ ಯಶಸ್ಸನ್ನು ಸಾಧಿಸಲು ಸಾಧ್ಯವಾಗಲಿಲ್ಲ.

ಕೃಷ್ಣದೇವರಾಯ ತನ್ನ ರಾಜ್ಯದ ಕಲಾವಿದರಿಗೆ, ಪಾತ್ರದವರಿಗೆ, ಕುಶಲ ಕರ್ಮಿಗಳಿಗೆ ದಾನ ನೀಡಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ದೊರೆಯುತ್ತದೆ. ರಾಜ್ಯದ ಬಡವರಿಗೆ ಮುಳ್ಳಿನಂತಿದ್ದ ಮದುವೆ ಸುಂಕ ವನ್ನು ರದ್ದುಗೊಳಿಸುವ ಮಹತ್ವದ ತೀರ್ಮಾನವನ್ನು ಕೃಷ್ಣದೇವರಾಯ ಕೈಗೊಂಡುದು ಅವನ ಪ್ರಜಾಪ್ರೀತಿಯನ್ನು ತಿಳಿಸುತ್ತದೆ.

ಯವನ ರಾಜ್ಯ ಸ್ಥಾಪನಾಚಾರ್ಯ

ವಿಜಯನಗರ ಸಾಮ್ರಾಜ್ಯವನ್ನು ಹಿಂದೂ ಸಾಮ್ರಾಜ್ಯದ ಸಂಕೇತವೆಂದೂ, ಮುಸ್ಲಿಂ ಪ್ರತಿರೋಧವನ್ನು ಯುದ್ಧದ ಮೂಲಕ ನಿಗ್ರಹಿಸಿದ ಮುಸ್ಲಿಂ ವಿರೋಧಿ ಸಾಮ್ರಾಜ್ಯವೆಂದೂ ಕೆಲವೊಂದು ಚರಿತ್ರಕಾರಾರು ಬಿಂಬಿಸಿದ್ದುಂಟು. ಆದರೆ ವಾಸ್ತವವಾಗಿ ಕೃಷ್ಣ ದೇವರಾಯನ ಅಧಿಕಾರಾವಧಿಯಲ್ಲಿ ರಾಜ್ಯ ವಿಸ್ತರಣೆಯ ಸಂದರ್ಭದಲ್ಲಿ ಮುಸ್ಲಿಂ ದೊರೆಗಳನ್ನು ಬಗ್ಗುಬಡಿದಿರಬಹುದು ಆದರೆ ಮುಸ್ಲಿಂ ಜನರನ್ನು

ವಿರೋಧಿಸುವ ಮನೋಧರ್ಮವನ್ನು ತೋರಲಿಲ್ಲ. ಹಂಪಿ ಪರಿಸರದ ಅನೇಕ ದರ್ಗಾಗಳು 20 ಡೋ ಸಾರೆನ್ಸಿಕ್ ಹಾಗೂ ಬಹಮನಿ ವಾಸ್ತುಶಿಲ್ಪವನ್ನು ಹೋಲುತ್ತಿರುವುದನ್ನು ಗಮನಿಸಬೇಕು. ಕೃಷ್ಣ ದೇವರಾಯನ ಸೈನ್ಯದೊಳಗೆ ಸುಮಾರು ಹತ್ತು ಸಾವಿರ ಕುದುರೆ ಸವಾರರಿದ್ದರು. ಅವರಲ್ಲಿ ಬಹುತೇಕ ಮಂದಿ ಮುಸಲ್ಮಾನರು. ಅವರೆಲ್ಲ ಕೃಷ್ಣದೇವರಾಯ ಮುಸ್ಲಿಂ ದೊರೆಗಳ ವಿರುದ್ಧ ನಡೆಸಿದ ಸೆಣಸಾಟದಲ್ಲಿ ಕೃಷ್ಣ ದೇವರಾಯನ ಪರವಾಗಿ ಹೋರಾಡಿದ್ದರೂ ವಿಜಯನಗರದಲ್ಲಿ ಮುಸ್ಲಿಮರಿಗೆಂದೇ ಪ್ರತ್ಯೇಕ ಪ್ರದೇಶಗಳನ್ನು ನಿರ್ಮಿಸಿ ಕೊಟ್ಟಿದ್ದನು. ತನ್ನ ರಾಜ್ಯದ ಹಲವೆಡೆ ಮಸೀದಿಗಳನ್ನು ಕಟ್ಟಿಕೊಳ್ಳಲು ಮುಸ್ಲಿಮರಿಗೆ ಅವಕಾಶಮಾಡಿಕೊಟ್ಟಿದ್ದನು. ತಾನು ನಿರ್ಮಿಸಿದ ಲೋಟಸ್ ಮಹಲ್ , ಕಮಲ ಮಹಲ್ ಗಳಲ್ಲಿ ಇಸ್ಲಾಂ ವಾಸ್ತುಶೈಲಿಯನ್ನು ಅಳವಡಿಸಿದುದನ್ನು ಗಮನಿಸಬೇಕು. ಆತನಿಗಿದ್ದ ಯವನರಾಜ್ಯ ಸ್ಥಾಪನಾಚಾರ್ಯ (ಕೊಂಡ ಮರ ಸಯ್ಯನ 1514ರ ಕಂದು ಕೂರು ಶಾಸನದ ಉಲ್ಲೇಖ) ತಾನು ಯುದ್ಧದಲ್ಲಿ ಗೆದ್ದಿದ್ದ ಬಹಮನಿ ಸಿಂಹಾಸನವನ್ನು ಮತ್ತೆ ಬಹಮನಿ ಸುಲ್ತಾನ ಮಹಮಾದನಿಗೆ ನೀಡಿ (ಕ್ರಿ. ಶ. 1514 ಆಗಸ್ಟ್) ತಾನು ಮುಸ್ಲಿಂ ರಾಜ್ಯವನ್ನು ಕಬಳಿಸುವುದೇ ತನ್ನ ಉದ್ದೇಶವಾಗಿರಲಿಲ್ಲ ಎನ್ನುವುದನ್ನು ಲೋಕ ಪ್ರಕಟಗೊಳಿಸಿದ. 1520ರಲ್ಲಿ ಕೃಷ್ಣದೇವರಾಯ ಪೋರ್ಚುಗೀಸ್ ಫಿರಂಗಿ ಬಲದ ನೆರವಿನಿಂದ ಬಿಜಾಪುರದ ಆದಿಲ್ ಷಾನ ವಶದಲ್ಲಿದ್ದ ರಾಯಚೂರು ಕೋಟೆಯನ್ನು ಸ್ವತಂತ್ರಗೊಳಿಸಿದ. ಅಲ್ಲಿನ ಮುಸ್ಲಿಂ ಸೈನಿಕರಿಗೆ, ಪ್ರಜಾವರ್ಗವನ್ನು ಸ್ವತಂತ್ರವಾಗಿ ನೆಮ್ಮದಿಯಾಗಿ ಬಾಳಲು ಭರವಸೆ ನೀಡಿದ. ಕಲ್ಲಿಕೋಟೆ ಅರಸನನ್ನು ನಿಯಂತ್ರಿಸಲು ನೆರವು ನೀಡಬೇಕೆಂದು ಪೋರ್ಚುಗೀಸ್ ವೈಸರಾಯ್ ಆಲ್ಬುಕರ್ಕನ ಕೋರಿಕೆಯನ್ನು ಉಪಾಯದಿಂದ ನಿರಾಕರಿಸಿ, ಪೋರ್ಚುಗೀಸರಿಂದ ಯುದ್ಧದ ಕುದುರೆಗಳನ್ನು ಪಡೆವ ತನ್ನ ಪ್ರಯತ್ನದಲ್ಲಿ ಯಶಸ್ವಿಯಾದ. ರಾಯಚೂರು ಕೋಟೆಕಾಳಗಕ್ಕೆ ಬೇಕಾದ ಫಿರಂಗಿ ಗುಂಡುಗಳನ್ನು ಪಡೆದ. ಪೋರ್ಚುಗೀಸ್ ಅಧಿಕಾರಿಗಳ ಜೊತೆ ಒಳ್ಳೆಯ ಸಂಬಂಧ ಬೆಸೆದುಕೊಂಡಿದ್ದ. ತಾನು ವಿಜಯನಗರದಲ್ಲಿ ಆಚರಿಸಿಕೊಂಡು ಬರುತ್ತಿದ್ದ ಮಹಾನವಮಿ ಉತ್ಸವದಲ್ಲಿ ಪೋರ್ಚಿಗೀಸರು ಭಾಗಿಯಾಗುವಂತೆ ಮಾಡಿದುದು ಅವನ ಚಾಣಾಕ್ಷಮತಿಗೆ ಸಾಕ್ಷಿ.

ಕೃಷ್ಣ ದೇವರಾಯ ತುಳುವನೇ ?

ಶ್ರೀ ಕೃಷ್ಣದೇವರಾಯ ತುಳುವ ವಂಶಸ್ಥನೆಂದು ಚರಿತ್ರೆ ಹೇಳುತ್ತದೆ. ಇಲ್ಲಿ ತುಳುವನೆಂದರೆ ತುಳು ಭಾಷಿಕನೆಂದು ತಿಳಿಯಬಾರದು . ವಿಜಯನಗರದ ತುಳುವ ದೊರೆಗಳ ಮೂಲವನ್ನು ಕುರಿತು ಹೊಸ ತಿಳಿವಳಿಕೆಯನ್ನು ಹುಡುಕಿ ಹೇಳಿದವರು. ಡಾ. ಸೂರ್ಯನಾಥ ಕಾಮತರು ಹಾಗೂ ಡಾ. ಜಿ.ಎಸ್. ದೀಕ್ಷಿತರು. ಕಾಮತರು ತಮ್ಮ ತುಳು ವಂಶದ ಮೂಲದ ವಿಚಾರ ಲೇಖನದಲ್ಲಿ ತುಳುವ ವಂಶದ ಆರಸರು ಹಂಪಿಗೆ ಬರುವ ಮೊದಲು ಉತ್ತರ ಆರ್ಕಾಟು ಜಿಲ್ಲೆಯ ದೇವಿಕಾಪುರದಲ್ಲಿ ನೆಲೆಸಿದ್ದರು. ಹೆರಸ್ಟೊಪ್ಪೆ -ಹಾಡುವಳ್ಳೀಯ ಅರಸರೂ, ವಿಜಯನಗರದ ತುಳುವರೂ ಒಂದೇ ಮೂಲದವರೆಂದು 1801 ರಲ್ಲಿ ಬುಕಾನೆನ್ ತನ್ನ ಪ್ರವಾಸ ವರದಿಯಲ್ಲಿ ಬರೆದಿರುವುದನ್ನು ಪ್ರಸ್ತಾಪಿಸುತ್ತಾರೆ. ತುಳು ದೇಶ ತಿಲಕಾಯಮಾನವಾಗಿರ್ದ ನಗಿರೆ ಎಂದು ಶಾಸನದಲ್ಲಿ ದಾಖಲಾಗಿರುವುದನ್ನು ಕಂಡರೆ ಇತಿಹಾಸ ಕಾಲದಲ್ಲಿ ತುಳು ಭಾಷಿಕನೆಲೆಯನ್ನು ಮೀರಿ ತುಳುವ ರಾಜ್ಯ ವಿಸ್ತರಿಸಿತ್ತು ಎನ್ನಬೇಕಾಗುತ್ತದೆ. ತುಳುನಾಡು ಎನ್ನುವುದು ಬರಿಯ ಭಾಷಾ ವಾಚಕ ಪ್ರದೇಶವಲ್ಲ, ಪ್ರದೇಶ ವಾಚಕ ಎನ್ನುವುದನ್ನು ಈ ಹಿಂದೆಯೇ ವಿದ್ವಾಂಸರು ಚರ್ಚಿಸಿದ್ದನ್ನು ಇಲ್ಲಿ ಗಮನಿಸಬೇಕು. ತಮಿಳುನಾಡಿನ ಪ್ರಧಾನ ಕೃಷಿ ವೃತ್ತಿಗರಾದ ತುಳುವ ವೆಲ್ಲಾಳರು ನಾರ್ತರ್ನ್ ಕೆನರಾ (ಇಂದಿನ ಉತ್ತರ ಕನ್ನಡ ಜಿಲ್ಲೆ) ದಿಂದ ವಲಸೆ ಬಂದಿರಬೇಕೆಂದು ಶ್ರೀ ಕಾಮತರು ಬರೆದಿರುತ್ತಾರೆ. ಕಾಂಚಿಯ ನಾಟ್ಟಾರ್ ರೂ ತುಳುವ ವೆಲ್ಲಾಳರೂ ಒಂದೇ ಆಗಿದ್ದು ಅವರು ಉತ್ತರ ಕನ್ನಡ ಜಿಲ್ಲೆಯ ಗೆರುಸೊಪ್ಪೆ ಪ್ರದೇಶದಿಂದ ಉತ್ತರ ಆರ್ಕಾಟಿನ ದೇವಿ ಪುರಂಗೆ ಹೋಗಿ ನೆಲೆಸಿರಬೇಕೆಂದು ಅವರು ತರ್ಕಿಸುತ್ತಾರೆ. ಅಂದರೆ ವಿಜಯನಗರ ತುಳುವ ವಂಶಿಕ ದೊರೆಗಳೂ ಮೂಲತ: ಗೆರೆಸೊಪ್ಪೆ ಹಾಡುವಳ್ಳಿಯಿಂದ ವಿಜಯನಗರ ಕಡೆಗೆ ವಲಸೆ ಹೋಗಿರಬೇಕು. ಹೆಸರಾಂತ ಚರಿತ್ರಕಾರ ಡಾ. ಜಿ. ಎಸ್. ದೀಕ್ಷಿತ್ ಅವರು ಡಾ. ಕಾಮತರ ಅಭಿಪ್ರಾಯಕ್ಕೆ ಪೂರಕವಾಗಿ ಟಾಮ್ ಪಿರೇಸ್ (Tom Pires) ಎನ್ನುವ ಪೋರ್ಚುಗೀಸ್ ಲೇಖಕ ಬರೆದ ಪ್ರವಾಸಕಥನದಲ್ಲಿ " ಕೃಷ್ಣದೇವರಾಯ ಕೆನರಾ ಅಥವಾ ತುಳುನಾಡಿನವನು, ಅವನ ಸಹಜವಾದ ಭಾಷೆ ಕನ್ನಡ. ಆಸ್ಥಾನದಲ್ಲಿ ಅವನು ತೆಲುಗಿನಲ್ಲಿ ಮಾತಾಡುತ್ತಿದ್ದನು" ಎಂದು ತಿಳಿಸಿದ ಮಾಹಿತಿಯನ್ನು ಉಲ್ಲೇಖಿಸುತ್ತಾರೆ. ಒಟ್ಟಿನಲ್ಲಿ ಕೃಷ್ಣದೇವರಾಯನನ್ನು ತುಳು ಭಾಷಿಕನೆಂದು ತಿಳಿಯದೆ, ತುಳುನಾಡಿನ

ಕನ್ನಡ ಪ್ರದೇಶ (ಗೇರು ಸೊಪ್ಪೆ ಹಾಡುವಳ್ಳಿ ಪರಿಸರ) ದಿಂದ ವಿಜಯನಗರದ ಕಡೆಗೆ ವಲಸೆ ಹೋಗಿರಬೇಕು, ಹಾಗಾಗಿ ಕೃಷ್ಣದೇವರಾಯನನ್ನು ತುಳು ಮಾತೃಭಾಷಿಕನೆನ್ನುವುದಕ್ಕಿಂತ ತುಳುನಾಡಿನ ಕನ್ನಡ ಪ್ರದೇಶದವನು ಎಂದು ಹೇಳುವುದು ಹೆಚ್ಚು ಸೂಕ್ತ.

ತೆಲುಗು ಒಲವು ಏಕೆ?

ವಿಜಯನಗರದ ತುಳುವ ವಂಶಕ್ಕೆ ಸೇರಿದ ನರಸನಾಯಕನ ಮೂರನೆ ಹೆಂಡತಿ ನಾಗಲಾದೇವಿಯ ಮಗ ಶ್ರೀಕೃಷ್ಣದೇವರಾಯ, ನಾಗಲಾದೇವಿ ತೆಲುಗು ಮೂಲದವಳು. ಕೃಷ್ಣದೇವರಾಯನ ಮಂತ್ರಿ ತಿಮ್ಮರಸನೂ ತೆಲುಗಿನವನು.

ಇವನು ತನ್ನ ಜಾಣ್ಮೆ ಹಾಗೂ ತಂತ್ರ ಕುಶಲತೆಯಿಂದ ನರಸನಾಯಕನ ಪತ್ನಿಮಂದಿರಾದ ತಿಪ್ಪಾಂಬೆ ಹಾಗೂ ಜಬಾಂಬೆಯರಲ್ಲಿ ಜನಿಸಿದ ವೀರನರಸಿಂಹ, ರಂಗರಾಯ, ಅಚ್ಯುತರಾಯರನ್ನು ಬದಿಗಿರಿಸಿ ದಾಸೀಪುತ್ರ (ನಾಗಾಲಾದೇವಿಯಿಂದ ಜನಿಸಿದವನು) ಕೃಷ್ಣದೇವರಾಯನಿಗೆ ಪಟ್ಟಗಟ್ಟುವುದರಲ್ಲಿ ಗೆಲುವನನ್ನು ಸಾಧಿಸಿದ. ಮಂತ್ರಿ ತಿಮ್ಮರಸ(ತೆಲುಗ)ನ ವರ್ಚಸ್ಸಿನ ಫಲವಾಗಿ ಆಸ್ಥಾನ, ಸೈನ್ಯ, ಅರಮನೆಯೊಳಗಿನ ಅಧಿಕಾರಿ ವರ್ಗ ಎಲ್ಲೆಡೆಯಲ್ಲೂ ತೆಲುಗರದೇ ಕಾರ್ಬಾರು ನಡೆದು ಹೋಯಿತು. ಹೀಗೆ ತೆಲುಗು ಶಕ್ತಿ' ಯಿಂದ ಅಧಿಕಾರಕ್ಕೆ ಬಂದ ಕೃಷ್ಣದೇವರಾಯ ಸಹಜವಾಗಿ ತೆಲುಗಿನ ಕಡೆಗೆ ಓಲುಮೆಯನ್ನು ತೋರಿದ. ತೆಲುಗು ಕವಿಗಳನ್ನೇ ಪೋಷಿಸಿದ. ತಾನು ತೆಲುಗು ಭಾಷೆಯಲ್ಲೇ 'ಆಮುಕ್ತಮೌಲ್ಯದ' ಎನ್ನುವ ಕಾವ್ಯವನ್ನು ಬರೆದು ಆಂಧ್ರಭೋಜನೆನಿಸಿದ. ಕನ್ನಡದ ದೊರೆ ನರಸನಾಯಕನ ಮಗನಾಗಿ ಹಂಪಿಯ ಕನ್ನಡ ಸಿಂಹಾಸನದಲ್ಲಿ ಕನ್ನಡ ರಾಜ್ಯ ರಮಾರಮಣನು ಆಸೀನನಾದರೂ ತೆಲುಗುತಾಯಿಯ ಮಾತು ತೆಲುಗಿನ ಕಡೆಗೆ ಒಲವು ತೋರಿಸಿದ. ತನ್ನ ಆಸ್ಥಾನದ ಅಷ್ಟದಿಗ್ಗಜರಲ್ಲಿ ಬಬ್ಬನಾದ ಅಲ್ಲಾಸಾನಿ ಪೆದ್ದನಿಗೆ 'ಆಂಧ್ರಕವಿ ಪಿತಾಮಹ ' ನೆಂಬ ಬಿರುದು ನೀಡಿ ತಾನೇ ಅವನ ಕಾಲಿಗೆ

ಪಾದಪೆಂಡೆಯ ತೊಡಿಸಿ ಪಲ್ಲಕ್ಕಿಗೆ ಹೆಗಲುಕೊಟ್ಟು ಮೆರೆಯಿಸಿದ. ಅದೇನೋ ಕನ್ನಡಿಗರ ಅದೃಷ್ಟ ಎಂಬಂತೆ ಕನ್ನಡ ಭಾರತ (ಉತ್ತರಾರ್ಧದ ಎಂಟು ಪರ್ವಗಳು) ವನ್ನು ತಿಮ್ಮಣ್ಣ ಕವಿ (ಆತನೂ ತೆಲುಗನಿರಬೇಕು) ಯಿಂದ ಬರೆಯಿಸಿದ. ಹೀಗೆ

ತುಳು ವಂಶಸ್ಥ, ಕನ್ನಡದ ದೊರೆ ಶ್ರೀ ಕೃಷ್ಣ ದೇವರಾಯ ಲಾಲಿಸಿದ್ದು ತೆಲುಗು ಭಾಷೆ, ಸಂಸ್ಕೃತಿಯನ್ನು ಕೃಷ್ಣ ದೇವರಾಯನಿಗೆ ಪರಮ ಪೂಜ್ಯರಾಗಿದ್ದ ತನ್ನ ರಾಜಗುರುವೆಂದೇ ಭಾವಿಸಿದ್ದ ವ್ಯಾಸರಾಜರ ಸಮಕಾಲೀನರಾಗಿದ್ದ ಪುರಂದರದಾಸ, ಕನಕದಾಸ, ವಾದಿರಾಜರ ಪ್ರಸ್ತಾಪ ಶ್ರೀ ಕೃಷ್ಣ ದೇವರಾಯನ ಚರಿತ್ರೆಯ ಕಕ್ಷದೊಳಗೆ ಬರುವುದೇ ಇಲ್ಲ. ವಿಜಯನಗರ ಸಾಮ್ರಾಜ್ಯದ ಹೃದಯಸ್ಥಾನವಾಗಿದ್ದ ಹಂಪಿ, ಹೊಸಪೇಟೆ, ಕಂಪ್ಲಿ ಪ್ರದೇಶಗಳಲ್ಲೆಲ್ಲ ಸುತ್ತಾಡಿ ಅಲ್ಲಿನ ಜಾನಪದವನ್ನು ಸಂಗ್ರಹಿಸಿ ಅಧ್ಯಯನ ಮಾಡಿದ ಡಾ. ಪುರುಷೋತ್ತಮ ಬಿಳಿಮಲೆ ಶ್ರೀಕೃಷ್ಣದೇವರಾಯನ ಬಗ್ಗೆ ಒಂದು ಸಾಲೂ ಜಾನಪದ ಸಾಹಿತ್ಯದ ಉಲ್ಲೇಖ ದೊರೆಯದಿರುವುದು ಆಶ್ಚರ್ಯ ಎಂದು ಬರೆದಿದ್ದಾರೆ. ಅದೇ ವಿಜಯನಗರ ಸಮ್ರಾಜ್ಯದ ಮೂಲಪುರುಷ ಕುಮಾರ ರಾಮನ ಬಗೆಗೆ ಜಾನಪದ ಕಾವ್ಯಗಳೂ, ಅಪಾರ ಸಂಖ್ಯೆಯ ಶಿಷ್ಟ ಕಾವ್ಯಗಳೂ ಸಿಗುತ್ತವೆ. ಇದನ್ನು ಹೇಗೆ ಅರ್ಥೈಸೋಣ?

ಸಂಶೋಧಕ ಡಾ. ಎಂ ಎಂ ಕಲುಬುರ್ಗಿಯವರು ಕೃಷ್ಣದೇವರಾಯ ತೆಲುಗು ಸಂಸ್ಕೃತಿಯ ಆಕ್ರಮಣ ಎನ್ನುವ ಲೇಖನದಲ್ಲಿ ಕೃಷ್ಣದೇವರಾಯನ ತೆಲುಗು ಪ್ರೀತಿಯ ಹಿನ್ನೆಲೆಯನ್ನು ಸಕಾರಣವಾಗಿ ಚರ್ಚಿಸಿದ್ದಾರೆ. ಅವರ ವಾಗ್ವಾದದ ಹುರುಳನ್ನು ಹೀಗೆ ಅಡಕಗೊಳಿಸಬಹುದು. ಹಂಪಿ ಮೂಲತಃ ವಿರೂಪಾಕ್ಷ ಸಂಸ್ಕೃತಿಯ ನೆಲೆಯಾಗಿದ್ದು ಮುಂದೆ ವೆಂಕಟೇಶ ಕೇಂದ್ರಿತ ಶ್ರೀ ವೈಷ್ಣವ ಸಂಸ್ಕೃತಿಯ ನೆಲೆಯಾಗಿ ಪರಿವರ್ತನೆಗೊಂಡಿತು. ಹೀಗೆ ಕನ್ನಡ ಸಾಮ್ರಾಜ್ಯವನ್ನು ತೆಲುಗು ಸಂಸ್ಕೃತಿ ಆಕ್ರಮಿಸಿಕೊಂಡಿತು. ಇದರಿಂದ ಹತಾಶಗೊಂಡ ಕೃಷ್ಣದೇವರಾಯನ ಸೈನ್ಯದಲ್ಲಿದ್ದ ಕನ್ನಡಿಗರು ಶ್ರೀ ವೈಷ್ಣವ - ವೈಷ್ಣವ ಸಂಸ್ಕೃತಿಯ ಆಕ್ರಮಣದಿಂದ ಶೈವ ಸಂಸ್ಕೃತಿಯನ್ನು ಕಾಪಿಡುವ ಉದ್ದೇಶದಿಂದ ಮುಸಲ್ಮಾನರೊಂದಿಗೆ ಕೈಜೋಡಿಸಿ ರಕ್ಕಸತಂಗಡಗಿ ಯುದ್ಧದಲ್ಲಿ ವಿಜಯನಗರದ ದೊರೆಗಳಿಗೆ ಸೋಲಾಯಿತು. ಆ ಯುದ್ಧದ ಬಳಿಕ ನಡೆದ ಕೊಳ್ಳೆ ಅಥವಾ ಸೂರೆ ಯಲ್ಲಿ ಹಂಪಿಯ ವೈಷ್ಣವ ದೇವಾಲಯಗಳೆಲ್ಲವೂ ನಾಶವಾಗಿ ಶೈವದೇವಾಲಯಗಳೆಲ್ಲವೂ ಉಳಿಯಲು ಇದು ಕಾರಣವಿರಬಹುದೆ? ಈ ಬಗೆಯ ಹೊಸ ಆಲೋಚನೆಯನ್ನು ಡಾ. ಕಲುಬುರ್ಗಿಯವರು ನಮ್ಮ ಮುಂದಿಟ್ಟಿದ್ದಾರೆ. ಇದು ಮುಂದಿನ ಸಾಂಸ್ಕೃತಿಕ ಚಾರಿತ್ರಿಕ ಹುಡುಕಾಟಕ್ಕೆ ಒಳ್ಳೆಯ ವಸ್ತು ಆಗಬಹುದು. ಆಗ ವಿಜಯನಗರವನ್ನು ಕುರಿತು ಸ್ಥಾಪಿತ ಚರಿತ್ರೆಯನ್ನು

ಮುರಿದು ಕಟ್ಟುವ ಹೊಸ ಪ್ರಯತ್ನವೊಂದು ಸಾಕಾರಗೊಳ್ಳಬಹುದು.

ಚರಿತ್ರಕಾರರು ಅಕ್ಬರನನ್ನು ಅಕ್ಬರ್ ಮಹಾನುಭಾವ ಎಂದು ಕರೆದರು, ತಪ್ಪಿಲ್ಲ. ಆದರೆ ಕೃಷ್ಣದೇವರಾಯನ ಸಾಹಸ, ಕುಶಾಗ್ರಮತಿ, ಮುಸಲ್ಮಾನ ದೊರೆಗಳತ್ತ ತೋರಿದ ಕ್ಷಮಾಗುಣ, ಸಾಹಿತಿ, ಸಂಸ್ಕೃತಿಗೆ ನೀರೆರೆದ ಹಿನ್ನೆಲೆಯಲ್ಲಿ ಕೃಷ್ಣದೇವರಾಯನನ್ನು ಮಹಾನುಭಾವನೆಂದು ಕರೆಯಲು ಬೇಕಾದ ಆಕರ-ಪರಿಕರಗಳತ್ತ ಗಮನ ಹರಿಸಬೇಕಾಗಿದೆ.

ಹೆಚ್ಚಿನ ಓದಿಗಾಗಿ :

ಶಿವಪ್ರಸಾದ ಟಿ ಆರ್ ; **ಶ್ರೀ ಕೃಷ್ಣ ದೇವರಾಯ,**
ಪ್ರ : ಚಿಂತನಗಂಗಾ ಪ್ರಕಾಶನ ಬೆಂಗಳೂರು 2009

ಮುರಿಗೆಪ್ಪ ಎ (ಸಂ) ; **ಕೃಷ್ಣ ದೇವರಾಯ ಆಯ್ದ ಲೇಖನ ಸಂಪುಟ,**
ಪ್ರ: ಪ್ರಸಾರಾಂ ಕನ್ನಡ ವಿ.ವಿ. ಹಂಪಿ 2008

ರಾಬರ್ಟ್ ಸಿವೆಲ್ ; **'ಮರೆತು ಹೋದ ಮಹಾ ಸಾಮ್ರಾಜ್ಯ, ವಿಜಯನಗರ'**
ಕನ್ನಡಕ್ಕೆ ಸದಾನಂದ ಕನವಳ್ಳಿ. ಪ್ರ: ಕನ್ನಡ ವಿ.ವಿ. ಹಂಪಿ 1995

ಜಿ.ಎಸ್. ದೀಕ್ಷಿತ್ : **ಶ್ರೀ ಕೃಷ್ಣ ದೇವರಾಯ – ಜೀವನ ಸಾಧನೆಗಳು**
ಪ್ರ: ಪ್ರಾಚ್ಯ ಸಂಶೋಧನಾ ಮಂಡಳಿ ಕಮಲಾಪುರ 1998

ಪರಶಿವ ಮೂರ್ತಿ (ಸಂ) : **ಶ್ರೀ ಕೃಷ್ಣ ದೇವರಾಯನ ಶಾಸನಗಳು**
ಪ್ರ: ಕನ್ನಡ ವಿಶ್ವ ವಿದ್ಯಾಲಯ ಹಂಪಿ ವಿದ್ಯಾರಣ್ಯ 2009

ಕೃಷ್ಣ ದೇವರಾಯನ ವಂಶಪರಂಪರೆ

ಡಾ. ಮುಕುಂದ ಪ್ರಭು

ಕೃಷ್ಣ ದೇವರಾಯನ ವಂಶಪರಂಪರೆಯ ಬಗ್ಗೆ ತಿಳಿದು ಕೊಳ್ಳುವುದಕ್ಕೆ ಮುಂಚಿತವಾಗಿ ವಿಜಯ ನಗರ ಸಾಮ್ರಾಜ್ಯದ ಇತಿಹಾಸವನ್ನು ಚುಟುಕಿನಲ್ಲಿ ತಿಳಿದುಕೊಳ್ಳುವುದು ಅವಶ್ಯವಾಗಿದೆ. ವಿನಯನಗರದ ಸ್ಥಾಪನೆಯಾದದ್ದು 1336ನೇ ಇಸವಿ, ಏಪ್ರಿಲ್ 18ನೇ ತಾರೀಕಿನಂದು. ಚರಿತ್ರೆ ಪುಸ್ತಕಗಳು ತಿಳಿಸಿರುವ ಪ್ರಕಾರ ಹರಿಹರ ಮತ್ತು ಬುಕ್ಕ ಹೆಸರಿನ ಇಬ್ಬರು ವೀರರು ಶೃಂಗೇರಿ ಪುರದ ವಿದ್ಯಾರಣ್ಯ ಸ್ವಾಮಿಗಳ ಬೋಧನೆ , ಪ್ರಚೋದನೆ ಹಾಗೂ ಸಹಾಯದಿಂದ ವಿಜಯನಗರವನ್ನು ಸ್ಥಾಪಿಸಿದ್ದರು. ಇವರು ದೆಹಲೀ ಸುಲ್ತಾನರ ಸೈನ್ಯದ ಅಧಿಕಾರಿಗಳಾಗಿದ್ದು, ಅವರ ರಾಜ್ಯದ ವಿಸ್ತರಣೆಗಾಗಿ ಕಾರ್ಯನಿರತರಾಗಿದ್ದವರನ್ನು ಶ್ರೀ ವಿದ್ಯಾರಣ್ಯರು ಸಂಧಿಸಿ, ಮುಸಲ್ಮಾನರ ಅಧಿಕಾರ ತುಂಗಭದ್ರೆಯ ದಕ್ಷಿಣಕ್ಕೂ ಹರಡಿದರೆ, ದಕ್ಷಿಣ ಭಾರತದ ಎಲ್ಲ ಪವಿತ್ರ ಕ್ಷೇತ್ರಗಳು, ದೇವಾಲಯಗಳು, ಮಠ ಮಾನ್ಯಗಳು ನಾಶವಾಗಿ ಅವುಗಳ ಸಂಪತ್ತು ಸೂರೆಯಾಗುತ್ತದೆ, ಪ್ರಜೆಗಳ ಸಂಪತ್ತು ನಾಶವಾಗುತ್ತದೆ, ಪ್ರಜೆಗಳಲ್ಲಿ ಹಲವರು ಇವರ ದಾಸರಾಗುತ್ತಾರೆ, ಹಿಂದೂ ಧರ್ಮದ ಸರ್ವನಾಶವಾಗಬಹುದು, ಆದುದರಿಂದ ಅವರನ್ನು ತಡೆಗಟ್ಟುವುದು ಅತ್ಯಂತ ಅವಶ್ಯವೆಂದು ಇವರಿಗೆ ಮನಗಾಣಿಸಿದರು. ಬಲಶಾಲಿಯಾದ ಸೈನ್ಯವನ್ನು ಕಟ್ಟಬೇಕಾದರೆ ಅಪಾರ ಸಂಪತ್ತಿನ ಅವಶ್ಯಕತೆಯಿದೆ ಯಷ್ಟೆ? ಕತೆಗಳಲ್ಲಿ ಶ್ರೀ ವಿದ್ಯಾರಣ್ಯರು ಕನಕವೃಷ್ಟಿ (ಚಿನ್ನದ ಮಳೆ) ಯನ್ನು ತರಿಸಿದರು, ಆ ಸಂಪತ್ತು ಸೇನೆ ಕಟ್ಟಲು ವಿನಿಯೋಗವಾಯಿತು ಎಂದಿದೆ. ವಾಸ್ತವವು ಶೃಂಗೇರಿ ಮಠ ದಲ್ಲಿ ಸುಮಾರು ಐದು ಶತಮಾನಗಳ ಕಾಲದಿಂದ ಸಂಗ್ರಹವಾಗಿದ್ದ ಸಂಪತ್ತನ್ನು ವಿದ್ಯಾರಣ್ಯರು ಇವರಿಗೆ ಸೇನೆ ಕಟ್ಟಲು ಒದಗಿಸಿದರು ಎಂಬುದು.

ಸುಮಾರು ಹತ್ತು ವರ್ಷಗಳ ಒಳಗೆ ಈ ಸಹೋದರರು, ಹಾಗೂ ಇವರ ಇನ್ನೂ ಮೂವರು ಸೋದರರು, ಸಂಬಂಧಿಗಳು ಆಸುಪಾಸಿನ ಹಿಂದೂ ಪಾಳೆಯಗಾರಾರು, ಮರಿರಾಜರನ್ನೆಲ್ಲ ಸಂಧಾನ ಮೂಲಕ ಒಪ್ಪಿಸಿ, ರಾಜ್ಯವನ್ನು ವಿಸ್ತರಿಸಿದರು. ವಿಜಯನಗರದ ಸ್ಥಾಪನೆಯ ಸಮಯಕ್ಕೆ ಐದಾರು ವರ್ಷ ಮೊದಲೇ

ಆಂಧ್ರದ ಪ್ರೋಲಯ ನಾಯಕ, ಕಾಪಯ ನಾಯಕರು 75 ಪಾಳೆಯಗಾರರನ್ನು ಒಟ್ಟುಗೂಡಿಸಿ ಮುಸ್ಲಿಂ ಅರಸರನ್ನು ಹಿಮ್ಮೆಟ್ಟಿಸುವ ಕಾರ್ಯವನ್ನು ಪ್ರಾರಂಭಿಸಿದ್ದರೂ ಹರಿಹರ ಬುಕ್ಕರಿಗೆ ಪ್ರೇರಣೆಯನ್ನೂ, ಸಹಕಾರವನ್ನೂ ಒದಗಿಸಿತು. ಇಸವಿ 1344-45ರಲ್ಲಿ ಹರಿಹರನು ತುಳುನಾಡನ್ನು ಗೆದ್ದುಕೊಂಡ. 1346ರಲ್ಲಿ ಸಂಗಮನ ಮಕ್ಕಳಾದ ಹರಿಹರ, ಬುಕ್ಕ, ಕಂಪಣ್ಣ, ಮಾರಪ, ಮುದ್ದಪ, ಕಂಪಣ್ಣನ ಮಗ ಕುಮಾರ ಸೋಮಣ್ಣ, ಅಳಿಯ ಬಲ್ಲಪ್ಪ ದಣ್ಣಾಯಕರು ತಮ್ಮ ಅಧಿಕಾರಿಗಳೊಡನೆ ಶೃಂಗೇರಿಗೆ ಬಂದು ತಮ್ಮ ರಾಜ್ಯವನ್ನು ಪಶ್ಚಿಮ ಸಮುದ್ರದಿಂದ ಪೂರ್ವ ಸಮುದ್ರದ ವರೆಗೆ ವಿಸ್ತರಿಸಿದ್ದನ್ನು ದಾಖಲಿಸಲು ಶೃಂಗೇರಿ ಮಠಕ್ಕೆ ಹಲವು ದಾನಗಳನ್ನು ಮಾಡಿದರು. ಶೃಂಗೇರಿಯಲ್ಲಿ ಇರುವ ಶಿಲಾಶಾಸನ(ಎಪಿಗ್ರಾಫಿಯಾ ಕರ್ನಾಟಿಕಾ, ಪರಿಷ್ಕೃತ ಸಂಪುಟ 11, ಶೃಂಗೇರಿ 1) ದಲ್ಲಿ ಈ ಎಲ್ಲರೂ ಮಹಾಮಂಡಳೇಶ್ವರರು. ಈ ಶಾಸನದ ಸಾಲು 34ರಲ್ಲಿ ತುಳುನಾಡಿನ ರಾಣಿ ಆಲುಪ ಚಿಕ್ಕಾಯಿ ತಾಯಿಯು ಅಲ್ಲಿದ್ದು ಮಠಕ್ಕೆ ಭೂಮಿದಾನ ಮಾಡಿದ ವಿವರಗಳಿವೆ. ಇವಳ ಬಿರುದುಗಳು ಶ್ರೀ ಮತ್ತು ಪಾಂಡ್ಯ ಚಕ್ರವರ್ತಿ, ಅರಿರಾಯ ಬಸವ ಶಂಕರ, ರಾಯ ಗಜಾಂಕುಳ, ಶ್ರೀ ವೀರ ಅವಳ ಸ್ಥಾನಮಾನಗಳನ್ನು ಸೂಚಿಸುತ್ತವೆ. ಸಂಗಮನ ಮಕ್ಕಳು ಸ್ಥಾಪಿಸಿದುದರಿಂದ ಇವರನ್ನು ಸಂಗಮವಂಶದವರೆಂದು ಇತಿಹಾಸಕಾರರು ಕರೆದಿದ್ದಾರೆ. ಸಾಮ್ರಾಜ್ಯವನ್ನು ಆಳಿದ ನಾಲ್ಕು ವಂಶಗಳಲ್ಲಿ ಈ ವಂಶ ಮೊದಲನೆಯದು.

ಸಂಗಮ ವಂಶದ ಕೊನೆಗಾಲದ ಅರಸರು - ಮಲ್ಲಿಕಾರ್ಜುನ, ಎರಡನೇ ವಿರೂಪಾಕ್ಷ, ರಾಜಶೇಖರ ಮತ್ತು ಪ್ರೌಢರಾಯರು ಅಸಮರ್ಥರು ಹಾಗೂ ದುರ್ವ್ಯಸನಿಗಳು ಆಗಿದ್ದು, ಸಾಮ್ರಾಜ್ಯವು ಒಡೆದು ಹೋಳಾಗುವ ಸಾಧ್ಯತೆ ಇದ್ದುದರಿಂದ, ಬ್ರಹ್ಮನಿ ಮತ್ತು ಇತರ ಮುಸ್ಲಿಂ ಅರಸರು ರಾಜ್ಯದ ಭಾಗಗಳನ್ನು ವಶಪಡಿಸಿಕೊಳ್ಳುತ್ತಿದ್ದುದರಿಂದ, ಸಾಮ್ರಾಜ್ಯವನ್ನು ಉಳಿಸುವ ಉದ್ದೇಶದಿಂದ, ರಾಜ್ಯದ ಪೂರ್ವಭಾಗವನ್ನು ಆಳುತ್ತಿದ್ದ ಸಾಳ್ವ ನರಸಿಂಹನೆಂಬ ವೀರಯೋಧನು ಸಾಮ್ರಾಜ್ಯದ ಆಡಳಿತವನ್ನು ತಾನೇ ವಹಿಸಿಕೊಂಡು, ದಂಗೆ ಎದ್ದ ಪಾಳಯಗಾರರನ್ನೂ, ಮುಸ್ಲಿಂ ಅರಸರನ್ನೂ ಸೋಲಿಸಿದ. ಈತನ ರಾಜ್ಯಭಾರದ ಅವಧಿ 1486-91 ಪೂರ್ಣಯುದ್ಧಗಳಲ್ಲೇ ಕಳೆಯಿತು. ಇವನಿಂದ ವಿಜಯನಗರ ಸಾಮ್ರಾಜ್ಯವನ್ನು ಆಳಿದ ಎರಡನೇಯ ವಂಶ " ಸಾಳ್ವವಂಶ ಪ್ರಾರಂಭವಾಯಿತು.

ಇಲ್ಲಿ, ನಾವು ಹೆದ್ದಾರಿಯನ್ನು ಬಿಟ್ಟು ಸೀಳುಹೋದ ಕಾಲ್ದಾರಿಯಲ್ಲಿ ಕ್ರಮಿಸಿ ನಗಿರೆ ಅಥವಾ ಗೇರುಸೊಪ್ಪೆ ಎಂಬ ಚಿಕ್ಕರಾಜ್ಯದ ಬಗೆಗೆ ತಿಳಿದುಕೊಳ್ಳುವ ಅವಶ್ಯಕತೆ ಇದೆ. ಈ ನಗಿರೆ ರಾಜ್ಯ ಮತ್ತು ಹಾಡುವಳ್ಳಿ-ಸಂಗೀತಪುರ ಎಂಬ ಎರಡು ರಾಜ್ಯಗಳ ಬಗ್ಗೆ ಲಭ್ಯವಿದ್ದ ಶಾಸನಾಧಾರಗಳನ್ನು ವಿವರವಾಗಿ ವಿಶ್ಲೇಷಿಸಿ ಕಿನ್ನಿಗೋಳಿಯಿಂದ ಪ್ರಕಟವಾಗುವ "ಯುಗಪುರುಷ" ಮಾಸ ಪತ್ರಿಕೆಯಲ್ಲಿ "ತುರುನಾಡು ತುಳುನಾಡಾಗಿಲ್ಲ" ಎಂಬ ಲೇಖನಮಾಲೆಯ ಕಂತು 6 ಮತ್ತು 8 (ಎಪ್ರಿಲ್ 1965, ಅಗೋಸ್ತ್ 1965)ರಲ್ಲಿ ನಾನು ಬರೆದಿರುತ್ತೇನೆ. ಇಲ್ಲಿ ಚಿಕ್ಕದಾಗಿ ಬರೆಯಲು ಮಾತ್ರ ಸಾಧ್ಯ.

ಮೂಡಬಿದರೆಯ ತ್ರಿಭುವನ ತಿಲಕ ಚೂಡಾಮಣಿ ಬಸದಿಯಲ್ಲಿರಯವ ಎರಡು ಶಿಲಾಶಾಸನಗಳಲ್ಲಿ ಈ ಅರಸುತನಗಳ ವಿವರಗಳು ಲಭ್ಯ. ಶಾಸನಗಳ ಪ್ರಕಾರ ನಗಿರೆ ರಾಜ್ಯದ ಮೂಲ ಪುರುಷನಾರಣಾಂಕ, ಆ ಮೇಲೆ ಅನುಕ್ರಮವಾಗಿ ಹೊನ್ನ ನರೇಂದ್ರ, (ಅಳಿಯ) ಕಾಮನೃಪ, (ಅಳಿಯ) ಮಂಗರಸ, (ಅಳಿಯ) ಹೈವರಾಜ-(ಕ್ರಿ.ಶ. 1398), (ಅಳಿಯ) ಸಂಗಮ (1418), (ಅಳಿಯ) ಕೇಶವ (1425), (ಅಳಿಯ) ಸಂಗಮ (1431), ಹಿರಿಯ ಭೈರವ (1462), ತಮ್ಮ (ಅಳಿಯ ಕೂಡ) ಇಮ್ಮಡಿ ಭೈರವ, ಯುವರಾಜ ಅಂಬಿರಾಯ (1462), ಯುವರಾಜ ಸಾಳ್ವಮಲ್ಲ (1472), (ಅಳಿಯ) ಸಾಳ್ವ ದೇವರಾಯ (1482-1494), ಇಮ್ಮಡಿ ಸಾಳ್ವದೇವರಾಯ (1520-1527), ಅಳಿಯ ಇಮ್ಮಡಿ ಸಾಳುವ ಕೃಷ್ಣ (1530-1548) ಆಳ್ವಿಕೆ ನಡೆಸಿದರು. ಈ ವಂಶದ ಮೂಲ ಪುರುಷರು ತುಳುನಾಡಿನಿಂದ ವಲಸೆ ಹೋಗಿ, ಈಗಿನ ಕನ್ನಡ ಜಿಲ್ಲೆಯ ಹೊನ್ನಾವರದಿಂದ ಪೂರ್ವಭಾಗಕ್ಕೆ ಸುಮಾರು 16ಮೈಲು ದೂರದಲ್ಲಿ ಶರಾವತಿ ನದಿಯ ದಂಡೆಯಲ್ಲಿರುವ ಗೇರುಸೋಪ್ಪೆಯ ಸುತ್ತಲಿನ ಪ್ರದೇಶವನ್ನು ಸ್ವಾಧೀನ ಪಡಿಸಿ ರಾಜ್ಯವನ್ನು ಕಟ್ಟಿದರು. ಡೇನ್ವರ್ಸ್ ಎಂಬ ಲೇಖಕರು ತಾನು ಬರೆದಿರುವ "ಭಾರತದಲ್ಲಿ ಪೋರ್ತುಗೀಸರು"(PORTUGUESE IN INDIA) ಗ್ರಂಥದಲ್ಲಿ ನಗಿರೆ ಅರಸರು ತುಳುವದಿಂದ ಬಂದವರು ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಮೈಸೂರು ರಾಜ್ಯದ ಪುರಾತತ್ವ ವಿಭಾಗದ 1910-1917 ಸಾಲಿನ ವರದಿಯಲ್ಲಿ "ಇವರು ಆಳುತ್ತಿದ್ದ ಪ್ರದೇಶವನ್ನು ತುಳುವವೆಂದು ಹೇಳಿರಬಹುದು" ಎಂದು ಇದೆ. ಇವರು ಜೈನ ಮತಾವಲಂಬಿಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಅಳಿಯ ಕಟ್ಟು ಕಟ್ಟಲೆಗಳು ಜಾರಿಯಲ್ಲಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಾಗಲಿ, ಕರ್ನಾಟಕದ ಬೇರೆ

ಯಾವ ಪ್ರದೇಶದಲ್ಲೇ ಆಗಲಿ, ಅಳಿಯ ಸಂತಾನದ ಕಟ್ಟು ಕಟ್ಟಲೆಗಳು ಜಾರಿಯಾಗಿರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜೈನರು ಅಳಿಯ ಸಂತಾನದವರೇ. ಬೇರೆ ಯಾವ ಪ್ರದೇಶದಲ್ಲೂ ಜೈನರಲ್ಲಿ ಅಳಿಯಸಂತಾನವಿಲ್ಲ. ನಗಿರೆಯ ಅರಸರು ಅಳಿಯಸಂತಾನ ಪದ್ಧತಿಯ ಪ್ರಕಾರ ಆಳ್ವಿಕೆ ನಡೆಸುತ್ತಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಉತ್ತರ ಕನ್ನಡದಲ್ಲಿ ಜಾರಿ ಇಲ್ಲದ ಪದ್ಧತಿಯನ್ನು ಇವರು ಯಾಕೆ ಸ್ವೀಕರಿಸಿದರು ಎಂಬುದಕ್ಕೆ ಕಾರಣ ಅವರ ಕುಲಾಚಾರ. ಆಚಾರಗಳಲ್ಲಿ ಕುಲಾಚಾರವೇ ಶ್ರೇಷ್ಠವೆಂದು ಶಾಸ್ತ್ರಗಳು ಹೇಳುತ್ತವೆ. ಪ್ರಾಯಃ ಇವರು ರಾಜ್ಯಕಟ್ಟಿಕೊಂಡ ಮೊದಲಿಗೆ ತುಳು ಭಾಷೆಯನ್ನು ಆಡುತ್ತಿರಬಹುದು. ಈ ಕಾರಣದಿಂದ ಅವರು ಆಳುತ್ತಿದ್ದ ಪ್ರದೇಶವನ್ನು "ತುಳು ದೇಶ"ವೆಂದು ಕರೆದಿರಬಹುದು. ಶಾಸನಗಳಲ್ಲಿ "ತುಳುನಾಡು" ಎಂಬ ಉಲ್ಲೇಖವಿಲ್ಲ – ತುಳು ದೇಶ, ತುಳು ಎಂಬ ಉಲ್ಲೇಖಗಳು ಮಾತ್ರ ಇವೆ. ವಿಜಯ ನಗರದ ಅರಸರು ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶವನ್ನು ಬಾರಕೂರು ರಾಜ್ಯ, ಮಂಗಳೂರು ರಾಜ್ಯಗಳೆಂದು ವಿಭಾಗಿಸಿ ಈ ಎರಡು ರಾಜ್ಯಗಳನ್ನು ಆಳಲು ತಮ್ಮವರೇ ಆದ ದಂಡ ನಾಯಕರನ್ನು, ಅಧಿಕಾರಿಗಳನ್ನು ನೇಮಕಮಾಡಿದ್ದು, ಈ ಪ್ರದೇಶವನ್ನು ಕೆಳದಿಯ ಸದಾಶಿವ ನಾಯಕನಿಗೆ ಆಳಲು ಕೊಡುವವರೆಗೆ, ನೇರವಾಗಿ ತಮ್ಮ ಅಧಿಕಾರಿಗಳ ಮೂಲಕ ಆಡಳಿತವನ್ನು ನಡೆಸುತ್ತಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ವಿಜಯ ನಗರದ ಸಾಮ್ರಾಟರು ನಗಿರೆಯವರನ್ನು ಸೋಲಿಸಿ ಸಾಮಂತರನ್ನಾಗಿ ಮಾಡಿ, ಆ ಪ್ರದೇಶದ ಆಡಳಿತೆಗೆ ಅವರನ್ನೇ ನೇಮಿಸಿದರು. ಅಲ್ಲಿಂದ ಶಾಸನಗಳಲ್ಲಿ ಇವರು ತುಳು–ಹೈವೆ–ಕೊಂಕಣಗಳ ಮಂಡಳೇಶ್ವರರಾಗಿ ಕಾಣಬರುತ್ತಾರೆ. ಈ "ತುಳು" ಅವರ ನಗಿರೆ ರಾಜ್ಯವೇ ಹೊರತು ದಕ್ಷಿಣ ಕನ್ನಡದ ತುಳುನಾಡಲ್ಲ. ದಕ್ಷಿಣ ಕನ್ನಡವನ್ನು ಬಾರಕೂರು ರಾಜ್ಯ, ಮಂಗಳೂರುಗಳನ್ನಾಗಿ ವಿಭಜಿಸಿದ್ದುದನ್ನು ಈ ಮೇಲೆಯೇ ತಿಳಿಸಿದೆ. ವಿಜಯ ನಗರದ ಸಾಮ್ರಾಟರು ತಮ್ಮ ಸಾಮಂತರಲ್ಲಿ ವೀರರು, ಬಲಶಾಲಿಗಳು, ಸಮರ್ಥ್ಯ ಇದ್ದವರನ್ನು ತಮ್ಮ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಆಡಳಿತ ನಡೆಸಲು ನೇಮಿಸುತ್ತಿದ್ದರು. ವಿಜಯನಗರ ಸಾಮ್ರಾಜ್ಯವನ್ನು ಆಳಿದ ಎರಡನೇ ವಂಶವನ್ನು ಇತಿಹಾಸಕಾರರು "ಸಾಳ್ವ " ವಂಶವೆಂದು ಹೆಸರಿಸಿದ್ದಾರೆ. ಈ ಸಾಳ್ವವಂಶದವರು ಪ್ರಾಯಃ ನಗಿರೆ ಸಾಳ್ವರ ಸಂಬಂಧಿಗಳು ಇರಬಹುದೆಂದು ನನ್ನ

ಊಹೆ. ಹಲವು "ಸಾಳ್ವ"ರು ವಿಜಯನಗರದ ಆಡಳಿತದಲ್ಲಿ ಅಮಾತ್ಯರಾಗಿ, ದಂಡನಾಯಕರಾಗಿ, ರಾಜ್ಯಪಾಲರಾಗಿದ್ದುದನ್ನು ಶಾಸನಗಳಲ್ಲಿ ನಾವು ಕಾಣುತ್ತೇವೆ.

ಸಾಳ್ವ ನರಸಿಂಹನು ಸಂಗಮ ವಂಶದ ಕೊನೆಯ ಅರಸರನ್ನು ಬದಿಗೊತ್ತಿ ಸಾಮ್ರಾಜ್ಯದ ರಕ್ಷಣೆಗಾಗಿ ದುಡಿದನೆಂದು ಈ ಮೊದಲೆ ಹೇಳಿದ್ದೇನೆ. ಈತ ವಿಜಯನಗರದ ಪೂರ್ವಕ್ಕೆ ತೆಲುಗು ರಾಜ್ಯವನ್ನು ವಿರೂಪಾಕ್ಷನ ಕಾಲದಲ್ಲಿ ಆಳುತ್ತಿದ್ದ. ಇವನ ಕಾಲವಾದ ಮೇಲೆ ಇವನ ಎರಡನೆಯ ಮಗ ಇಮ್ಮಡಿ ನರಸಿಂಹ (ಧರ್ಮರಾಯ) ಪಟ್ಟಕ್ಕೆ ಬರುತ್ತಾನೆ. ಇವನ ಆಳ್ವಿಕೆಯ ಅವಧಿಯು ದಂಗೆ ಎದ್ದ ಸಾಮಂತರನ್ನು ಅಂಕೆಗೆ ತರುವುದರಲ್ಲೇ ಕಳೆಯಿತು. ಇವನ ಶಾಸನಗಳಲ್ಲಿ ಇವರು, ತಾವು ಯಾದವ ಕುಲದವರೆಂದು ಹೇಳಿಕೊಂಡು, ಪುರೂರವನಿಂದ ಅನೇಕ ಅರಸುಗಳಾದ ಮೇಲೆ ಗುಂಡ ದೇವ, ಗುಂಡ ಬೊಮ್ಮ, ಮಾದಿರಾಜ, ಗೌತಯ, ವೀರಹೋಂಬಳ, ಸಾಳುವ ಸಾವಿತ್ರಿ ಮತ್ತು ಮಂಗ ದೇವರ ಹೆಸರುಗಳನ್ನು ಹೇಳಿ ಸಾಳುವ ಮಂಗದೇವನಿಗೆ "ಕಠಾರಿ ಸಾಳುವ' ಎಂಬ ಬಿರುದು ಇತ್ತೆಂದು ಹೇಳಲ್ಪಟ್ಟಿದೆ. (ನಗಿರೆಯ ಅರಸರಲ್ಲೂ ತ್ರಿಭುವನ ಕಠಾರಿ, ಕಠಾರಿ ತ್ರಿನೇತ್ರ, 'ಕಠಾರಿ ಸಾಳುವ' ಎಂಬ ಇರುವುದನ್ನೂ, ಬಿರುದುಗಳು ಯಾವೊಬ್ಬ ಅರಸನದ್ದಲ್ಲ, ವಂಶಕ್ಕೆ ಸೇರಿದವು ಎಂಬುದನ್ನೂ ಮರೆಯಬಾರದು.) ಗೌತಯ ಮಲ್ಲ ದೇವನ ಮಗ, ಇವನ ಮಗ ಗುಂಡ, ಗುಂಡನಿಗೆ ಮುದಿಪ್ರಾಯದಲ್ಲಿ ನರಸಿಂಹ (ನರಸ ನಾಯಕ) ಹುಟ್ಟಿದನೆಂದೂ, ಇವನ ಬಿರುದುಗಳನ್ನು ಹೇಳಿ, ಈತನಿಗೂ, ಈತನ ರಾಣಿ ರಂಗಮಾಂಬೆಗೂ ಇಮ್ಮಡಿ ನರಸಿಂಹ ಹುಟ್ಟಿದನೆಂದು ಹೇಳಿರುತ್ತದೆ. ಸಾಳ್ವ ನರಸಿಂಹನು ಕರಾವಳಿ ಕರ್ನಾಟಕದಲ್ಲಿ ಎದ್ದ ದಂಗೆಗಳನ್ನು ಅಡಗಿಸಿ, ವಿಜಯ ನಗರದ ಅಧಿಪತ್ಯವನ್ನು ಸ್ಥಾಪಿಸಿದ. ಕರಾವಳಿಯ ರೇವುಗಳು (ಬಂದರುಗಳು) ಸಾಮ್ರಾಜ್ಯಕ್ಕೆ ವ್ಯಾಪಾರದಿಂದ ಬರುವ ಉತ್ಪತ್ತಿ ಮತ್ತು ಸೈನ್ಯದ ಅಶ್ವದಳಕ್ಕೆ ಬೇಕಾಗುವ ಕುದುರೆಗಳನ್ನು ಅರೇಬಿಯಾ ಮತ್ತು ಪರ್ಸಿಯಾದಿಂದ ಆಮದು ಮಾಡಿಕೊಳ್ಳಲು ಅತ್ಯವಶ್ಯವಾಗಿದ್ದುವು.

ಸಾಳ್ವನರಸಿಂಹನು ಚಂದ್ರಗಿರಿ ರಾಜ್ಯವನ್ನಾಳುತ್ತಿದ್ದಾಗ, ಈತನ ಸೈನ್ಯದ ಅಧಿಕಾರಿಯಾಗಿಯೂ, ಅಮಾತ್ಯನಾಗಿಯೂ ತುಳುವ ಈಶ್ವರನು ದುಡಿಯುತ್ತಿದ್ದ. ಈತ ವೀರನು, ಸಾಹಸಿಯೂ ಆಗಿದ್ದು ನರಸಿಂಹನ ವಿಶ್ವಾಸಕ್ಕೆ ಪಾತ್ರನಾಗಿದ್ದ. ಈತ ಉದಯ ಗಿರಿಯ ಪಾದಯಾತ್ರೆಯ ಸಮಯದಲ್ಲಿ ನರಸಿಂಹನಪರವಾಗಿ ಹೋರಾಡಿದ್ದ.

ಈ ತುಳುವ ಈಶ್ವರನ ಮಗ ನರಸನಾಯಕ, ಈತನೂ ಶೌರ್ಯ ಸಾಹಸಕ್ಕೆ ಪ್ರಸಿದ್ಧ ನಾಯಕನಾಗಿದ್ದ ಸಾಳುವ ನರಸಿಂಹನು ಸಾಯುವುದಕ್ಕೆ ಮೊದಲು, ತನ್ನ ಇಬ್ಬರು ಮಗಂದಿರನ್ನು ನರಸ ನಾಯಕನ ಕೈಗೆ ಒಪ್ಪಿಸಿದ. ನರಸಿಂಹನು ಸತ್ತಾಗ ಆತನ ಹಿರಿಯ ಮಗನನ್ನು ಅರಸನೆಂದು ಸಾರಲಾದರೂ, ನರಸ ನಾಯುಕನ ಪ್ರತಿಸ್ಪರ್ಧಿಯಾಗಿದ್ದ ತಿಮ್ಮರಸ (ಸಾಳ್ವತಿರುಮಲ) ಆತನನ್ನು ಕೊಲ್ಲಿಸಿದ. ಆಗ ತುಳುವ ನರಸ ನಾಯಕನು, ಸಾಳ್ವ ಇಮ್ಮಡಿ ನರಸಿಂಹನನ್ನು ಸಿಂಹಾಸನಕ್ಕೆ ಏರಿಸಿ, ತಾನೂ ಸರ್ವಾಧಿಕಾರವನ್ನು ವಹಿಸಿಕೊಂಡ. ಹೆಸರು ಮಾತ್ರಕ್ಕೆ ಇಮ್ಮಡಿ ನರಸಿಂಹನು ಅರಸನಾಗಿದ್ದ. ನರಸ ನಾಯಕನು ಸಾಳ್ವ ಬಿರುದಾವಳಿಯನ್ನೂ, ರಾಜ್ಯತ್ವವನ್ನು ಸೂಚಿಸುವ ಬಿರುದುಗಳನ್ನು ಧರಿಸಲು ಪ್ರಾರಂಭಿಸಿದ. (ಸಂಗಮ ವಂಶ-ಸಾಳ್ವವಂಶ-ನಗಿರೆಯವರು ಮತ್ತು ತುಳುವ ವಂಶಗಳೊಳಗೆ ಸಂಬಂಧಗಳು ಇದ್ದುವೆಂಬುದನ್ನು ಮರೆಯಬಾರದು). ಇಮ್ಮಡಿ ನರಸಿಂಹನಿಗೂ, ತಿರುಮಲನನ್ನು ಕೊಲ್ಲಿಸಿದ ತಿಮ್ಮರಸನಿಗೂ ಸ್ನೇಹ ಬೆಳೆದಾಗ ನರಸನಾಯಕನು ವಿಜಯನಗರಕ್ಕೆ ಮುತ್ತಿಗೆ ಹಾಕಿ, ತಿಮ್ಮರಸನನ್ನು ಕೊಲ್ಲಿಸಿ, ಇಮ್ಮಡಿ ನರಸಿಂಹನನ್ನು ಪೆನುಗೊಂಡೆಗೆ ಕಳುಹಿಸಿ, ತನ್ನ ವಿಶ್ವಾಸಿ ಯೋಧರು ಅವನ ಮೇಲೆ ಕಾವಲು ಇಡುವಂತೆ ವ್ಯವಸ್ಥೆ ಮಾಡುತ್ತಾನೆ. ಮುಂದೆ ಹದಿಮೂರುವರುಷಗಳ ಕಾಲ ನರಸನಾಯಕನೇ ರಾಜ್ಯಭಾರವನ್ನು ನಡೆಸಿದರೂ, ತಾನು ಸಾಳ್ವನರಸಿಂಹನಿಗೆ ಮಾತು ಕೊಟ್ಟಂತೆ ಉದಯಗಿರಿ, ರಾಯಚೂರು ಸಾಮಂತರು ವಿಜಯ ನಗರದ ಒಡೆತನಕ್ಕೆ ಸೇರುವಂತೆ ಮಾಡುತ್ತಾನೆ. ತನ್ನ ಕಾಲದಲ್ಲಿ ದಂಗೆ ಎದ್ದವರನ್ನೆಲ್ಲಾ ಸೋಲಿಸಿ ವಿಜಯ ನಗರದ ಭದ್ರತೆಯನ್ನು ಕಾಪಾಡುತ್ತಾನೆ. ಕ್ರಿ.ಶ. 1496ರ ಸುಮಾರಿಗೆ ದಕ್ಷಿಣ ಭಾರತದಲ್ಲಿ ಕಿರುಕುಳ ಎಬ್ಬಿಸುತ್ತಿದ್ದ ಕೊನೆಗೆ ರಾಜ, ಸ್ಥಳೀಯ ಚೋಳ-ಚೇರ ಅರಸರು, ಮಧುರೆಯ ಮಾನಭೂಷನನ್ನು ಸೋಲಿಸಿದ. ಕಾವೇರಿ ನದಿಗೆ ಸೇತುವೆ ಹಾಕಿ ಶ್ರೀರಂಗ ಪಟ್ಟಣದ ಪಾಳೆಯಗಾರ ನಂಜರಾಜನನ್ನು ಸೋಲಿಸಿದ. ಕರಾವಳಿಯಲ್ಲಿ ಗೋಕರ್ಣದವರೆಗೂ ದಂಡಯಾತ್ರೆ ನಡೆಸಿ ಸಾಮ್ರಾಜ್ಯವನ್ನು ಉಳಿಸಿಕೊಂಡ.

ಇಲ್ಲಿಂದ ಮುಂದೆ, ವಿಜಯನಗರ ಸಾಮ್ರಾಜ್ಯವನ್ನು ಆಳಿದ ಮೂರನೇ ರಾಜವಂಶ ತುಳುವವಂಶದ ಬಗ್ಗೆ ತಿಳಿದುಕೊಳ್ಳೋಣ. ಇದನ್ನು ತಿಳಿದುಕೊಂಡಾಗ, ಪ್ರಬಂಧದ ವಿಷಯ "ಕೃಷ್ಣದೇವರಾಯನ ವಂಶ ಪಾರಂಪರೆ"ಯನ್ನು ತಿಳಿದುಕೊಂಡಂತೆ ಆಗುತ್ತದೆ.

ತುಳುವ ನರಸನಾಯಕನು ರಾಜ್ಯಭಾರವನ್ನು ನಡೆಸುತ್ತಿದ್ದರೂ, ತನ್ನನ್ನು ಸಾಮ್ರಾಟನೆಂದು ಸಾರಿರಲಿಲ್ಲ. ಇವನ ಮರಣನಂತರ, ಇವನ ಮೂವರು ಹೆಂಡಂದಿರಲ್ಲಿ ಹಿರಿಯಳಾದ ತಿಪ್ಪಾಜಿ ಅಥವಾ ತಿಪ್ಪಾಂಬೆಯ ಮಗ ವೀರನರಸಿಂಹನು ರಾಜ್ಯಭಾರವನ್ನು ಕೈಗೊಳ್ಳುತ್ತಾನೆ. 1505ರಲ್ಲಿ ಇಮ್ಮಡಿ ಸಾಳ್ವನರಸಿಂಹನ ಕೊಲೆಯಾದ ಮೇಲೆ ತಾನೇ ಅರಸನೆಂದು ಸಾರುತ್ತಾನೆ. ಇವನಿಂದ ವಿಜಯ ನಗರದ ತುಳುವ ವಂಶವು ಪ್ರಾರಂಭವಾಗುವುದಾದರೂ, ವಾಡಿಕೆಯಲ್ಲಿ ತುಳುವ ಈಶ್ವರ- ಮಗ ತುಳುವ ನರಸನಾಯಕ-ಮಗಂದಿರು 1. ವೀರನರಸಿಂಹ 2. ಕೃಷ್ಣದೇವರಾಯ 3. ಅಚ್ಯುತರಾಯ 4. ರಂಗ ರಾಜ ಹೀಗೆ ಕಾಣಿಸುತ್ತಾರೆ. ತುಳುವ ವೀರನಾರಸಿಂಹನ ಆಳ್ವಿಕೆಯ 6 ವರ್ಷಗಳು ಸಾಮಂತರುಗಳನ್ನು ಬಗ್ಗು ಬಡಿಯುದರಲ್ಲಿ ಕಳೆದವು. ಉಮ್ಮತ್ತೂರಿನ ಮತ್ತು ಶ್ರೀರಂಗಪಟ್ಟಣದ ಪಾಳೆಯಗಾರರು ದಂಗೆ ಎಬ್ಬಿಸಿದಾಗ ವೀರನರಸಿಂಹನು ತನ್ನ ಮಲತಾಯ ಮಗ ಕೃಷ್ಣದೇವರಾಯನನ್ನು ರಾಜಧಾನಿಯಿಂದ ಆಡಳಿತ ನೋಡಿಕೊಳ್ಳಲು ನೇಮಿಸಿದ. ಮೂರು ತಿಂಗಳು ಕಳೆದರೂ ಇವನ ದಂಡಯಾತ್ರೆ ಸಫಲವಾಗಿಲ್ಲ, ಆದರೆ ತುಳು ರಾಜ್ಯದಲ್ಲಿ ಕೆಲವು ಯುದ್ಧಗಳಲ್ಲಿ ಗೆದ್ದ. ಈತ ಪೋರ್ತುಗೀಸರೊಡನೆ ಸಂಬಂಧ ಸ್ಥಾಪಿಸಲು ಪ್ರಯತ್ನ ಮಾಡಿದ. 1506 ರ ಸುಮಾರಿಗೆ ಗೋವೆಯನ್ನು ಸ್ವಾಧೀನ ಪಡಿಸುವ ಪ್ರಯತ್ನ ಮಾಡಿದ. ಪರಿಣಾಮವೇನಾಯಿತು ಎಂಬುದು ತಿಳಿದು ಬಂದಿಲ್ಲ. ಉಮ್ಮತ್ತೂರಿನ ಮೇಲೆ ಪುನಃ ದಂಡಯಾತ್ರೆ ಪ್ರಾರಂಭಿಸುತ್ತಿದ್ದಂತೆಯೇ ಆತ ತೀರಿಕೊಂಡ. ಈತ ಹಲವು ದೇವಾಲಯಗಳಿಗೆ ಬೃಹತ್ತಾದ ದಾನಗಳನ್ನು ಮಾಡಿದನೆಂದು ಶಾಸನಗಳು ತಿಳಿಸುತ್ತವೆ. ರಾಮೇಶ್ವರ, ಶ್ರೀರಂಗ, ಕುಂಭ ಕೋಣ, ಚಿದಂಬರಂ, ಶ್ರೀಶೈಲ, ಕಾಂಚೀಪುರ, ಕಾಳಹಸ್ತಿ, ಮಹಾನದಿ ಮತ್ತು ಗೋಕರ್ಣಗಳಿಗೆ ದಾನಕೊಟ್ಟದ್ದು ಅವನ ಶಾಸನಗಳಲ್ಲಿ ಕಂಡುಬರುತ್ತದೆ.

ಕೃಷ್ಣದೇವರಾಯನ ಪಟ್ಟಾಭಿಷೇಕ ಕ್ರಿ.ಶಕದ 1509 ರ ಶ್ರೀಕೃಷ್ಣಜನ್ಮಾಷ್ಟಮಿ ಯಂದು ನೆರವೇರಿತು. ಒಂದು ರೀತಿಯಲ್ಲಿ ಈ ಅರಸ ಕೃಷ್ಣನ ಅವತಾರವೆಂದು ಸೂಚಿಸುವ ಉದ್ದೇಶವಿದ್ದಿರಲೂ ಬಹುದು. ಈತನ ಆಡಳಿತ (1509-1529) ವಿಜಯನಗರ ಸಾಮ್ರಾಜ್ಯದ ಸ್ವರ್ಣಯುಗವೆಂದು ಪರಿಗಣಿಸಲ್ಪಟ್ಟಿದೆ. ಇವನ ದಿಗ್ವಿಜಯದ ಬಗ್ಗೆ, ಹಲವು ದೇವಾಲಯಗಳ ದೇವರುಗಳಿಗೆ ಸಾವಿರಗಟ್ಟಲೆ ಮಾಣಿಕ್ಯ, ನೀಲ,

ಪಚ್ಚೆ, ವೈಡೂರ್ಯ, ಗೋಮೇದಿಕ, ವಜ್ರ, ಪುಷ್ಯರಾಗ, ಮುತ್ತುಗಳನ್ನು ಕೊಟ್ಟಿದ್ದು, ಚಿನ್ನದ ಆಭರಣಗಳು, ಅವುಗಳ ತೂಕ ಇತ್ಯಾದಿ ವಿವರಗಳು ಶಾಸನಗಳಲ್ಲಿ ದಾಖಲಾಗಿದೆ. ಈತನ ರಾಣಿಯರೂ ದೇವರಿಗೆ ಚಿನ್ನದ ಹರಿವಾಣ, ಬಟ್ಟಲು, ಗಿಂಡಿಗಳನ್ನೂ, ರತ್ನಖಚಿತ ಪದಕಗಳನ್ನು ಕೊಟ್ಟ ವಿವರಗಳಿವೆ. ಆದರೆ ಅವನ ವ್ಯಕ್ತಿತ್ವದ ಬಗ್ಗೆ ನಾವು ತಿಳಿದು ಕೊಂಡದ್ದು ಅವನನ್ನು ನೋಡಿದ ದೊಮಿಂಗೋ ಪಾಯಸ್ ಎಂಬ ಯಾತ್ರಾರ್ಥಿಯು ಬರೆದಿರುವ ವಿವರಗಳಿಂದ ಮಾತ್ರ. ಕೃಷ್ಣದೇವರಾಯನು ಪಟ್ಟಕ್ಕೆ ಬಂದು ಹತ್ತು ವರ್ಷಗಳಾದ ಮೇಲೆ ಸುಮಾರು 1519–20ರ ಸಮಯದಲ್ಲಿ ಈತ ರಾಯನನ್ನು ಕಂಡು ಹೀಗೆ ಬರೆದಿದ್ದಾನೆ. “ಈ ಅರಸನು ಮಧ್ಯಮ ಎತ್ತರದವನಾಗಿದ್ದು ಗೌರವರ್ಣದವ, ಕಟ್ಟುಮಸ್ತಾದ ಆಳು, ಸಪೂರವಲ್ಲ, ಸ್ವಲ್ಪ ಥೋರವೇ, ಮುಖದಲ್ಲಿ ಸಿಡುಬಿನ ಕಲೆಗಳಿವೆ. ಅತ್ಯಂತ ಭಯವನ್ನು ಹುಟ್ಟಿಸುವ ಹಾಗೂ ದೋಷರಹಿತ (ಪರಿಪೂರ್ಣ) ಅರಸ. ಪ್ರಸನ್ನತೆಯ ಸ್ವಭಾವ, ಆತ್ಮೀಯವಾಗಿ ಮಾತನಾಡಿಸಿ, ಅವರ ವ್ಯವಹಾರಗಳ ಬಗೆಗೆ ಕೇಳಿ ತಿಳಿದುಕೊಳ್ಳುತ್ತಾನೆ. ಈತ ಮಹಾ ಪ್ರಭು ಮತ್ತು ನ್ಯಾಯ ಪಕ್ಷಪಾತಿ, ಆದರೆ ಕೆಲಮೊಮ್ಮೆ ಪಕ್ಕನೆ ಉದ್ವೇಗಕ್ಕೆ ಒಳಗಾಗುತ್ತಾನೆ. ದಿನಾ ವ್ಯಾಯಾಮ ಮಾಡಿ, ಕುದುರೆ ಸವಾರಿ ಮಾಡಿ ದೇಹವನ್ನು ಬಲಿಷ್ಠವಾಗಿರುವಂತೆ ನೋಡಿಕೊಳ್ಳುತ್ತಾನೆ. ಇವನ ಉದಾತ್ತ ಸಾನಿಧ್ಯ ಇವನ ಸಂಪರ್ಕಕ್ಕೆ ಬಂದ ಎಲ್ಲರ ಮೇಲೂ ಆಹ್ಲಾದಕರವಾದ ಮುದ್ರೆಯನ್ನು ಒತ್ತುತ್ತದೆ. ಯುದ್ಧಗಳಲ್ಲಿ ತನ್ನ ಸೇನೆಯನ್ನು ತಾನೇ ಮುನ್ನಡೆಸುತ್ತಾನೆ. ರಾತ್ರಿ, ಗಾಯಾಳುಗಳನ್ನು ಕಂಡು ಅವರ ಶುಶ್ರೂಷೆ ಮತ್ತು ವೈದ್ಯಕೀಯ ಅವಶ್ಯಕತೆಗಳನ್ನು ಪೂರೈಸುವಂತೆ ತಾನೇ ವ್ಯವಸ್ಥೆ ಮಾಡುತ್ತಾನೆ. ಈತ ಎಲ್ಲರಿಂದಲೂ ಗೌರವಿಸಲ್ಪಡುತ್ತಾನೆ, ಎಲ್ಲರೂ ಇವನನ್ನು ಪ್ರೀತಿಸುತ್ತಾರೆ. ಎಲ್ಲ ವಿಧಗಳಲ್ಲೂ ಈತ ಪರಿಪೂರ್ಣನಾದ ರಾಜ.”

ಕೊನೆಯಲ್ಲಿ, ಕೃಷ್ಣದೇವರಾಯನ ಶಾಸನದಲ್ಲಿ ಈತನ ವಂಶಪರಂಪರೆಯ ನಿರೂಪಣೆ ಈ ರೀತಿ ಇದೆ. (ಕ್ರಿ.ಶ. 1512ರ ಬೇಲೂರು ನಂಬ್ರ 172–ತಾಮ್ರ ಪಟ) ಸಂಗ್ರಹ : ಕ್ಷೀರಸಾಗರ ಮಥನ – ಚಂದ್ರ – ಬುಧ – ಪುರೂರವ, ನಹಿಷ, ಯಯಾತಿ, ತುರ್ವಸು – ಈ ವಂಶದಲ್ಲಿ:

ಪಂಕ್ತಿ 8/9 “ತದ್ವಂಶೇ ದೇವಕೀಜಾ ನಿರ್ದಿಡಿಪೇ ತಿಂಮ ಭೂಪತಿ : ।
ಯಶಸ್ವೀ ತುಳುವೇಂದ್ರೇಷು ದೋ: ಕೃಷ್ಣ ಇವಾನ್ವಯೇ ॥ ”

ಮೇಲೆ ಉದ್ಧರಿಸಿದ ಶ್ಲೋಕದಲ್ಲಿ "ಯಶಸ್ವೀ ತುಳುವೇಂದ್ರೇಷು" ಎಂಬುದು ತಿಮ್ಮ ಭೂಪತಿಗೆ ಅನ್ವಯವಾಗುತ್ತದೆ. ಈ ಶಾಸನದಿಂದ ಮೂಡಿ ಬಂದ ಹೊಸ ವಿವರ, ಆವರೆಗೆ ಈಶ್ವರ ನಾಯಕನಿಂದ ಪ್ರಾರಂಭವಾಯಿತೆಂದು ಹೇಳಲ್ಪಡುತ್ತಿದ್ದ ತುಳುವ ವಂಶವನ್ನು ಒಂದು ತಲೆಮಾರು ಹಿಂದಕ್ಕೆ, ತಿಮ್ಮ ಭೂಪತಿಯಿಂದ ಪ್ರಾರಂಭವಾಯಿತೆಂದು ಹೇಳಿರುವುದು ಅಲ್ಲಿಂದ ಮುಂದೆ ತಿಮ್ಮ ಭೂಪತಿ ಹೆಂಡತಿ – ದೇವಕಿ; ಮಗ ಈಶ್ವರನಾಯಕ–ಹೆಂಡತಿ–ಬುಕ್ಕಮಾ, ನರಸನಾಯಕ–ಈತನಿಗೆ ಮೂವರು ರಾಣಿಯರು 1. ತಿಪ್ಪಾಂಬೆ 2. ನಾಗಲಾ ದೇವಿ 3. ಓಬಾಂಬಿಕೆ. ಇವರಲ್ಲಿ ತಿಪ್ಪಾಂಬೆಯ ಮಗ ವೀರ ನರಸಿಂಹ, ನಾಗಲಾದೇವಿಯ ಮಗ ಕೃಷ್ಣ ದೇವರಾಯ. ಶಾಸನವು ಕೃಷ್ಣ ದೇವರಾಯನ ಆಳ್ವಿಕೆಯಲ್ಲಿ ಹೊರಟಿರುವುದರಿಂದ ಅಚ್ಯುತರಾಯ – ರಂಗರಾಜರ ಹೆಸರು ಇದರಲ್ಲಿ ನನಗೆ ಕಾಣಲಿಲ್ಲ.

ಈ ಶ್ಲೋಕದಲ್ಲಿ " ತುಳುವೇಂದ್ರ" ಶಬ್ದವು ನಗಿರೆ ತುಳು ರಾಜ್ಯದ ಒಡೆಯನೆಂದು ಹೇಳುತ್ತದೆಯೇ ವಿನಾ ದಕ್ಷಿಣ ಕನ್ನಡದ ತುಳು ನಾಡನ್ನು ಸೂಚಿಸುವುದಿಲ್ಲವಾದರೂ ನರಸ ನಾಯಕನು ತುಳು ನಾಡನ್ನು ಪುನಃ ಗೆದ್ದುಕೊಂಡಿರುವುದು ನಿಜವೇ ಈ ಶಬ್ದವನ್ನು

" ತುಳುವಂಶದ ಇಂದ್ರ " ನೆಂದೂ ಅರ್ಥೈಸಬಹುದು. ಕೃಷ್ಣದೇವರಾಯನು ತೆಲುಗುಭಾಷೆಯಲ್ಲಿ ಒಂದು ಶ್ರೇಷ್ಠವಾದ ಕಾವ್ಯವನ್ನು ರಚಿಸಿದ್ದಾನೆ. ಅದರ ಹೆಸರು " ಆಮುಕ್ತ ಮಾಲ್ಯದ ". ಇದಕ್ಕೆ "ವಿಷ್ಣು ಚಿತ್ತೀಯ" ಎಂದೂ ಹೆಸರಿದೆ. ಕೃಷ್ಣ ದೇವರಾಯನು ಒಮ್ಮೆ ವಿಜಯವಾಡದಲ್ಲಿ ಬೀಡು ಬಿಟ್ಟಿರುವಾಗ ರಾತ್ರೆ ಕನಸಿನಲ್ಲಿ ಅವನಿಗೆ "ಆಂಧ್ರ ವಿಷ್ಣು "ವು ದರ್ಶನ ಕೊಟ್ಟು, ತನಗೆ ತೆಲುಗು ಭಾಷೆಯಲ್ಲಿ ಒಂದು ಸುಂದರ ಕಾವ್ಯವನ್ನು ಬರೆದು ಅರ್ಪಿಸಬೇಕು ಎಂದು ಹೇಳಿದನಂತೆ. ರಾಯನಿಗೆ ಗಾಬರಿ, ತನ್ನಿಂದ ತೆಲುಗಿನಲ್ಲಿ ಉತ್ತಮ ಕಾವ್ಯ ಬರೆಯಲು ಸಾಧ್ಯವೇ ಎಂಬ ಸಂಶಯ ಅವನನ್ನು ಕಾಡುತ್ತಿತ್ತು. ತಾನು ಕನ್ನಡರಾಯನೆಂದು ಅವನೇ ಹೇಳಿಕೊಂಡಿದ್ದಾನೆ.

"ತೆಲುಗು ದೇಲ ಎನ್ನ ದೇಶಂಬು ತೆಲುಗೇನು "।
ಕನ್ನಡ ರಾಯ ಎಲ್ಲ ನೃಪಲುಗೊಲುವ ಎರುಗವೇ ಬಾಸಾಡಿ ॥

ಈ ಕಾವ್ಯವು ಮಹಾಕಾವ್ಯವಾಗದಿದ್ದರೂ, ತೆಲುಗಿನ ಉತ್ತಮ ಐದು ಕಾವ್ಯಗಳಲ್ಲಿ ಒಂದು ಎಂದು ಹೇಳುತ್ತಾರೆ. ಆಂಧ್ರದ ಒಬ್ಬ ಎಂಜಿನಿಯರ್ ಎಂ.ಆರ್.ಪಿ.ಎಲ್.ನಲ್ಲಿ ಯಂತ್ರಗಳನ್ನು ಸ್ಥಾಪಿಸಲು ಬಂದವ ನನ್ನನ್ನು ಭೇಟಿಯಾದ. ಪ್ರವೃತ್ತಿಯಲ್ಲಿ ತಾನು ತೆಲುಗು ಕವಿ ಎಂದೂ, ಕೃಷ್ಣ ದೇವರಾಯನ ಬಗ್ಗೆ ಒಂದು ದೊಡ್ಡ ಕಾವ್ಯವನ್ನು ಬರೆಯುತ್ತಾ ಇದ್ದೇನೆ. ಕೆಲವು ಐತಿಹಾಸಿಕ ವಿವರಗಳನ್ನು ಒದಗಿಸಬೇಕೆಂದು ನನ್ನೊಡನೆ ಒಂದೆರಡು ಗಂಟೆಗಳ ಕಾಲ ಕಳೆದ.

ನಾನು ಡಾ। ಸೂರ್ಯನಾಥ ಕಾಮತರನ್ನು ನೋಡಿ, ಅವರು ಕೃಷ್ಣದೇವರಾಯ ಎಂಬ ಐತಿಹಾಸಿಕ ಕಾದಂಬರಿ ಬರೆದಿದ್ದಾರೆ ಎಂದು ಸಾಗಹಾಕಲು ಪ್ರಯತ್ನ ಮಾಡಿದೆ. ಈ ಪುಣ್ಯಾತ್ಮ ಡಾ। ಕಾಮತರರನ್ನು ಕಂಡದ್ದು ಮಾತ್ರವಲ್ಲ, ಮಿಥಿಕ್ ಸೊಸೈಟಿಯಿಂದ ಪುಸ್ತಕಗಳನ್ನು ಓದಲು ಅವಕಾಶವನ್ನು ಮಾಡಿಕೊಂಡ. ನಾಲ್ಕೈದು ತಿಂಗಳುಗಳು ಕಳೆದ ಮೇಲೆ ಒಂದು ದಿನ ನನ್ನ ಮನೆಗೆ ಬಂದು ಅವನು ಬರೆದ ದೊಡ್ಡ ಕಾವ್ಯದ ಪ್ರತಿಯನ್ನು ಕೊಟ್ಟು ಹೋದ. ಆ ಪುಸ್ತಕ ಎಲ್ಲೋ ಕೈ ತಪ್ಪಿ ಇಟ್ಟಿರುವುದು ಸಿಗಲಿಲ್ಲ . ಆದರೆ ಆಗ ಮಾಡಿ ಕೊಂಡ ಟಿಪ್ಪಣಿಗಳು ಈ ಪ್ರಬಂಧವನ್ನು ತಯಾರಿಸಲು ಸಹಾಯಕವಾದುದು ಮಾತ್ರ ನಿಜ.

ವಸಾಹತು ಶಾಹಿ ಇತಿಹಾಸ ಮತ್ತು ಚರಿತ್ರೆಯ ವಾಸ್ತವ

ವಿಜಯನಗರ ಸಾಮ್ರಾಜ್ಯದ ಕುರಿತು ಒಂದು ಇಣುಕುನೋಟ

ಡಾ. ಬಾರ್ಕೂರು ಉದಯ

20ನೇ ಶತಮಾನದ ಆರಂಭದಿಂದ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಉತ್ತರ ಭಾರತದಿಂದ ದಕ್ಷಿಣಕ್ಕೆ ವೃದ್ಧಿಯಾಗುತ್ತಿದ್ದ ಮುಸ್ಲಿಂರ ದಾಳಿಯನ್ನು ತಡೆದು ಹಿಂದು ಸಂಸ್ಕೃತಿ ಮತ್ತು ಧರ್ಮವನ್ನು ರಕ್ಷಣೆ ಮಾಡಲು ರಚನೆಯಾದ ರಾಜ್ಯಾಡಳಿತವೆಂದು ಪ್ರತಿಬಿಂಬಿಸಲಾಗಿತ್ತು. ವಿಜಯನಗರದರಸರ ಸೈನಿಕ ಕಾರ್ಯಾಚರಣೆಯು ಮುಸ್ಲಿಂರ ಸವಾಲುಗಳನ್ನು ಎದುರಿಸುವ ನೆಪದಲ್ಲಿ ನಡೆದದ್ದು ಎಂದು ಚಿತ್ರಿಸಲಾಗಿದೆ. ಮುಖ್ಯವಾಗಿ, ಬಹಮನಿಸುಲ್ತಾನರು ಮತ್ತು ಅವರ ನಂತರದ ಮುಸ್ಲಿಂ ಗುಂಪುಗಳು. ವಿಜಯನಗರ ಸಾಮ್ರಾಜ್ಯವನ್ನು ವೈಭವೀಕರಿಸಿ ಮುಸ್ಲಿಂರ ದಾಳಿ ಮತ್ತು ಆಕ್ರಮಣದಿಂದ ದಕ್ಷಿಣ ಭಾರತದ ಜನತೆಯನ್ನು ರಕ್ಷಣೆ ಮಾಡಿದ ರಾಜಮನೆತನವೆಂದು ಈ ವಾದದಲ್ಲಿ ಸಮರ್ಥಿಸಲಾಗಿದೆ. ಇವರು ಮುಸ್ಲಿಂರ ಆಕ್ರಮಣದ ವಿರುದ್ಧ ರಕ್ಷಣಾವ್ಯೂಹವಾಗಿ ಬೆಳೆದು ದಕ್ಷಿಣ ಭಾರತದ ಜನಸಮುದಾಯವನ್ನು ರಕ್ಷಣೆ ಮಾಡಿದವರೆಂದು ಪರಿಭಾವಿಸಲಾಗಿದೆ. ವಿಜಯನಗರ ಸಾಮ್ರಾಜ್ಯ ಎಂದರೆ 'ಹಿಂದೂ ಸಾಮ್ರಾಜ್ಯ' ಎಂದೂ, 'ಕನ್ನಡಮಾತೆ' ಎಂದೂ ಚಿತ್ರಿಸಲಾಗಿದೆ. ಈ ವಾದವನ್ನು ಪರಿಚಯಿಸುವ ವ್ಯಕ್ತಿ ರಾಬರ್ಟ್ ಸಿವೆಲ್. 1900ರಲ್ಲಿ ಇವನು *ಎ ಫರ್‌ಗಾಟನ್ ಎಂಪೈರ್* ಎಂಬ ಗ್ರಂಥವನ್ನು ವಿದೇಶಿ ಪ್ರವಾಸಿ ಕಥನಗಳನ್ನು ಆಧಾರವಾಗಿಟ್ಟುಕೊಂಡು ವಿಜಯನಗರದ ಇತಿಹಾಸವನ್ನು ರಚಿಸುತ್ತಾನೆ. ಬ್ರಿಟೀಷ್ ವಸಾಹತುಶಾಹಿ ಸರಕಾರ ಈ ಕೆಲಸಕ್ಕೆ ಸಿವೆಲ್‌ನನ್ನು ನೇಮಿಸಿದ್ದು, ಆ ಸರಕಾರಕ್ಕೆ ಅದರದ್ದೇ ಆದ ಸ್ವಾರ್ಥ ಕಾರಣವೂ ಇತ್ತು. ಭಾರತಕ್ಕೆ ಬರುವ ಬ್ರಿಟೀಷ್ ಅಧಿಕಾರಿಗಳಿಗೆ ಭಾರತದ ಚರಿತ್ರೆಯನ್ನು ಪರಿಚಯಿಸುವ ಯೋಜನೆ ಒಂದು. ಇನ್ನೊಂದು ಉದ್ದೇಶ ಭಾರತದಲ್ಲಿ ಬ್ರಿಟೀಷ್ ವಸಾಹತುಶಾಹಿ ಪ್ರಭುತ್ವ ಮುಂದುವರಿಯುವುದು ಅನಿವಾರ್ಯ ಎಂಬ ನಂಬಿಕೆಯನ್ನು ಭಾರತೀಯರಲ್ಲಿ ಹುಟ್ಟು ಹಾಕುವುದು. ಸಿವೆಲ್ ಇದೇ ಆಲೋಚನೆಯನ್ನು ಇಟ್ಟುಕೊಂಡೆ ಮದ್ರಾಸ್ ಪ್ರೆಸಿಡೆನ್ಸಿಯುದ್ದಕ್ಕೂ ವಿಭಜಿಸಿ ಆಳುವ

ನೀತಿಯನ್ನು ಮುಂದಿಟ್ಟುಕೊಂಡು ತನ್ನ ಕೃತಿಯನ್ನು ರಚನೆ ಮಾಡಿದನು. ಮುಸ್ಲಿಂ ದಾಳಿ ಮತ್ತು ಆಕ್ರಮಣದಿಂದ ಹಿಂದು ಸಂಸ್ಕೃತಿಯ ರಕ್ಷಣೆ ವಿಜಯನಗರದ ಸಾಮ್ರಾಜ್ಯದ ಮೂಲ ಉದ್ದೇಶ ಎಂಬ ವಾದವನ್ನು ಮಂಡಿಸುವ ಸಿವೆಲ್ ಕೋಮುವಾದಿ ಇತಿಹಾಸ ರಚನೆ ದೃಷ್ಟಿಕೋನವನ್ನು ಪರಿಚಯಿಸುತ್ತಾನೆ. ಜೊತೆಗೆ ವಿಜಯನಗರ ಸಾಮ್ರಾಜ್ಯದ ಅವನತಿಗೂ ಬಹಮನಿಸುಲ್ತಾನರ ಅಳಿದುಳಿದ ಪ್ರತಿನಿಧಿಗಳ ಪ್ರತಿದಾಳಿಯೇ ಕಾರಣವೆಂದು ಸಮರ್ಥಿಸುತ್ತಾ ಹಿಂದೂ-ಮುಸ್ಲಿಂ ಸಮುದಾಯಗಳ ನಡುವೆ ಭಿನ್ನಾಭಿಪ್ರಾಯವನ್ನು ಹುಟ್ಟುಹಾಕಿದನು. ಈ ತರದ ಚರಿತ್ರೆ ರಚನೆ ಬ್ರಿಟೀಷ್ ಸರಕಾರಕ್ಕೆ ಅನಿವಾರ್ಯವು ಹೌದು. ಬ್ರಿಟೀಷ್ ಸಾಮ್ರಾಜ್ಯಶಾಹಿ ತಲುಪಿದ ಅತ್ಯುನ್ನತ ಘಟ್ಟವದು. ಭಾರತದಲ್ಲಿ ಹೇರಳವಾಗಿರುವ ಸಂಪತ್ತು ಬ್ರಿಟನ್ನಿನಲ್ಲಿ ಕೈಗಾರೀಕರಣ ಪ್ರಕ್ರಿಯೆ ಮುಂದುವರಿಯಲು ಅಗತ್ಯವಾಗಿತ್ತು. ಭಾರತವಿಡೀ ಬ್ರಿಟೀಷರು ಆಮದು ಮಾಡಿಕೊಳ್ಳುವ ಸಿದ್ಧವಸ್ತುಗಳಿಗೆ ಮಾರುಕಟ್ಟೆಯಾಗಬೇಕಿತ್ತು. ಹಾಗೇನೇ, ಬ್ರಿಟನ್ನಿನಲ್ಲಿ ಹರಿದು ಹೋಗುತ್ತಿದ್ದ ಹೆಚ್ಚುವರಿ ಬಂಡವಾಳವನ್ನು ಲಾಭದಾಯಕವಾಗಿ ಹೂಡಲು ಭಾರತದಂತಹ ವಿಶಾಲ ಭೂಮಿಕೆ ಬೇಕಿತ್ತು. ಇವೆಲ್ಲವನ್ನು ಈಡೇರಿಸಿಕೊಳ್ಳಲು ಒಂದು ವೇದಿಕೆ ನಿರ್ಮಾಣ ಮಾಡಿ ಭಾರತೀಯರ ಬೆಂಬಲ ಪಡೆದುಕೊಳ್ಳುವ ಯೋಜನೆ ರೂಪುಗೊಂಡಿತು. ನೀವು ಭಾರತೀಯರು ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿರುವುದು ಹೊಸತೇನು ಅಲ್ಲ. ಈಗಾಗಲೇ ಇಲ್ಲಿ ಪರಕೀಯರ ದಾಳಿ ನಡೆದಿದೆ. ನಿಮಗೆ ಪರಕೀಯರು ನಡೆಸಿದ ಆಡಳಿತದ ಪರಿಚಯವು ಇದೆ. ನಾವು ಸಾಮ್ರಾಜ್ಯ ಸ್ಥಾಪನೆ ಮಾಡುವುದರಿಂದ ನಮಗೆ ಒಳ್ಳೆಯದು ಆಗುತ್ತದೆ. ನಮ್ಮ ಆಡಳಿತದಡಿಯಲ್ಲಿ ನಿಮಗೆ ರಕ್ಷಣೆ ಸಿಗುತ್ತದೆ ಮತ್ತು ನೀವು ಅನುಭವಿಸಿದ ಗತವೈಭವವನ್ನು ಪುನ: ಅನುಭವಿಸಲು ನಮ್ಮ ಸಾಮ್ರಾಜ್ಯ ಅನುಕೂಲ ವಾತಾವರಣ ನಿರ್ಮಿಸುತ್ತದೆ ಎಂಬ ವಾದವನ್ನು ಮುಂದಿಟ್ಟರು. ಇಲ್ಲಿ ಒಡೆದು ಆಳುವ ತಂತ್ರವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಕುತಂತ್ರವಿದೆ. ಹಿಂದೂಗಳ ಗತವೈಭವದ ನಾಶ ಮುಸ್ಲಿಂ ದಾಳಿಯಿಂದ ನಡೆಯಿತು ಎಂದು ಮಂಡಿಸುತ್ತಾ ತಮ್ಮ ಪಕ್ಕದಲ್ಲೆ ಇದ್ದವರನ್ನು ಅನುಮಾನದಿಂದ ನೋಡಲು ಹಿಂದೂ ಸಮೂದಾಯಗಳಿಗೆ ಪ್ರೇರಣೆ ನೀಡಿದರು. ಗತಿಸಿ ಹೋದ ವೈಭವವನ್ನು ನೀವು ನಮ್ಮನ್ನು ಬೆಂಬಲಿಸಿದರೆ ಮರುಸ್ಥಾಪನೆ ಮಾಡುವ ಜವಾಬ್ದಾರಿ ನಮ್ಮದು ಎಂದು ಬ್ರಿಟೀಷ್ ಬರಹಗಾರರು ಹೇಳಿ ವಾಸ್ತವವನ್ನು ಮುಚ್ಚಿಡುವ ಪ್ರಯತ್ನ ಮಾಡಿದರು. ಇದನ್ನು ನಾವು

ಒಪ್ಪಿಕೊಂಡಿದ್ದೇವೆ. ಬಹುಶ: ಇದೇ ಗುಂಗಿನಿಂದಲೇ ವಿಜಯನಗರ ಸಾಮ್ರಾಜ್ಯವನ್ನು ಹಿಂದೂ ಸಾಮ್ರಾಜ್ಯವೆಂತಲೂ, ಕನ್ನಡ ಸಾಮ್ರಾಜ್ಯವೆಂತಲೂ ಭಾರಿ ವೈಭವ, ಸಮೃದ್ಧಿಯ ಪರಾಕಾಷ್ಠೆ ಎಂತಲೂ ಇವತ್ತು ಸಾರ್ವಜನಿಕವಾಗಿ ಹಾಡಿ ಹೊಗಳುತ್ತಿದ್ದೇವೆ.

ಬ್ರಿಟೀಷರ ಈ ಎಜೆಂಡಾದಲ್ಲಿ ತಮ್ಮ ಅಸ್ತಿತ್ವಕ್ಕೆ ಭಾರತೀಯರ ಒಗ್ಗಟ್ಟಿನ ಪ್ರತಿಭಟನೆ ವ್ಯಕ್ತವಾಗಬಾರದು ಎಂಬ ಉದ್ದೇಶವಿದ್ದು, ಅದನ್ನು ತಡೆಯುವ ಕೆಲಸ ಈ ವಾದದಲ್ಲಿ ಅಡಗಿದೆ. ಯಾವುದೇ ಕಾರಣಕ್ಕೂ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳು ಒಂದಾಗಬಾರದು, ಅವರ ನಡುವೆ ಅಂತರವಿದ್ದರೆ ಮಾತ್ರ ತಮ್ಮ ಪ್ರಭುತ್ವಕ್ಕೆ ಸಂಘಟಿತ ವಿರೋಧ ವ್ಯಕ್ತವಾಗುವುದಿಲ್ಲ ಎಂಬ ನಿಲುವು ಇದರ ಹಿಂದೆ ಇದೆ. ಈ ಅಭಿಪ್ರಾಯದಲ್ಲಿ ವಿಜಯನಗರದ ಅರಸರಿಗೆ ಹಿಂದೂ ರಾಷ್ಟ್ರೀಯತೆ ಪ್ರೇರಣೆ ನೀಡಿದೆ ಎಂದು ಗ್ರಹಿಸಲಾಗಿದ್ದು, ಇವತ್ತಿನ ಹಿಂದೂ ರಾಷ್ಟ್ರೀಯವಾದ ಗತಕಾಲದಲ್ಲೂ ನಡೆದಿತ್ತು ಎಂದು ಸಮರ್ಥಿಸುವ ಹುನ್ನಾರು ಕಾಣುತ್ತದೆ.

ಒಂದನೆಯದಾಗಿ, ವಿಜಯನಗರ ಸಾಮ್ರಾಜ್ಯವನ್ನು ರಾಷ್ಟ್ರದ ಪರಿಕಲ್ಪನೆಯಡಿಯಲ್ಲಿ ಪ್ರಚಾರ ಮಾಡುವುದು ಮತ್ತು ಇಸ್ಲಾಂ ಧರ್ಮದ ವಿರುದ್ಧ ಹಿಂದೂ ಧರ್ಮವನ್ನು ರಕ್ಷಿಸುವ ಅನಿವಾರ್ಯತೆ ಈ ರಾಜಮನೆತನಕ್ಕೆ ಇತ್ತು ಎಂಬುದು ಇತಿಹಾಸ ರಚನಾ ಕ್ರಮಕ್ಕೆ ವಿರುದ್ಧವಾಗುತ್ತದೆ. ಏಕೆಂದರೆ ಹದಿನಾಲ್ಕನೆ ಶತಮಾನದಲ್ಲಿ ಹಿಂದೂ ಧರ್ಮ ಒಗ್ಗಟ್ಟಾಗಿತ್ತು ಎಂದು ಹೇಳುತ್ತಾ ರಾಷ್ಟ್ರ ಎಂಬ ಗಡಿಯೊಳಗೆ ಎಲ್ಲಾ ಸಮುದಾಯದವರು ಭಾವನಾತ್ಮಕವಾಗಿ ಒಂದಾಗಿದ್ದರು ಎಂದು ಹೇಳಲಾಗದು. ಹಾಗೇನೆ ವಿಜಯನಗರದ ಸೈನಿಕ ಚಟುವಟಿಕೆಗಳು ತಂತ್ರಜ್ಞಾನದಲ್ಲಿ ಮುಂದುವರಿದಿದ್ದ ರಾಜ್ಯಗಳೊಂದಿಗೆ ಸತತ ಸ್ಪರ್ಧೆಯಲ್ಲಿದ್ದರೂ ಕೂಡ ಅದೊಂದು ಆಕಸ್ಮಿಕ ಬೆಳವಣಿಗೆ ಹಾಗೂ ಪ್ರಾದೇಶಿಕ ಬೆಳವಣಿಗೆಯ ಫಲಿತಾಂಶವಾಗಿತ್ತು. ಜೊತೆಗೆ ವಿಜಯನಗರ ಸಾಮ್ರಾಜ್ಯದ ಪ್ರಭುತ್ವವನ್ನು ವಿಸ್ತರಿಸುವಲ್ಲಿ ಪ್ರಬಲ ಪ್ರತಿಸ್ಪರ್ಧಿಯಾಗಿ ಸವಾಲಾಗಿ ನಿಂತಿರುವುದು ಬಹಮನಿ ದೊರೆಗಳು ಅಲ್ಲ ಬದಲಾಗಿ ಒರಿಸ್ಸಾದ ಗಜಪತಿ ಸಾಮ್ರಾಟರು. ಇವರು ಗಜಪತಿ ರಾಜ್ಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದವರು ಮತ್ತು ಅವರು ಹಿಂದು ಅರಸರು. ಆದ ಕಾರಣ ವಾಸ್ತವದಲ್ಲಿ ಬ್ರಿಟೀಷರು ಚಿತ್ರಿಸುವ ಚಿತ್ರಣವಿರಲಿಲ್ಲ. ಈ ತರದ ಭಾವನಾತ್ಮಕವಾದ ವಾದವನ್ನು ಬದಿಗಿಟ್ಟು ಸೂಕ್ಷ್ಮವಾಗಿ ವಿಜಯನಗರದ

ಮೆಟೀರಿಯಲ್ ಕಲ್ಚರನ್ನು – ಮುಖ್ಯವಾಗಿ ವಿಜಯನಗರ ಕಾಲದ ವಾಸ್ತು ಶಿಲ್ಪಗಳನ್ನು ಗಮನಿಸಿದರೆ, ಮುಸ್ಲಿಂ ಅರಸರ ವಾಸ್ತುಶೈಲಿ ಮತ್ತು ಇಸ್ಲಾಂ ನಾಗರೀಕತೆಯು ವಿಜಯ ನಗರದ ವಾಸ್ತು ಶಿಲ್ಪದ ಮೇಲೆ ಹೆಚ್ಚು ಪ್ರಭಾವ ಬೀರಿದೆ ಎಂದು ಭಾಸವಾಗುತ್ತದೆ.

ಎರಡನೆಯದಾಗಿ, ಇನ್ನೊಂದು ವಿಚಾರ ಇಲ್ಲಿ ಗಮನಿಸಬೇಕಾಗುತ್ತದೆ. ವಿಜಯ ನಗರದರಸರು ಎಂದೂ ತಾವು ಹಿಂದೂ ಧರ್ಮದ ಉಳಿವಿಗಾಗಿ ಹೋರಾಡಬೇಕು ಎಂಬ ಧೋರಣೆಯನ್ನಾಗಲೀ, ದಕ್ಷಿಣ ಭಾರತದ ಸಮಾಜವನ್ನಾಗಲಿ ರಕ್ಷಣೆ ಮಾಡಬೇಕೆಂಬ ನಿಲುವುಗಳನ್ನು ಇಟ್ಟುಕೊಂಡು ಹೊಸ ರಾಜ್ಯಾಡಳಿತ ವ್ಯವಸ್ಥೆ ರಚಿಸಿದರು ಎಂದು ವಾದಿಸಲಾಗದು. ವಿಜಯನಗರದ ಅರಸರು ನೀತಿವಂತ ರಾಜರಾಗಿ, ಈ ಹಿಂದೆ ಆಳ್ವಿಕೆ ನಡೆಸಿದ ಆಳರಸರ ಆದರ್ಶವನ್ನು ಪಾಲಿಸಿ ಧರ್ಮಕ್ಕನುಸಾರವಾಗಿ ಆಡಳಿತ ನಡೆಸಿ ಆ ಕಾಲದ ಜನರ ಬೆಂಬಲ ಪಡೆದಿದ್ದರು ಎಂಬ ವಿಚಾರವನ್ನು ಅಲ್ಲಗಳೆಯಲಾಗದು. ಇಲ್ಲಿ ಧರ್ಮವೆಂಬ ಪದವನ್ನು ಬಳಸಿದಾಗ ಆಧುನಿಕ ಕಾಲಘಟ್ಟದಲ್ಲಿ ಬಳಕೆಯಾಗುವ ರಿಲೀಜನ್‌ಗೆ ಸಂಬಂಧ ಕಲ್ಪಿಸಲು ಅಸಾಧ್ಯ. ಅವರು ಪಾಲಿಸಿದ್ದು ಆ ಕಾಲದ ರಾಜಧರ್ಮ. ನಾವು ಇವತ್ತು ಸೆಕ್ಯೂಲರ್ ಪರಿಕಲ್ಪನೆಯಲ್ಲಿ ಇದನ್ನು ಕಲ್ಪಿಸಿಕೊಳ್ಳಬಹುದು ಅಥವಾ ಧರ್ಮ ಸಹಿಷ್ಣುತೆಯ ಹರಿಕಾರರು ವಿಜಯನಗರದರಸರು ಎಂದೂ ಕೂಡ ಲೇಬಲ್ ಮಾಡಬಹುದು. ಅವರ ಕಾಲದ ಸೈನ್ಯದಲ್ಲಿ ಅನೇಕ ಮಂದಿ ಮುಸ್ಲಿಂರು ಬಿಲ್ಲು ವಿದ್ಯೆಯಲ್ಲಿ ಪ್ರಾವೀಣ್ಯತೆ ಪಡೆದವರಿದ್ದರು. ಆಡಳಿತದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದರು. ಒಂದು ಸಮೂದಾಯವನ್ನು ಓಲೈಸುವುದಾಗಲಿ, ದೂರವಿಡುವ ಸಣ್ಣತನವಾಗಲಿ ಆ ಕಾಲದ ರಾಜರು ಪಾಲಿಸಲಿಲ್ಲ. ಅದು ಆ ನೆಲದ ಗೌರವವನ್ನು, ಸಂಪ್ರದಾಯವನ್ನು ಎತ್ತಿ ಹಿಡಿಯುವ ಧರ್ಮ. ಎಲ್ಲಾ ಧರ್ಮದವರನ್ನು, ಪಂಥದವರನ್ನು ಸಮಾನವಾಗಿ ನೋಡಿಕೊಂಡು ಆಡಳಿತ ನಡೆಸುವುದೇ ರಾಜಧರ್ಮ. ಅದನ್ನೇ ವಿಜಯನಗರದರಸರು ಪಾಲಿಸಿದ್ದು. ಇದಕ್ಕೆ ಕೋಮುವಾದಿ ಬಣ್ಣ ಬಳಿಯುವ ಅಗತ್ಯವಿಲ್ಲ.

ಮೂರನೆಯದಾಗಿ, ಸಾಮಾನ್ಯವಾಗಿ ನಾವು ಭಾರತೀಯ ಸಮಾಜದಲ್ಲಿ ಕಾಣುವುದು ಅರಸನಾದವನ ಮುಖ್ಯ ಕರ್ತವ್ಯವೇನೆಂದರೆ ಅನಾದಿ ಕಾಲದಿಂದಲೂ ಮುಂದುವರಿದು ಬಂದಿರುವ ಸಾಮಾಜಿಕ ರಚನೆಯನ್ನು ರಕ್ಷಿಸುವುದು ಮತ್ತು ಪ್ರಮುಖವಾಗಿ ಬ್ರಾಹ್ಮಣ ವರ್ಗದವರು ಅನುಭವಿಸಿಕೊಂಡು ಬಂದ ವಿಶೇಷ

ಹಕ್ಕುಗಳನ್ನು ರಕ್ಷಿಸುವಂತಹದ್ದು. ಈ ಸಂಪ್ರದಾಯವನ್ನೇ ಮುಂದುವರಿಸಿಕೊಂಡು ಬಂದ ವಿಜಯನಗರದ ಅರಸರು ವರ್ಗೀಕೃತ ಸಮಾಜದ ಹರಿಕಾರರಾಗಿ ವರ್ಣಾಶ್ರಮ ಧರ್ಮದ ನೀತಿ ರಿವಾಜುಗಳನ್ನು ಎತ್ತಿ ಹಿಡಿದರು. ಇದು ರಾಜನಾದವನ ನೈತಿಕ ಹಕ್ಕು ಮತ್ತು ಮೂಲಭೂತ ಕರ್ತವ್ಯವೂ ಹೌದು. ಅದೇ ಕಾರಣವನ್ನು ಇಟ್ಟುಕೊಂಡು ಎಲ್ಲಾ ವಿಜಯನಗರದ ಅರಸರು ತಮ್ಮ ಆಸ್ಥಾನದಲ್ಲಿ ಬ್ರಾಹ್ಮಣ ಕವಿಗಳನ್ನು, ಸಾಹಿತಿಗಳನ್ನು ಪ್ರೋತ್ಸಾಹಿಸಿದರು, ವೇದ ಉಪನಿಷತ್ತು, ಸಾಹಿತ್ಯ ಪ್ರಕಾರಗಳನ್ನು ಬ್ರಾಹ್ಮಣ ಪಂಡಿತರಿಗೆ ರಚಿಸಲು ಪ್ರೇರಣೆ ನೀಡಲಾಗಿತ್ತು. ಅರಸರ ಆಸ್ಥಾನದಲ್ಲಿ ದೊಡ್ಡ ಪ್ರಮಾಣದ ಬ್ರಾಹ್ಮಣರು ಬೇರೆ ಬೇರೆ ಹುದ್ದೆಗಳನ್ನು ಅಲಂಕರಿಸಿದ್ದರು. ಅವರ ಸೇವೆಗೆ ರಾಜನು ಭೂಮಿಯನ್ನು ಉಂಬಳಿಯಾಗಿ ನೀಡಿರುವುದು ಹಿಂದಿನಿಂದಲೂ ಬಂದಿರುವ ಸಂಪ್ರದಾಯದ ಮುಂದುವರಿದ ಭಾಗ. ಅವರ ಭೂಮಿ ಮೇಲೆ ತೆರಿಗೆ ವಿನಾಯಿತಿಯನ್ನು ಕೂಡ ನೀಡಲಾಗಿತ್ತು. ಇನ್ನೊಂದೆಡೆ ರಾಜನ ಅಸ್ತಿತ್ವ ಮತ್ತು ಪ್ರಭುತ್ವವು ನ್ಯಾಯಸಮ್ಮತವಾದುದೆಂದು ದೇವಾಲಯ ಮತ್ತು ಬ್ರಾಹ್ಮಣರು ರುಜುವಾತು ಮಾಡುವ ಸಂಪ್ರದಾಯಕ್ಕೆ ವಿಜಯನಗರದ ಅರಸರು ಹೆಚ್ಚು ಗೌರವ ಕೊಟ್ಟಿದ್ದರು. ರಾಜತ್ವದ ಹುಟ್ಟನ್ನು ನೋಡುವಾಗ ಮತ್ತು ವಂಶಪಾರಂಪರ್ಯವಾಗಿ ರಾಜತ್ವಕ್ಕೆ ಬರುವಾಗ ರಾಜರ ಮೂಲಭೂತ ಪ್ರಯತ್ನ ತಮ್ಮ ಅಸ್ತಿತ್ವವನ್ನು ಸ್ಥಾಪಿಸುವುದಾಗಿರುತ್ತದೆ. ಅವರಿಗೆ 'ಸಾಮ್ರಾಜ್ಯ' ಆಗುವ ಪರಿಕಲ್ಪನೆ ಇರುವುದಿಲ್ಲ. ರಾಜ್ಯ ಸ್ಥಾಪನೆ ಆದ ಮೇಲೆ ಧಾರ್ಮಿಕ ಅಂಗೀಕಾರ ಪಡೆದುಕೊಳ್ಳಲು ಪ್ರಯತ್ನಿಸಲಾಗುತ್ತದೆ. ಧರ್ಮಾಧಿಕಾರಿಗಳು ಸಹ ರಾಜ ಪ್ರಭುತ್ವದ ಆಶ್ರಯ ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ದೇವರ ಸೇವಕರಾಗಿ ದೇವಾಲಯಗಳ ಸಂರಕ್ಷಕರಾಗಿಯೇ ಇದ್ದುಕೊಂಡು ತನ್ನ ರಾಜತ್ವಕ್ಕೆ ಕಾನೂನು ಬದ್ಧವಾದ ರುಜುವಾತನ್ನು ದಕ್ಕಿಸಿಕೊಳ್ಳುತ್ತಿದ್ದರು. ಇದು ವಿಜಯನಗರ ಸಾಮ್ರಾಜ್ಯಕ್ಕೆ ಸೀಮಿತವಾದುದು ಅಥವಾ ಅವರು ಹೊಸತಾಗಿ ಈ ಸಂಪ್ರದಾಯವನ್ನು ಆರಂಭಿಸಿದರು ಎಂದು ಹೇಳಬೇಕಾಗಿಲ್ಲ. ಬಹುಶ: ಇತಿಹಾಸದಲ್ಲಿ ಬಂದು ಹೋದ ಎಲ್ಲಾ ಅರಸರು ತಮ್ಮ ಇರುವಿಕೆಯನ್ನು ಕಾನೂನು ಬದ್ಧವಾಗಿ ಗುರುತಿಸಿಕೊಳ್ಳಲು ದೇವಾಲಯಗಳು ಮತ್ತು ಬ್ರಾಹ್ಮಣ ಸಮುದಾಯಗಳು ಮಹತ್ವದ ಪಾತ್ರವನ್ನು ವಹಿಸಿರುವುದನ್ನು ಆಯಾಯ ಕಾಲದ ಶಾಸನಗಳನ್ನೇ ಅಧ್ಯಯನ ಮಾಡಿದರೆ ಬೆಳಕಿಗೆ ಬರುತ್ತದೆ. ಉದಾಹರಣೆಗೆ, ಹೊಯ್ಸಳರು. ಹಾಸನದ ವಿಸ್ತಾರವಾದ ಹಾಗೂ ಫಲವತ್ತಾದ ಭೂಭಾಗಕ್ಕೆ ಆರಂಭದ ದಿನಗಳಲ್ಲಿ ಹೊಯ್ಸಳರು ಹೊಸಬರು.

ಆದರೆ, ಈ ಪ್ರದೇಶಗಳನ್ನು ಆಕ್ರಮಿಸಿಕೊಂಡ ಸಂದರ್ಭದಲ್ಲಿ ಸಾಮಾನ್ಯರ ಬೆಂಬಲ ದಕ್ಕಿಸಿಕೊಂಡಿದ್ದು ಧಾರ್ಮಿಕ ಮುಖಂಡರಿಂದ, ಮುಖ್ಯವಾಗಿ ಜೈನರು ಮತ್ತು ಬ್ರಾಹ್ಮಣರಿಂದ. ಅದನ್ನು ನಿರೀಕ್ಷಿಸಿಕೊಂಡೆ ಹೊಯ್ಸಳ ರಾಜರು ದೇವಾಲಯಗಳಿಗೆ, ಜೈನ ಬಸದಿಗಳಿಗೆ ಮತ್ತು ಬ್ರಾಹ್ಮಣ ಪಂಡಿತರಿಗೆ ಯಥೇಚ್ಛವಾಗಿ ಆರ್ಥಿಕ ಸಂಪತ್ತನ್ನು ಮತ್ತು ಭೂಮಿಯನ್ನು ಉಂಬಳಿಯಾಗಿ ನೀಡಿದರು. ಇದು ತಮ್ಮ ಪ್ರಭುತ್ವವನ್ನು ಪ್ರಭಾವೀ ಗುಂಪುಗಳ ಮೂಲಕ ಕಾನೂನು ಬದ್ಧವಾಗಿ ಗಟ್ಟಿಗೊಳಿಸಲು ಬಳಸಿರುವ ತಂತ್ರ.

ರಾಜಧಾನಿ ಹಂಪಿಯಲ್ಲಿ ಸಂಗಮ ವಂಶದವರು ಬಂದು ನೆಲೆಸುವ ನಿರ್ಧಾರವೇ ಇದಕ್ಕೆ ಪೂರಕವಾದ ಅಂಶವನ್ನು ಪ್ರದರ್ಶಿಸುತ್ತದೆ. ಹಂಪಿ ಪ್ರದೇಶದಲ್ಲಿ ವಿರೂಪಾಕ್ಷ ದೇವಾಲಯ ಅದಾಗಲೇ ದೈವತ್ವದ ಖ್ಯಾತಿಯನ್ನು ಗಳಿಸಿಕೊಂಡು ಬಂದ ದೇಗುಲ. ಈ ಆಲೋಚನೆಯ ಹಿಂದೆ ಸಂಗಮರಿಗೆ, ತಮ್ಮ ವಂಶ, ರಾಜಧಾನಿ ಮತ್ತು ಸಾಮ್ರಾಜ್ಯದ ರಕ್ಷಕ ವಿರೂಪಾಕ್ಷನೆಂದೆ ಘೋಷಿಸಿಕೊಂಡು ಈ ದೇವರೆ ನಮ್ಮ ಒಡೆಯನೆಂದು ಒಪ್ಪಿಕೊಳ್ಳುವ ಇರಾದೆ ಇತ್ತು. ವಿಜಯ ನಗರದ ಅರಸರು ತಮ್ಮ ಧಾರ್ಮಿಕ ದತ್ತಿ ಉಲ್ಲೇಖಿಸುವ ತಾಮ್ರ ಶಾಸನಗಳಲ್ಲಿ ವಿರೂಪಾಕ್ಷ ದೇವರ ಹೆಸರನ್ನು ಕೆತ್ತನೆ ಮಾಡುವ ಪರಿಪಾಠ ಮಾಡಿಕೊಂಡು ಆ ದೇವರು ತಮಗೆ ಎಷ್ಟು ಆಪ್ಯಾಯಮಾನವೆಂದು ಸಾರ್ವಜನಿಕವಾಗಿ ಸಮರ್ಥಿಸಿಕೊಂಡರು. ಇನ್ನೊಂದು ನೆಲೆಯಲ್ಲಿ ಅವರು ವಿರೂಪಾಕ್ಷನನ್ನು ಸ್ವೀಕರಿಸಿಕೊಂಡಿರುವುದನ್ನು ಶ್ರುತಪಡಿಸುತ್ತಾರೆ. ಇಡೀ ಸಾಮ್ರಾಜ್ಯದೊಳಗೆ ದೇವಾಲಯಗಳಿಗೆ ದತ್ತಿ ನೀಡುವ ವಿಚಾರವನ್ನು ಉಲ್ಲೇಖಿಸುವ ಶಾಸನಗಳಲ್ಲಿ ವಿರೂಪಾಕ್ಷನ ಹೆಸರನ್ನು ನಮೂದಿಸುತ್ತಿದ್ದರು. ಈ ಧಾರ್ಮಿಕ ದತ್ತಿ ನೀಡುವವನಿಗೂ ವಿರೂಪಾಕ್ಷನ ಕೃಪೆ ತೋರಿಸುವನೆಂದು ನಂಬುವ ಆಶಯ ಈ ಸಂಪ್ರದಾಯದಲ್ಲಿ ಅಡಗಿದೆ ಮತ್ತು ವಿರೂಪಾಕ್ಷನ ಹೆಸರಿನಲ್ಲಿ ಅಂತಹ ಶಾಸನಗಳನ್ನು ಹೊರಡಿಸಿದರೆ ಆ ಶಾಸನಗಳನ್ನು ಮುಂದಿನ ತಲೆಮಾರಿನವರು ಹಾಳುಗೆಡವುದಿಲ್ಲವೆಂಬ ಪ್ರತೀತಿ ಅವರಲ್ಲಿ ಇತ್ತು.

ಇನ್ನೊಂದು ರೂಪದಲ್ಲೂ ವಿರೂಪಾಕ್ಷನನ್ನು ಅವರು ಸಾರ್ವತ್ರಿಕವಾಗಿ ಒಪ್ಪಿಕೊಂಡಿರುವುದು ಬೆಳಕಿಗೆ ಬರುತ್ತದೆ. ರಾಜಧಾನಿಯ ಸುತ್ತಮುತ್ತ ಅರಸರು, ಅವರ ಸಂಬಂಧಿಕರು, ಅಧಿಕಾರಿಗಳು, ವರ್ತಕರು ಹಲವಾರು ಹಳ್ಳಿಗಳನ್ನು

ಭೂದಾನವಾಗಿ ವಿರೂಪಾಕ್ಷ ದೇವರಿಗೆ ಉಂಬಳಿಯಾಗಿ ಬಿಟ್ಟುಕೊಟ್ಟು, ಅದರಿಂದ ಬರುವ ಆದಾಯದಿಂದ ದೇವಾಲಯದ ದೈನಂದಿನ ಧಾರ್ಮಿಕ ವಿಧಿವಿಧಾನಗಳನ್ನು ನೇರವೇರಿಸಲಾಗುತ್ತಿತ್ತು. ಸಂಗಮ ವಂಶದ ಅರಸರು ಬಂದು ಹಂಪಿಯನ್ನು ರಾಜಧಾನಿಯಾಗಿ ರೂಪಿಸಿ ಆಳ್ವಿಕೆ ನಡೆಸುವ ಮೊದಲು ಹಂಪಿ ಸಣ್ಣ ಪ್ರಮಾಣದಲ್ಲಿ ಬೆಳೆದಿತ್ತು. ಆದರೆ 14ನೇ ಶತಮಾನದ ಎರಡನೆಯಾರ್ಧದಿಂದ ಈ ವಿರೂಪಾಕ್ಷ ದೇವಾಲಯದ ಕಟ್ಟಡವನ್ನು ವಿಸ್ತರಿಸಲಾಯಿತು. ಈ ವಿಸ್ತರಣೆಯನ್ನು ಹೆಚ್ಚು ಕೈಗೆತ್ತಿಕೊಂಡ ಅರಸರಲ್ಲಿ ಕೃಷ್ಣದೇವರಾಯನು ಪ್ರಮುಖನು. 1509-10 ರಲ್ಲಿ ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ಈ ದೇವಾಲಯಕ್ಕೆ ಒಂದು ವಿಶಾಲ ಮುಂಟಪವನ್ನು, ದೇವಾಲಯದ ಎದುರು ಒಂದು ಬೃಹತ್ ಗಾತ್ರದ ಗೋಪುರವನ್ನು ನಿರ್ಮಿಸಿದ ಹೆಗ್ಗಳಿಕೆ ಕೃಷ್ಣದೇವರಾಯನಿಗೆ ಸಲ್ಲುತ್ತದೆ. ಜೊತೆಗೆ 15ನೇ ಶತಮಾನದಿಂದ ವಿಜಯನಗರ ಸಾಮ್ರಾಜ್ಯದ ವ್ಯಾಪ್ತಿಗೆ ಬರುವ ತೆಲುಗು, ಕನ್ನಡ ಭಾಷೆಯನ್ನಾಡುವ ಜನರು ನೆಲೆಸುವ ಪ್ರದೇಶಗಳಲ್ಲಿ ಸ್ಥಳೀಯ ಶೈಲಿಗೆ ಭಿನ್ನವಾದ ಶೈಲಿಯ ಬೃಹತ್ ದೇವಾಲಯಗಳ ರಚನೆ ಕೂಡ ದೊಡ್ಡ ಮಟ್ಟದಲ್ಲಿ ಕಂಡು ಬರುತ್ತವೆ. ವಿಜಯನಗರದ ಪಟ್ಟಣಗಳಲ್ಲಿ ಸ್ಥಳೀಯ ಶೈಲಿಯ ದೇವಾಲಯಗಳ ಸಂಖ್ಯೆಯಲ್ಲಿ ಹಿಂದಿಗಿಂತ ಇಳಿಮುಖವಾಯಿತು. ವಿಜಯನಗರದ ಅರಸರು ಚೋಳರ ಕಾಲದಲ್ಲಿ ರಚಿಸಲ್ಪಡುವ ದೊಡ್ಡ ಗಾತ್ರದ ರಚನೆಯ ದೇವಾಲಯಗಳನ್ನೇ ಹೆಚ್ಚು ಹೆಚ್ಚು ಕಟ್ಟಲಾರಂಭಿಸಿದರು. ಅಂದರೆ, ಹಂಪಿಯ ವಿರೂಪಾಕ್ಷ ದೇವಾಲಯಕ್ಕೆ ಹೆಚ್ಚುವರಿ ರಚನೆ ಮತ್ತು ಗೋಪುರದ ಸೇರ್ಪಡೆ ಕೃಷ್ಣದೇವರಾಯನಿಗೆ ವಿರೂಪಾಕ್ಷ ದೇವರ ಮೇಲೆ ಇಟ್ಟಿರುವ ನಂಬಿಕೆ ಮತ್ತು ತನ್ನ ವಂಶದ ದೇವರು ಎಂಬ ಪ್ರೀತಿಯನ್ನು ಗೌರವಿಸಿರುವುದು ವಿಶಿಷ್ಟವಾದುದು.

ಹಾಗಂತ ಹೇಳಿ ಕೇವಲ ವಿರೂಪಾಕ್ಷ ದೇವಾಲಯಕ್ಕೆ ಮಾತ್ರ ವಿಜಯನಗರ ದರಸರ ಪ್ರೋತ್ಸಾಹವಿದೆ ಎಂದೇನು ಅಲ್ಲ. ರಾಜಧಾನಿಯನ್ನು ಸುತ್ತುವರಿದ ಹಳ್ಳಿಗಳಲ್ಲಿರುವ ಹಾಗೂ ಸಾಮ್ರಾಜ್ಯದ ಉದ್ದಗಲಕ್ಕೂ ಇಂತಹ ಅನೇಕ ದೇವಾಲಯಗಳನ್ನು ಪ್ರೋತ್ಸಾಹಿಸಿದ್ದಾರೆ. ಅಂದರೆ, ಅವರು ಆರ್ಥಿಕವಾಗಿ ಶ್ರೀಮಂತರಾಗಿದ್ದು, ತಮ್ಮಲ್ಲಿರುವ ಸಂಪತ್ತನ್ನು ಧರ್ಮದ ನಿಯಮಾನುಸಾರ ಅರಸರು ಧಾರ್ಮಿಕ ಕಾರ್ಯಕ್ರಮ ಮತ್ತು ವಿಧಿವಿಧಾನಗಳನ್ನು ನಿರಂತರವಾಗಿ ಬೆಂಬಲಿಸುತ್ತಿದ್ದರು.

ಐದನೆಯದಾಗಿ, ಕೃಷ್ಣದೇವರಾಯನು ವಿಜಯನಗರದ ಅರಸರಲ್ಲಿ ವಿಶೇಷವಾಗಿ ಗುರುತಿಸಲ್ಪಡುವ ವ್ಯಕ್ತಿಯಾಗಿದ್ದು, ಧರ್ಮದ ಹೆಸರಿನಲ್ಲಿ ದತ್ತಿ, ದಾನವನ್ನು ಭೂಮಿ/ಹಣದ ರೂಪದಲ್ಲಿ ತಾನು ಆಕ್ರಮಿಸಿಕೊಂಡ ಎಲ್ಲಾ ಪ್ರದೇಶಗಳಲ್ಲಿರುವ ಮಠ, ಮಂದಿರಗಳಿಗೆ ಕೊಡುತ್ತಿದ್ದನು. ಉದಾಹರಣೆಗೆ, ದಕ್ಷಿಣ ಆಂಧ್ರದಲ್ಲಿರುವ ಉದಯಗಿರಿಯನ್ನು ಯಶಸ್ವಿಯಾಗಿ ಆಕ್ರಮಿಸಿಕೊಂಡ ನಂತರ ಕೃಷ್ಣದೇವರಾಯನು ತನ್ನ ಇಬ್ಬರು ರಾಣಿಯರೊಂದಿಗೆ ತಿರುಪತಿಯ ವೆಂಕಟೇಶ್ವರ ದೇವಾಲಯಕ್ಕೆ ಬೇಟಿಕೊಟ್ಟು, ತನ್ನ ಮತ್ತು ತನ್ನ ಇಬ್ಬರು ರಾಣಿಯರಾದ ತಿರುಮಲದೇವಿ ಮತ್ತು ಚಿನ್ನದೇವಿಯರ ತಾಮ್ರದ ಪ್ರತಿಮೆಗಳನ್ನು ದಾನವಾಗಿ ನೀಡಿದ್ದನು ಎಂದು ದಾಖಲೆಗಳು ಉಲ್ಲೇಖಿಸುತ್ತವೆ. ಇದು ಅಲ್ಲಿನ ದೇವರಿಗೆ ತಾನು ಮತ್ತು ತನ್ನ ರಾಣಿಯರು ಸದಾ ಋಣಿಯಾಗಿದ್ದೇವೆ ಎಂಬ ಸಂಕೇತವಾಗಿದೆ. 1515ರಲ್ಲಿ ಆಂಧ್ರದ ಕೊಂಡವೀಡು ಪ್ರದೇಶವನ್ನು ಆಕ್ರಮಿಸಿಕೊಂಡಾಗ ಈ ವಿಜಯೋತ್ಸವದ ನೆನಪಿಗಾಗಿ ಅಮರಾವತಿಯ ಶಿವನ ದೇವಸ್ಥಾನಕ್ಕೆ ಮತ್ತು ಶ್ರೀಶೈಲಂಗೆ ತನ್ನ ರಾಣಿಯರೊಂದಿಗೆ ಬೇಟಿ ಕೊಟ್ಟಿದ್ದ ಎಂಬುದನ್ನು ಶಾಸನಗಳು ತಿಳಿಸುತ್ತವೆ. ಕೊನೆಗೆ ತನ್ನ ದಿಗ್ವಿಜಯವನ್ನು ಜಯಿಸಿದ ನಂತರ ತಾನು ಆಕ್ರಮಿಸಿಕೊಂಡ ಪ್ರದೇಶಗಳಲ್ಲಿರುವ ಎಲ್ಲಾ ದೇವಾಲಯಗಳಿಗೆ ದಕ್ಷಿಣ ಆಂಧ್ರದಲ್ಲಿರುವ ತಿರುಪತಿ, ಕಾಳಹಸ್ತಿ, ತಮಿಳುನಾಡಿನ ಕಾಂಚೀಪುರಂ ಇತ್ಯಾದಿ ಸ್ಥಳಗಳಲ್ಲಿರುವ ದೇವಾಲಯಗಳಿಗೆ ಬೇಟಿಕೊಟ್ಟು, ಅಲ್ಲಿನ ದೇವಸ್ಥಾನಗಳಿಗೆ ಬೇರೆ ಬೇರೆ ದತ್ತಿಗಳನ್ನು ನಿಗದಿಪಡಿಸಿದನು. ಅಲ್ಲಿನ ಅಭಿವೃದ್ಧಿಗೆ ಸೂಕ್ತ ಸಲಹೆ ನೀಡಿ ಚಿನ್ನಾಭರಣಗಳನ್ನು ದಾನವಾಗಿ ನೀಡಿದ್ದನು. ಪ್ರತಿ ದಿಗ್ವಿಜಯೋತ್ಸವದ ಸಂದರ್ಭದಲ್ಲಿ ಆಕ್ರಮಿಸಿಕೊಂಡ ಪ್ರದೇಶದಲ್ಲಿರುವ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸುವುದರ ಜೊತೆಗೆ, ಸಾರ್ವತ್ರಿಕವಾಗಿ ಆ ದೇವರುಗಳೇ ತನ್ನ ಯಶಸ್ಸಿಗೆ ಕಾರಣರೆಂದು ಹೇಳಿಕೊಳ್ಳುತ್ತಿದ್ದನು.

ವಿಜಯನಗರ ಅರಸರು ಹಿಂದು ಧರ್ಮ ಮತ್ತು ದೇವಾಲಯಗಳಿಗೆ ಇಷ್ಟೊಂದು ಪ್ರಮಾಣದಲ್ಲಿ ಪ್ರೋತ್ಸಾಹಿಸಿದುದು ಅಲ್ಲದೆ, ಬೇರೆ ಧರ್ಮ, ಸಂಸ್ಕೃತಿ ಮತ್ತು ಅನುಯಾಯಿಗಳನ್ನು ಸಮಾನವಾಗಿ ನೋಡಿದ್ದರು ಎಂಬುದಕ್ಕೆ ಹಲವಾರು ದೃಷ್ಟಾಂತಗಳು ನಮಗೆ ದೊರಕುತ್ತವೆ. ಸುಮಾರು 200 ವರ್ಷಗಳಷ್ಟು ಕಾಲ ವೈಭವದ ದಿನಗಳನ್ನು ವಿಜಯನಗರದ ಅರಸರು ಅನುಭವಿಸಿದ್ದಕ್ಕೆ ಕಾರಣಗಳಿವೆ. ದಕ್ಕನ್ನಿನ ಸುಲ್ತಾನರು ಅಳವಡಿಸಿಕೊಂಡ ತಂತ್ರಜ್ಞಾನಗಳನ್ನು ಇವರು ಪಾಲಿಸಿದ್ದರು. ಇದು

ಮುಖ್ಯವಾಗಿ ಸೈನಿಕ ರಂಗದಲ್ಲಿ ಅಮೂಲ್ಯವಾದುದು. ಟರ್ಕ್‌ರ ಬಿಲ್ಲುಗಾರಿಕೆ ಮತ್ತು ಅಶ್ವದಳದ ಉಪಯುಕ್ತತೆಯನ್ನು ಮನಗಂಡು ತಮ್ಮ ಸೈನ್ಯದ ಶಕ್ತಿಯನ್ನು ವೃದ್ಧಿಸಲು ಬಳಸಿಕೊಂಡಿದ್ದರು. ಅನೇಕ ಮಂದಿ ಮುಸ್ಲಿಂ ಧರ್ಮಕ್ಕೆ ಸೇರಿದವರನ್ನು ಸೈನ್ಯಕ್ಕೆ ಸೇರಿಸಿಕೊಂಡಿದ್ದರು. ನಾಯನ್‌ಕರ ಪದ್ಧತಿ ಇಸ್ಲಾಂ ಧರ್ಮದ ಅನುಯಾಯಿಗಳಾದ ಡೆಲ್ಲಿ ಸುಲ್ತಾನರಿಂದ ಅನುಸರಿದ್ದರು. ಡೆಲ್ಲಿ ಸುಲ್ತಾನರು ಇಕ್ತಾ ಪದ್ಧತಿಯಡಿಯಲ್ಲಿ ಯೋಧರ ಶಕ್ತಿಯನ್ನು ಅನುಸರಿಸಿ ಭೂಮಿಯನ್ನು ಅವರ ಸೇವೆಯನ್ನು ಪರಿಗಣಿಸಿ ಉಂಬಳಿಯಾಗಿ ಕೊಡುತ್ತಿದ್ದರು. ಇದನ್ನೇ ವಿಜಯನಗರದರಸರು ನಾಯನ್‌ಕರ ಪದ್ಧತಿಯಡಿಯಲ್ಲಿ ಅನುಸರಿಸಿದ್ದರು. ಪರ್ಶಿಯಾ ಮತ್ತು ಅರೇಬಿ ಭಾಷೆಯಲ್ಲಿ ಕಂದಾಯ ವಸೂಲಿ ಮತ್ತು ಆಡಳಿತಕ್ಕೆ ಸಂಬಂಧಿಸಿದ ಅನೇಕ ಶಬ್ದಗಳನ್ನು ಕನ್ನಡ, ಮರಾಠಿ ಮತ್ತು ತೆಲುಗು ಭಾಷೆಯಲ್ಲಿ ಇವರು ಬಳಸಿಕೊಂಡಿದ್ದರು. ಈ ತರದ ವಿಚಾರಗಳಿಂದ ಇಸ್ಲಾಂ ಧರ್ಮದ ಪ್ರಭಾವ ವಿಜಯನಗರದ ಮೇಲೆ ಸಾಕಷ್ಟಿದೆ ಎಂಬುದನ್ನು ತೋರ್ಪಡಿಸುತ್ತದೆ.

ಇದಲ್ಲದೆ, ವಾಸ್ತು ಶಿಲ್ಪಗಳಲ್ಲಿ ಇಸ್ಲಾಮಿ ಶೈಲಿಗಳನ್ನು ಬಹಳಷ್ಟು ಅಳವಡಿಸಿಕೊಂಡಿರುವುದಕ್ಕೆ ಸಾಕ್ಷಿಗಳಿವೆ. ರಾಜಧಾನಿಗೆ ಸಮೀಪವಿರುವ ಅನೇಕ ವಾಸ್ತು ರಚನೆಗಳಲ್ಲಿ ಈ ಪ್ರಭಾವಗಳನ್ನು ನಾವು ಕಾಣಬಹುದು– ಲೋಟಸ್ ಮಹಲ್, ಎಲಿಪೆಂಟ ಸ್ಟೇಪಲ್ಸ್, ರಾಣಿಯರ ಸ್ನಾನದ ಕೆರೆಗಳು ಇತ್ಯಾದಿಗಳಲ್ಲಿ ಇಸ್ಲಾಮಿ ವಾಸ್ತುಶಿಲ್ಪ ಶೈಲಿ ಮತ್ತು ಬಣ್ಣಗಾರಿಕೆಯನ್ನು ನೋಡಲು ಸಾಧ್ಯವಾಗುತ್ತದೆ. ಅಂದರೆ, ವಿಜಯನಗರದರಸರು ಹೆಚ್ಚು ಕ್ರಿಯಾಶೀಲರಾಗಿದ್ದರು ಮತ್ತು ಜಾತ್ಯಾತೀತವಾಗಿ ಆಲೋಚನೆ ಮಾಡುತ್ತಿದ್ದರು ಎಂದು ಗ್ರಾಸವಾಗತ್ತದೆ. 1439ರಲ್ಲಿ ಕಟ್ಟಲಾದ ಮಸಿದಿಯು ಭಾರತೀಯ ಮತ್ತು ಇಸ್ಲಾಮಿ ಶೈಲಿಯಲ್ಲಿಯೇ ರಚಿಸಲಾಗಿದ್ದು, ಅದನ್ನು ಧರ್ಮಶಾಲೆ ಎಂದು ಕರೆಯಲಾಗಿತ್ತು. ಮಹಾನವಮಿ ಹಬ್ಬವನ್ನು ನಾಡ ಹಬ್ಬವನ್ನಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತೆ ಮತ್ತು ಎಲ್ಲರ ಭಾಗವಹಿಸುವಿಕೆಯಿಂದ ಆಚರಿಸಲಾರಂಭಿಸಿರುವುದು ವಿಶಿಷ್ಟ ಪ್ರಯತ್ನ. ಎಲ್ಲಾ ಬಗೆಯ ಸಾಹಿತ್ಯ – ಸಂಸ್ಕೃತ, ಕನ್ನಡ ಮತ್ತು ತೆಲುಗು ಸಾಹಿತ್ಯವನ್ನು ಸಮಾನವಾಗಿ ಗೌರವಿಸಿರುವುದು ಇನ್ನೊಂದು ವಿಶಿಷ್ಟತೆ. ಈ ಮೂರು ಭಾಷೆಗೆ ಸಂಬಂಧಿಸಿದ ಸಾಹಿತ್ಯ ಮತ್ತು ಕವಿತೆಗಳನ್ನು ರಚಿಸಲು ಸಂಬಂಧಿಸಿದವರನ್ನು ಬೆಂಬಲಿಸಲಾಗಿತ್ತು. ಕೃಷ್ಣದೇವರಾಯನೇ ಸ್ವತ: ಸಾಹಿತಿ, ಕವಿಯಾಗಿದ್ದು, ಬೇರೆ ಬೇರೆ ಭಾಷೆಯ ಸಾಹಿತ್ಯ ಪ್ರಕಾರಗಳನ್ನು ಸಮಾನವಾಗಿ ಪ್ರೋತ್ಸಾಹಿಸಿದನು.

ಇವೆಲ್ಲವನ್ನು ಗಮನಿಸಿದರೆ, ವಿಜಯನಗರ ಅರಸರು ಜಾತ್ಯಾತೀತ ವಾದಿಗಳಾಗಿದ್ದು, ಎಲ್ಲಾ ಧರ್ಮವನ್ನು ಸಮಾನವಾಗಿ ನೋಡಿದ್ದರು. ಸಮಾನವಾಗಿ ಪ್ರೋತ್ಸಾಹಿಸಿದ್ದರು ಮತ್ತು ವಿವಿಧತೆಯಲ್ಲಿ ಏಕತೆ ಎಂಬ ನಾಣ್ಣುಡಿಗೆ ಬದ್ಧರಾಗಿ ಕಾರ್ಯ ನಿರ್ವಹಿಸಿದ್ದರು. ಮುಸ್ಲಿಂರ ದಾಳಿಗೆ ಮತ್ತು ಬೆದರಿಕೆಗೆ ಹಿಂದು ಧರ್ಮ ರಕ್ಷಕರಾಗಿ ವಿಜಯನಗರ ಸಾಮ್ರಾಜ್ಯ ಹುಟ್ಟಿಕೊಂಡಿತ್ತು ಎಂಬ ವಾದ ಈ ಹಂತದಲ್ಲಿ ದುರ್ಬಲವಾಗುತ್ತದೆ. ಏಕೆಂದರೆ, ಇಸ್ಲಾಮಿ ವಾಸ್ತು ಶೈಲಿ, ತಂತ್ರಜ್ಞಾನ, ಭಾಷೆಯಲ್ಲಿ ಬಳಕೆಯಾಗುವ ಪದಗಳನ್ನು ವಿಜಯನಗರದ ಅರಸರು ಮುಜುಗರವಿಲ್ಲದೆ ಅನುಸರಿಸಿದ್ದರು. ಹಾಗೇನೆ, ವಿಜಯನಗರದರಸರು ತಮ್ಮ ಸಾಮ್ರಾಜ್ಯವನ್ನು ತೆಲುಗು, ತಮಿಳು ಮತ್ತು ಕನ್ನಡ ಭಾಷೆಯನ್ನಾಡುವ ಜನರು ನೆಲೆನಿಂತಿರುವ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ಅವರು ತೆಲುಗು ಸಾಮ್ರಾಜ್ಯವನ್ನಾಗಲಿ, ತಮಿಳು ಸಾಮ್ರಾಜ್ಯವನ್ನಾಗಲಿ ಅಥವಾ ಕನ್ನಡ ಸಾಮ್ರಾಜ್ಯವನ್ನಾಗಲಿ ಕಟ್ಟಬೇಕೆನ್ನುವ ಭಾವನಾತ್ಮಕ ಯೋಜನೆಗಳನ್ನು ಇಟ್ಟುಕೊಂಡವರಲ್ಲ. ಅವರು ಕಟ್ಟಿರುವುದು ವಿಜಯನಗರ ಸಾಮ್ರಾಜ್ಯವನ್ನು.

ವಿಜಯನಗರ ಕಾಲದ ಬಾರಕೂರು

ಡಾ। ಬಿ.ಜಗದೀಶ ಶೆಟ್ಟಿ
ಬ್ರಹ್ಮಾವರ.

ಹೆಸರು

ಬಾರಕೂರಿನ ಹೆಸರಿನ ಬೇರೆ ಬೇರೆ ರೂಪಗಳನ್ನು ಗಮನಿಸಿದಾಗ ಬಾರಕನೂರು, ಈ ಊರಿನ ಹೆಸರಿನ ಮೂಲ ರೂಪ. ನಂತರದ ದಿನಗಳಲ್ಲಿ ಅದು ಬಾರಹಕನ್ಯಾಪುರ ಎಂಬುದಾಗಿ ಕರೆಯಲ್ಪಟ್ಟಿತು. ನಂತರದ ರೂಪ ಬಾರಕೂರು. ಊರಿನ ಹೆಸರು ಬಾರಕೂರು ಹೇಗೆ ಬಂತು ಎಂಬುದು ವಿದ್ವಾಂಸರ ಕುತೂಹಲಕ್ಕೆ ಕಾರಣವಾಗಿದೆ. ವಾರಕೂಲದಿಂದ ಬಾರಕೂರು ಎಂಬ ಹೆಸರು ಬಂತೆಂಬುದು ಒಂದು ವಾದ. ಇನ್ನೊಂದು ವಾದ ಭೂತಾಳ ಪಾಂಡ್ಯ ಹನ್ನೆರಡು ಜನ ಜೈನ ಕನ್ಯೆಯನ್ನು ಮದುವೆಯಾದ್ದರಿಂದ ಬಾರಹಕನ್ಯಾಪುರ ಎಂಬ ಹೆಸರು ಬಂತೆಂಬುದು. ಮೂರನೆಯ ವಾದ ಬಾರಕ ಎನ್ನುವ ಪ್ರಾಣಿಯಿಂದ ಬಾರಕೂರಿಗೆ ಈ ಹೆಸರು ಬಂತೆಂಬುದು. ಬೈರಕ್ಕನ ಊರು ಬಾರಕೂರು ಆಗಿದೆ ಎನ್ನುವ ವಾದವೂ ಇದೆ. ಬಂಟ ಬಾರಗನಿಂದ ಊರಿಗೆ ಬಾರಕೂರು ಎಂಬ ಹೆಸರು ಬಂತೆನ್ನುವ ಇನ್ನೊಂದು ವಾದವಿದೆ. ಡಾ।ಬಿ.ವಸಂತ ಶೆಟ್ಟಿಯವರ ಪ್ರಕಾರ ಬಾರಕ ಎನ್ನುವ ವ್ಯಕ್ತಿಯಿಂದ ಬಾರಕನೂರು ಎನ್ನುವ ಹೆಸರು ಬಂದಿರಬೇಕು. ಇಲ್ಲಿ ಬಾರಕ ಎನ್ನುವ ಹೆಸರು ಇದ್ದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಬರುತ್ತದೆ. ಮಣಿಗಾರ ಕೇರಿಯ ಶಾಸನದಲ್ಲಿ ಬೆಮ್ಮಣ ಬಾರಕ ಎನ್ನುವ ವ್ಯಕ್ತಿಯನ್ನು ಹೆಸರಿಸಲಾಗಿದೆ. ಬಾರಕೂರಿನ ಸಮೀಪ ಸೀತಾನದಿಯಲ್ಲಿ ಅತ್ಯಂತ ಆಳವಾದ ಜಾಗ ಈಗಲೂ 'ಬರಕನ ಗುಂಡಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಹಿನ್ನೆಲೆ

ತುಳುನಾಡಿನ ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರ ಬಿಂದುವಾಗಿದ್ದ ಬಾರಕೂರು ಕರಾವಳಿ ಕರ್ನಾಟಕದ ಇತಿಹಾಸದಲ್ಲಿ ತುಂಬಾ

ಮಹತ್ವವನ್ನು ಹೊಂದಿರುವ ಸ್ಥಳ. ಕ್ರಿಸ್ತ ಶಕದ ಪ್ರಾರಂಭದಲ್ಲಿಯೇ ವ್ಯಾಪಾರಿ ಕೇಂದ್ರವೆನಿಸಿದ್ದ 'ಬಾರಕನೂರು' 12ನೇ ಶತಮಾನದ ಸುಮಾರಿಗೆ ಆಳುಪ ಅರಸರ ರಾಜಧಾನಿಯಾಗಿ ದಾಖಲೆಗಳಲ್ಲಿ 'ಬಾರಹಕನ್ಯಾಪುರ' ಎಂಬುದಾಗಿ ಕರೆಯಲ್ಪಟ್ಟಿದೆ. ಹೊಯ್ಸಳ, ವಿಜಯನಗರ, ಕೆಳದಿ ಅರಸರ ಕಾಲದಲ್ಲಿ 'ಬಾರಕೂರು' ಪ್ರಮುಖ ಆಡಳಿತ ವಿಭಾಗವಾಗಿ ಬಾರಕೂರು ರಾಜ್ಯದ ಮುಖ್ಯಪಟ್ಟಣವಾಗಿ ರಾಜಕೀಯ ಸಾಂಸ್ಕೃತಿಕ ಮಹತ್ವವನ್ನು ಹೊಂದಿತ್ತು. ಹೈದರ್ ಟಿಪ್ಪುವಿನ ಕಾಲದಲ್ಲೂ ತಕ್ಕಮಟ್ಟಿನ ರಾಜಕೀಯ ಸ್ಥಾನಮಾನವನ್ನು ಹೊಂದಿದ್ದ ಬಾರಕೂರು ಮುಂದೆ ಇಂಗ್ಲೀಷರ ಆಡಳಿತದಲ್ಲಿ ತಾಲೂಕು ಕೇಂದ್ರವಾಗಿತ್ತು.

ಬಾರಕೂರಿಗೆ ಸಮೀಪದ ಬಂಡಿಮಠ ಮತ್ತು ನಡೂರುಗಳಲ್ಲಿ ನೂತನ ಶಿಲಾಯುಗದ ಕೊಡಲಿಗಳು ದೊರೆತಿರುವುದರಿಂದ ಈ ಪ್ರದೇಶದಲ್ಲಿ ಶಿಲಾಯುಗದ ಕಾಲದಿಂದಲೇ ಜನವಸತಿಯಿತ್ತೆಂಬುದು ಸ್ಪಷ್ಟ. ಕ್ರಿ.ಪೂ. ಮೂರನೇ ಶತಮಾನದಿಂದ ಕ್ರಿ.ಶ. ಎರಡನೇ ಶತಮಾನದವರೆಗೆ ಮಡಿಕೆ, ಕುಡಿಕೆಗಳು ಬಾರಕೂರಿನಲ್ಲಿ ದೊರೆತಿರುವುದು ಸಹ ಇತಿಹಾಸ ಕಾಲದ ಪ್ರಾರಂಭದಿಂದಲೇ. ಇದೊಂದು ಸಾಂಸ್ಕೃತಿಕ ಕೇಂದ್ರವಾಗಿ ಬೆಳೆದಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಭಂಡಾರಕೇರಿಮಠದ ಹತ್ತಿರವಿರುವ 7–8ನೇ ಶತಕದ ಜೈನನಿಷಿಧಿಕಲ್ಲು ಬಾರಕೂರಿನಲ್ಲಿ ಜೈನ ಧರ್ಮದ ಪ್ರಾಚೀನತೆಯನ್ನು ತಿಳಿಸಿದರೆ, ಪಂಚಲಿಂಗೇಶ್ವರ ದೇವಾಲಯದ ವಾಸ್ತುಶಿಲ್ಪದಲ್ಲೂ ಕಂಡು ಬರುವ ಸಾಂಸ್ಕೃತಿಕ ಕುರುಹುಗಳು ಬಾರಕೂರಿನ ಸಾಂಸ್ಕೃತಿಕ ಬೆಳವಣಿಗೆಯನ್ನು ಪುಷ್ಟೀಕರಿಸುತ್ತವೆ. ಸಾಂಸ್ಕೃತಿಕ ಕೇಂದ್ರವಾಗಿ ಬಾರಕೂರು ಬೆಳೆಯುತ್ತಿದ್ದಂತೆ, ವ್ಯಾಪಾರಿ ಕೇಂದ್ರವಾಗಿಯೂ ಪ್ರಗತಿ ಸಾಧಿಸಿತು. ಕರ್ನಾಟಕದ ಇತರ ಪಟ್ಟಣಗಳೊಂದಿಗೆ ನೇರ ಸಂಪರ್ಕ ಹೊಂದಿದ್ದಲ್ಲದೆ ವಿದೇಶಿ ಸಂಪರ್ಕವನ್ನೂ ಪಡೆಯಿತು. 9–10ನೇ ಶತಮಾನದ ಸಮಯಕ್ಕೇ ಇಲ್ಲಿ ಚುರುಕುಗೊಂಡಿದ್ದ ವಿದೇಶೀ ವ್ಯಾಪಾರದ ಉಲ್ಲೇಖವನ್ನು ವಿದೇಶೀಯರ ಬರಹಗಳಲ್ಲಿ ಕಾಣಬಹುದು.

ಬಾರಕೂರಿನ ವಾಣಿಜ್ಯ ಮತ್ತು ಸಾಂಸ್ಕೃತಿಕ ಪ್ರಾಮುಖ್ಯ ಹೆಚ್ಚುತ್ತಿದ್ದಂತೆ ವಿವಿಧ ರಾಜಕೀಯ ಶಕ್ತಿಗಳನ್ನೂ ಇತ್ತ ಕಡೆಗೆ ಆಕರ್ಷಿಸಿತು. ಹನ್ನೆರಡನೇ ಶತಮಾನದ ಸಮಯಕ್ಕೆ ಬಾರಕೂರು ಆಳುಪರ ರಾಜಧಾನಿಯಾಯಿತು. ಈ ಮನೆತನದ ಪ್ರಸಿದ್ಧ ಅರಸು ಕವಿಯಾಳುಪೇಂದ್ರ. ಉದ್ಯಾವರದಿಂದ, ತನ್ನ ರಾಜ್ಯದ ರಾಜಧಾನಿಯನ್ನು

ಬಾರಕೂರಿಗೆ ವರ್ಗಾಯಿಸಿದ. ಈಗ ಸಿಂಹಾಸನಗುಡ್ಡೆಯೆಂದು ಕರೆಯಲ್ಪಡುವ ಸ್ಥಳದಲ್ಲಿ ಕೋಟೆ, ಅರಮನೆಗಳ ನಿರ್ಮಾಣವಾದದ್ದು ಆಳುಪರಿಂದಲೇ. ಕವಿಯಾಳುಪನ ಕಾಲದಲ್ಲಿ ಬಾರಕೂರಿಗೆ ರಾಜಕೀಯವಾಗಿ ಬಹಳ ಪ್ರಾಮುಖ್ಯ ದೊರೆಯಿತು. ಅಗಲವಾದ ಮಣ್ಣಿನ ಗೋಡೆ ಮತ್ತು ಆಳವಾದ ಕಂದಕವನ್ನು ಹೊಂದಿದ್ದ ಆಳುಪರ ಕೋಟೆ ಬಂದರಿಗೂ ಸಮೀಪವಿದ್ದುದು ವ್ಯಾಪಾರದ ದೃಷ್ಟಿಯಿಂದಲೂ ಅನುಕೂಲವೆನ್ನಿಸಿತು.

ಕವಿಯಾಳುಪೇಂದ್ರನಿಂದ ಮೊದಲ್ಗೊಂಡು ಅನೇಕ ಆಳುಪ ಅರಸರು ಬಾರಕೂರಿನಿಂದ ಆಳಿದರು. ಅವರಲ್ಲಿ ಪ್ರಮುಖರೆಂದರೆ ಕವಿಯಾಳುಪೇಂದ್ರ, ಕುಲಶೇಖರ, ಕುಂಡಣ, ದತ್ತಾಳ್ವೇಂದ್ರ ಶ್ರೀ ಮಾರ ಒಡ್ಡಮದೇವ, ಬಿಟ್ಟಿದೇವಾಳ್ವೇಂದ್ರ, ವೀರ ಪಾಂಡ್ಯದೇವ, ಬಲ್ಲ ಮಹಾದೇವಿ, ಸೋಯಿದೇವ, ಇಮ್ಮಡಿ ಕುಲಶೇಖರ ಮತ್ತು ಮುಮ್ಮಡಿ ಬಂಕಿದೇವ. ಸೋಯಿದೇವ ಆಳುತ್ತಿರುವಾಗ (ಕ್ರಿ.ಶ. 1333) ಹೊಯ್ಸಳರಾಜ ಮುಮ್ಮಡಿ ಬಲ್ಲಾಳ ದಂಡೆತ್ತಿ ಬಂದ. ಸೋಯಿದೇವ ತನ್ನ ತಂಗಿ ಚಿಕ್ಕಾಯಿತಾಯಿಯನ್ನು ಬಲ್ಲಾಳನಿಗೆ ಮದುವೆ ಮಾಡಿಕೊಟ್ಟಿದ್ದರಿಂದ ಹೊಯ್ಸಳರು ತಮ್ಮ ನೇರ ಆದಿಪತ್ಯವನ್ನು ಇಲ್ಲಿ ಸ್ಥಾಪಿಸಿದರೂ ಸಹ ಆಳುಪರ ಆಳ್ವಿಕೆ ಇಲ್ಲಿ ಮುಂದುವರಿಯಿತು. ಚಿಕ್ಕಾಯಿತಾಯಿ ಬಾರಕೂರಿನಿಂದಲೇ ಹೊಯ್ಸಳರ ಪರವಾಗಿ ಆಡಳಿತ ನಡೆಸತೊಡಗಿದಳು. ಹೊಯ್ಸಳರ ಸೇನೆಯ ತುಕುಡಿಯೊಂದು ಇಲ್ಲಿ ಉಳಿದುಕೊಂಡಿತು. ಬಾರಕೂರು ಮತ್ತು ಬೆಣ್ಣೆಕುದುರಿನ ಮಧ್ಯೆ ಮೂರು ಹಲಗೆಯ ಮರದ ಸೇತುವೆಯ ನಿರ್ಮಾಣವೇ ಮುಂತಾದ ಅನೇಕ ಜನೋಪಯೋಗಿ ಕಾರ್ಯಗಳನ್ನು ಚಿಕ್ಕಾಯಿತಾಯಿ ಕೈಗೊಂಡಳು. 1338ರಲ್ಲಿ ಹೊಯ್ಸಳ ಮುಮ್ಮಡಿ ಬಲ್ಲಾಳ ಆಡಳಿತ ಮತ್ತು ಸೇನೆಯ ಪರಿಶೀಲನೆಗಾಗಿ ಬಾರಕೂರಿಗೆ ಭೇಟಿ ಕೊಟ್ಟಿದ್ದ.

ವಿಜಯನಗರ ಕಾಲ

ವಿಜಯನಗರ ಆಡಳಿತದ ಆರಂಭ ಕಾಲದಲ್ಲಿ ಸಂಗಮ ಸಹೋದರರು ಬಾರಕೂರಿನಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸುವ ಬಗ್ಗೆ ಆಸಕ್ತಿ ವಹಿಸಿದರು. ಬಾರಕೂರಿನ ರಕ್ಷಣಾತ್ಮಕ ವಿಶೇಷಗಳನ್ನು ಗುರುತಿಸಿ, ಕೋಟೆಯನ್ನು ಕಟ್ಟಿದರು. ಪಶ್ಚಿಮ ಕರಾವಳಿಯ ಪ್ರಮುಖ ಬಂದರಾಗಿ ಅರೇಬಿಯಾದಿಂದ ಕುದುರೆಗಳನ್ನು ತರಿಸಿಕೊಳ್ಳುವ ಕೇಂದ್ರವಾಗಿ ಬೆಳೆಸಿದರು.

ಬಾರಕೂರಿನಲ್ಲಿ ದೊರೆಯುವ ವಿಜಯನಗರ ಕಾಲದ ಪ್ರಾಚೀನ ದಾಖಲೆಯೆಂದರೆ 1353 ಕ್ರಿ.ಶ ರ ದಾಖಲೆ ಆದರೆ ಕ್ರಿ.ಶ 1342ರಲ್ಲಿ ಬಾರಕೂರಿಗೆ ಬಂದ ಇಬನ್ ಬಟೂಟ ಬಸದೇವ ಎಂಬವನು ಬಾರಕೂರಿನ ರಾಜ ಎಂಬುದಾಗಿ ಉಲ್ಲೇಖಿಸಿದ್ದಾನೆ. ಬಸದೇವ ಎಂಬವನು ವಿಜಯ ನಗರದ ರಾಜ್ಯಪಾಲ ಎಂಬುದಾಗಿ ತಿಳಿಯಬಹುದು. ಅಲ್ಲದೆ ಅವನು ಪ್ರಥಮ ರಾಜ್ಯಪಾಲ ಕೂಡಾ. ಮಲೆಯ ದಣ್ಣಾಯಕ ನಂತರದ ರಾಜ್ಯಪಾಲ. ಮುಂದಿನ ರಾಜ್ಯಪಾಲ ಗೋಪರಸ. ಅವನ ನಂತರ ದ್ವಿತೀಯ ಬಾರಿಗೆ ಮಲೆಯ ದಣ್ಣಾಯಕ ಬಾರಕೂರಿನ ರಾಜ್ಯಪಾಲನಾಗಿ ಕಂಡು ಬರುತ್ತಾನೆ. ಅವನ ಅನೇಕ ಶಾಸನಗಳು ಬಾರಕೂರಿನಲ್ಲಿ ಲಭ್ಯವಿವೆ. ಅವನ ನಂತರ ಪುನಃ ಗೋಪರಸ ಒಡೆಯ ಬಾರಕೂರಿನ ರಾಜ್ಯಪಾಲನಾಗಿ 1366 ರಿಂದ 1373 ರವರೆಗೆ ರಾಜ್ಯಭಾರ ಮಾಡಿದನು. ಆದರೆ ಶಾಸನಗಳಲ್ಲಿ ಅವನ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಬಾಚರಸ ಒಡೆಯ, ಬೊಮ್ಮರಸ ಒಡೆಯ, ಜಕ್ಕಣ್ಣ ಒಡೆಯರು ನಂತರದ ರಾಜ್ಯಪಾಲರುಗಳು. ಮಲ್ಲಪ್ಪ ಒಡೆಯ 1386 ರಿಂದ ರಾಜ್ಯಪಾಲನಾಗಿದ್ದುದಕ್ಕೆ ಶಾಸನಃ ದಾಖಲೆಗಳಿವೆ. ಬಾರಕೂರಿನ ಮತ್ತು ಮಲ್ಲಪ್ಪ ಒಡೆಯನ ಪ್ರಾಮುಖ್ಯತೆಯನ್ನು ಅರಿಯಲು ಮುಖ್ಯ ದಾಖಲೆ, 1387ರ ಶಾಸನ. ಅದು ಮಲ್ಲಪ್ಪ ಒಡೆಯ ಬಾರಕೂರಿನ ರಾಜ್ಯಪಾಲನಾಗಿದ್ದಾಗ, ವಿಜಯನಗರ ದೊರೆ ಇಮ್ಮಡಿ ಹರಿಹರನ ಮಗ ಇಮ್ಮಡಿ ಬುಕ್ಕ ಬಾರಕೂರಿನ ಸಮೀಪದ ನೀರುವಾರ ಪಂಚಮಿಯ ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು. ಬಹುಶಃ ಅವನು ಮಲ್ಲಪ್ಪ ಒಡೆಯನ ಸಲಹೆಯಂತೆ ಆಡಳಿತ ನಡೆಸುತ್ತಿದ್ದಿರಬೇಕು. 1387ರ ಇನ್ನೊಂದು ಶಾಸನದಲ್ಲಿ ಮಲ್ಲಪ್ಪ ಒಡೆಯನ ಆಳ್ವಿಕೆಯ ಉಲ್ಲೇಖದೊಂದಿಗೆ ಬಾರಕೂರು ತುಳು ರಾಜ್ಯದ ರಾಜಧಾನಿಯಾಗಿದ್ದ ವಿಷಯವನ್ನು ತಿಳಿಸುತ್ತದೆ.

ಬಾರಕೂರಿನ ರಾಜ್ಯಪಾಲರುಗಳ ಆಡಳಿತದಲ್ಲಿ ಬಹುಮುಖ್ಯ ಕಾಲ, ಅಂದರೆ ನಾಗರಸ ಒಡೆಯನ ಆಳ್ವಿಕೆ. ಅವನ ಕಾಲದಲ್ಲಿ ತುಳುನಾಡಿನಲ್ಲೊಂದು ದಂಗೆ ನಡೆಯಿತು. ಚೌಟರ ದಂಗೆಯನ್ನು ಮಂಗಪ್ಪ ದಣ್ಣಾಯಕ ಅಡಗಿಸಿದ. ಅದರಲ್ಲಿ ಬಾರಕೂರಿನ ಸೈನ್ಯ ಪಾಲುಗೊಂಡಿತ್ತು. ಮತ್ತೆ ಕೆಲವು ಸೈನಿಕರು ಮಡಿದಿರಬೇಕು. (ಉದಾ ರಾಜಕಾರ್ಯ ಮಾಡಿ ಅಳಿದು) ನಾಗರಸನಿಗೆ ಆಡಳಿತದಲ್ಲಿ ಸೆಟ್ಟಿಕಾರರು, 770 ಏಳಮೆಗಳು, ಹಂಜಮಾನರು, ಹಲರು, ಮೂಡಿಲ ನಿಡಂಬೂರರು, 60

ಬಲ್ಲಾಳರು, ನಾಲ್ಕು ನಾಡಿನ ನಾಡವರು, ನಾಯಕರು, ಸಾಗುವಳಿಯ ತೋಳಹರು ಸಹಕಾರಿಗಳಾಗಿದ್ದರು. ಇತರ ಮುಖ್ಯ ರಾಜ್ಯಪಾಲರುಗಳೆಂದರೆ ಬಾಚಣ್ಣ ಒಡೆಯ, ಮಹಾಬಲ ದೇವ ಒಡೆಯ, ಶಂಕರದೇವ ಒಡೆಯ. ಮಹಾಬಲ ದೇವ ಒಡೆಯರ ಕಾಲದಲ್ಲಿ ಒಂದು ಪ್ರಮುಖ ಘಟನೆ ನಡೆಯಿತು. ಮಹಾಬಲ ದೇವ ಒಡೆಯ ಹತ್ತು ಕೇರಿಯ ಹಲರ ಸೌಲಭ್ಯಗಳನ್ನು ಕಡಿತಗೊಳಿಸಿದನು. ಹತ್ತು ಕೇರಿಯ ಸ್ಥಾನಪತಿ, ಇಮ್ಮಡಿ ಬುಕ್ಕನಿಗೆ ದೂರು ನೀಡಿದರು. ಗೋವೆಯ ಬಾಚಣ್ಣ ಒಡೆಯ ರಾಜನ ಆಜ್ಞೆಯಂತೆ ವಿಚಾರಣೆ ನಡೆಸಿದನು. ತೊಂದರೆಗೊಳಗಾದವರಿಗೆ ಪರಿಹಾರ ನೀಡಲಾಯಿತು. ವಿಚಾರಣೆ ನಡೆಸಿದ ಬಾಚಣ್ಣ ಒಡೆಯನನ್ನು ಮಹಾಬಲ ದೇವ ಒಡೆಯನ ಸ್ಥಾನದಲ್ಲಿ ಬಾರಕೂರಿನ ರಾಜ್ಯಪಾಲನಾಗಿ ನೇಮಿಸಲಾಯಿತು. ಇನ್ನೊಬ್ಬ ರಾಜ್ಯಪಾಲ ಶಂಕರ ದೇವ ಒಡೆಯನ ಕಾಲದ ಇನ್ನೊಂದು ಶಾಸನ ಇಲ್ಲಿ ಪ್ರಮುಖ ದಾಖಲೆ. ಯಾಕೆಂದರೆ ಇದು ಒಂದನೇ ದೇವರಾಯನ ಆಡಳಿತವನ್ನು ತಿಳಿಸುವುದರೊಂದಿಗೆ ರಾಜಧಾನಿಯಲ್ಲಿದ್ದು ಇಮ್ಮಡಿ ಹರಿಹರ ನೀಡಿದ ದಾನವನ್ನು ಉಲ್ಲೇಖಿಸುತ್ತದೆ. (1413) ರಾಜಾಧಿರಾಜ ತೀರ್ಥ ಶ್ರೀಪಾದರುಗಳು ಕೋಟಿನಾಥ ಪುರಾಣವನ್ನು ರಚಿಸಿ ಹರಿಹರನಿಗೆ ಒಪ್ಪಿಸಿದರು. (ವಿಜಯನಗರಿಗೆ ಬಿಜಯಂ ಮಾಡಿ ಹರಿಹರ ಮಹಾರಾಯರಿಗೆ ವೊಪ್ಪಿಸ್ತಲಿ ಆ ರಾಯರು) ಇದು ಹರಿಹರ 1413ರಲ್ಲಿ ಇದ್ದ. ಇದುವರೆಗೆ ತಿಳಿದಂತೆ 1404ರಲ್ಲಿ ತೀರಿಕೊಂಡಿರಲಿಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಅಲ್ಲದೆ ಶಂಕರದೇವ ಒಡೆಯ ಪಶ್ಚಿಮ ಸಮುದ್ರಾಧೀಶ್ವರ ಎಂಬ ಬಿರುದನ್ನು ಧರಿಸಿರುವುದು ಅವನ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ. ವಿರುಗಪ್ಪ ಒಡೆಯ, ನರಸಿಂಹ ದೇವ ಒಡೆಯ, ಚಂಡರಸ ಒಡೆಯ, ಅಣ್ಣಪ್ಪ ಒಡೆಯ, ತಿಮ್ಮಣ್ಣ ಒಡೆಯ ಮುಖ್ಯರು.

ತಿಮ್ಮಣ್ಣ ಒಡೆಯ ಹೆಬ್ರಿ ಸಮೀಪದ ಚಾರದವನು. ಅವನು ರಾಜ್ಯಪಾಲ ನಾಗಿರುವಾಗ ಉಂಗುರಪಳ್ಳಿ ಮತ್ತು ವಾರಂಬಳ್ಳಿ ಮನೆಗಳ ಮೇಲೆ ನಡೆಸಿದ ದೌರ್ಜನ್ಯ ಚಾಂತಾರಿನ ಶಾಸನದಲ್ಲಿ ದಾಖಲಾಗಿದೆ. ರೂಪಂಣ ಒಡೆಯ, ಗುರುವಪ್ಪ ಒಡೆಯ, ಹಂಪರಸ, ಹೊನ್ನಕಳಸ ಮಹಾರಾಯ ಇತ್ಯಾದಿ ನಂತರದ ಪ್ರಮುಖ ರಾಜ್ಯಪಾಲರು.

ಬಾರಕೂರು ಕೃಷ್ಣದೇವರಾಯನ ಆಡಳಿತಕ್ಕೆ ಒಳಪಟ್ಟ ಸಂದರ್ಭದಲ್ಲಿ ಬಾರಕೂರಿನ ರಾಜ್ಯಪಾಲನಾಗಿದ್ದವನು, ರತ್ನಪ್ಪ ಒಡೆಯ. ಅವನು ಬಾರಕೂರಿನ

ರಾಜ್ಯಪಾಲರುಗಳಲ್ಲಿ ಬಹಳ ಪ್ರಮುಖನಾದವನು. ಅವನು ಬೈಚಪ್ಪ ದಣ್ಣಾಯಕನ ಕುಟುಂಬಕ್ಕೆ ಸೇರಿದವನು ಮತ್ತು ಜೈನ ಮತಸ್ಥನಾಗಿದ್ದನು. ಅವನ ಕಾಲದಲ್ಲಿ ಪೋರ್ಚುಗೀಸರೊಂದಿಗೆ ಕುದುರೆ ವ್ಯಾಪಾರಕ್ಕೆ ಸಂಬಂಧಿಸಿ ಮಾತುಕತೆ ನಡೆಯಿತು. ಆದರೆ ವಿಜಯನಗರದ ಬಾರಕೂರಿನ ರಾಜ್ಯಪಾಲ ರತ್ನಪ್ಪ ಒಡೆಯ 1000 ಕುದುರೆಗಳಿಗಾಗಿ 20,000 ಸ್ಟರ್ಲಿಂಗ್ ನೀಡುವ ಕೊಡುಗೆಯನ್ನು ಕೊಟ್ಟಾಗ ಅಲ್ಬುಕರ್ಕ ತಿರಸ್ಕರಿಸಿದ. ಇದು ಪೋರ್ಚುಗೀಸರು ಯಾವ ರೀತಿಯ ಪ್ರಭಾವವನ್ನು ಹೊಂದಿದ್ದರು ಎಂಬುದನ್ನು ಸೂಚಿಸುತ್ತದೆ. ಅವನ ಅನುಪಸ್ಥಿತಿಯಲ್ಲಿ ರತ್ನಪ್ಪ ಒಡೆಯನ ಮಗ ವಿಜಯಪ್ಪ ಒಡೆಯ ಬಾರಕೂರಿನ ಆಡಳಿತವನ್ನು ನಡೆಸುತ್ತಿದ್ದ. ಆನಂತರ ಪುನಃ ರತ್ನಪ್ಪ ಒಡೆಯ ಅಧಿಕಾರಕ್ಕೆ ಮರಳಿದ. ಅವನು ಪೋರ್ಚುಗೀಸರಿಂದ ಸಮಸ್ಯೆಯನ್ನು ಎದುರಿಸಬೇಕಾಯಿತು. ಕ್ರಿ.ಶ 1515ರ ಸುಮಾರಿಗೆ ಪೋರ್ಚುಗೀಸರು ವಿಜಯನಗರದ ಬಂದರುಗಳ ಮೇಲೆ ದಾಳಿ ಮಾಡುವಷ್ಟು ಸಮರ್ಥರಾಗಿದ್ದರು. ಆದರೆ ರಾಜಕೀಯ ಅನಿಶ್ಚತತೆಯಿಂದಾಗಿ ವಿಜಯನಗರ ಅರಸರು ಅವರೊಂದಿಗೆ ಸ್ನೇಹ ಸಂಬಂಧವನ್ನು ಹೊಂದಲು ಆಸಕ್ತರಾಗಿದ್ದರು. ಹೀಗಾಗಿ ಪೋರ್ಚುಗೀಸರು ಬಾರಕೂರಿನ ವ್ಯಾಪಾರಿಗಳೊಂದಿಗೆ ಸಂಪರ್ಕವನ್ನು ಸಾಧಿಸಿದರು. ಬಾರಕೂರಿನ ಮೇಲೆ ದಾಳಿಯನ್ನು ಸಂಘಟಿಸಿದ್ದರು. ಆದರೆ ವಿಜಯನಗರ ರಾಜ್ಯಪಾಲ, ರತ್ನಪ್ಪ ಒಡೆಯನ ನೇತೃತ್ವದಲ್ಲಿ ಅದನ್ನು ವಿಫಲಗೊಳಿಸಲಾಯಿತು.

ವಿಠರಸ ಒಡೆಯ, ವಿಜಯಪ್ಪ ಒಡೆಯನ ನಂತರ ಅಧಿಕಾರಕ್ಕೆ ಬಂದ. (1523) ಇವನ ಕಾಲದಲ್ಲಿ ಬಾರಕೂರಿನ ರಾಜ್ಯಪಾಲ ಮತ್ತು ಜಾಮೊರಿನ್ ಮಧ್ಯೆ ಪೋರ್ಚುಗೀಸರ ವಿರುದ್ಧದ ಹೋರಾಟದಲ್ಲಿ ಒಂದು ಒಪ್ಪಂದವಾದಂತೆ ಕಂಡು ಬರುತ್ತದೆ. ಆದರೆ ಬಾರಕೂರು ಮತ್ತು ಪೋರ್ಚುಗೀಸರ ಸಂಬಂಧ ಇನ್ನೂ ಹೆಚ್ಚಾಯಿತು. ಡೊಮಿಂಗೊ ಪಾಯಸ್ ಬಾರಕೂರಿನ ಪೋರ್ಚುಗೀಸ್ ಫ್ಯಾಕ್ಟರಿ ಬಗ್ಗೆ ತಿಳಿಸುತ್ತಾನೆ. ಯತಿರಾಯ ಒಡೆಯ, ಏಕದಳಖಾನ ಒಡೆಯ ನಂತರದ ಪ್ರಮುಖ ರಾಜ್ಯಪಾಲರುಗಳು. 1554ರ ಸುಮಾರಿಗೆ ಬಾರಕೂರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದು ಸಾಧ್ಯವಿಲ್ಲ ಎಂದು ಮನಗಂಡು ವಿಜಯನಗರ ಅರಸರು ಅದನ್ನು ಕೆಳದಿಯವರಿಗೆ ಅಮರ ಮಾಗಣೆಯಾಗಿ ನೀಡಿದರು.

ಬಾರಕೂರನ್ನು ಆಳಿದ ರಾಜ್ಯಪಾಲರುಗಳು ಕೆಲವರು ದೀರ್ಘಕಾಲ ಆಳ್ವಿಕೆ ನಡೆಸಿದ್ದಾರೆ. ಆದರೆ ಕೆಲವರು ಕೇವಲ ಒಂದು ವರ್ಷ ಮಾತ್ರ ಆಳ್ವಿಕೆ ನಡೆಸಿದ ನಿದರ್ಶನಗಳು ಇವೆ. ಬಾರಕೂರಿನ ವಿಜಯನಗರದ ರಾಜ್ಯಪಾಲರುಗಳು, ಮಹಾ ಪ್ರಧಾನ, ದಣ್ಣಾಯಕ ಎಂಬ ಬಿರುದನ್ನು ಹೊಂದಿದ್ದರು. ಒಡೆಯ ಎಂಬುದು ಎಲ್ಲಾ ರಾಜ್ಯಪಾಲರುಗಳು ಉಪಯೋಗಿಸಿದ ಬಿರುದು. ರಾಜ್ಯಪಾಲರುಗಳು ತಮ್ಮ ಅಧಿಕಾರದ ವ್ಯಾಪ್ತಿಯನ್ನು ಮೀರುವಂತಿರಲಿಲ್ಲ. ಅವರು ಆ ರೀತಿ ನಡೆದು ಕೊಂಡಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹಿಂಜರಿಯುತ್ತಿರಲಿಲ್ಲ. ಉದಾ: ಮಹಾಬಲ ದೇವ ಒಡೆಯ, ಹಲರು, ನಖರ, ಹಂಜಮಾನರ ಹಕ್ಕುಗಳನ್ನು ಮೊಟಕುಗೊಳಿಸಿದಾಗ, ತಿಮ್ಮಣ್ಣ ಒಡೆಯ ಉಂಗುರಪಳ್ಳಿ ಮತ್ತು ವಾರಂಬಳ್ಳಿ ಕುಟುಂಬದ ಆಸ್ತಿಯನ್ನು ನಾಶ ಮಾಡಿದಾಗ, ರಾಜ ಮಧ್ಯ ಪ್ರವೇಶಿಸಿದ ಉಲ್ಲೇಖಗಳಿವೆ. ರಾಜ್ಯಪಾಲರುಗಳ ನೇತೃತ್ವದಲ್ಲಿ, ಸೈನ್ಯ ನೌಕಾಬಲ ಬಾರಕೂರಿನಲ್ಲಿ ಇತ್ತು. ಸ್ಥಳೀಯ ಆಡಳಿತದ ಅನುಕೂಲಕ್ಕಾಗಿ ಬಾರಕೂರನ್ನು 10 ಕೇರಿಗಳಾಗಿ ವಿಂಗಡಿಸಲಾಗಿತ್ತು.

ಕೋಟೆಕೇರಿ	ಚೌಳಿಕೇರಿ
ಬಳೆಗಾರಕೇರಿ	ಅರಸಿಕೇರಿ
ಮಣಿಗಾರಕೇರಿ	ರಂಗನಕೇರಿ
ಮೂಡುಕೇರಿ	ಭಂಡಾರಕೇರಿ
ಪಟಸಾಲಕೇರಿ	ಹೊಸಕೇರಿ

ಈ ಕೇರಿಗಳ ಆಡಳಿತಕ್ಕೆ ವ್ಯವಸ್ಥೆಯಿತ್ತು. ಸ್ಥಳೀಯ ಆಡಳಿತದಲ್ಲಿ ಪಾಲುಗೊಳ್ಳುತ್ತಿದ್ದವರ ವಿವರವನ್ನು ಶಾಸನಗಳು ನೀಡುತ್ತದೆ. ಅವರುಗಳಲ್ಲಿ ಪ್ರಮುಖರಾದವರು ಪಟ್ಟಣಸ್ವಾಮಿ, ಅಧಿಕಾರಿ, ಹೆಗ್ಗಡೆ ಮತ್ತು ಸೇನಭೋವ. ಬಾರಕೂರಿನ ಆಡಳಿತದಲ್ಲಿ ಮಿಲಿಟರಿ ಅಧಿಕಾರಿಗಳು ಭಾಗವಹಿಸುತ್ತಿದ್ದರು. ಮೊದಲೇ ವ್ಯಾಪಾರಿ ಚಟುವಟಿಕೆಗಳಿಂದ ವಿದೇಶದ ಗಮನವನ್ನು ಸೆಳೆದಿದ್ದ ಬಾರಕೂರು ವಿಜಯನಗರ ಕಾಲಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯಿತು. ವಿದೇಶಿ ಹಡಗುಗಳು ಬಾರಕೂರಿಗೆ ಬರುತ್ತಿದ್ದವು. ಇಬನ್ ಬಟೂಟ, ನಿಕಲೋ ಕಂಟಿ ಮೊದಲಾದ ವಿದೇಶಿ ಯಾತ್ರಿಕರ ಬರವಣಿಗೆಗಳಲ್ಲಿ ಬಾರಕೂರಿನ ಉಲ್ಲೇಖಗಳಿವೆ. ಡೊಮಿಂಗೊ ಪಾಯಸ್‌ನ

ವಿವರಣೆಯೂ, ಬಾರಕೂರು ಒಂದು ಪ್ರಮುಖ ಬಂದರಾಗಿತ್ತು ಎಂಬುದನ್ನು ಸಮರ್ಥಿಸುತ್ತದೆ. ಪೋರ್ಚುಗೀಸರ ಆಗಮನದೊಂದಿಗೆ, ಬಾರಕೂರು ಇನ್ನೂ ಪ್ರಮುಖ ವ್ಯಾಪಾರಿ ಕೇಂದ್ರವಾಯಿತು. ಬಾರಕೂರು ಪ್ರತಿ ವರ್ಷ 1 ಸಾವಿರ ಲೋಡ್ ಅಕ್ಕಿಯನ್ನು ಪೋರ್ಚುಗೀಸರಿಗೆ ಕೊಡಬೇಕಾಗಿತ್ತು. ಕೃಷ್ಣದೇವರಾಯನ ಕಾಲದಲ್ಲೂ ಪೋರ್ಚುಗೀಸರು ತುಂಬಾ ಪ್ರಭಾವಶಾಲಿಗಳಾಗಿದ್ದರು.

ಬಾರಕೂರಿನ ವ್ಯಾಪಾರಿ ಸಂಘಗಳು ಮುಖ್ಯ ಪಾತ್ರ ವಹಿಸುತ್ತಿದ್ದವು. ನಖರ ಹಂಜಮಾನ, ಸೆಟ್ಟಿಕಾರ ಇವುಗಳಲ್ಲಿ ಮುಖ್ಯವಾದವುಗಳು. ಬಾರಕೂರಿನ ಶಾಸನಗಳು ವಿಜಯನಗರ ಕಾಲದಲ್ಲಿ ಘಟ್ಟದ ಮೇಲಿನಿಂದ ವಸ್ತುಗಳು ಬರುತ್ತಿದ್ದ ಬಗ್ಗೆ, ಅವುಗಳು ಯಾವ ರೀತಿಯಲ್ಲಿ ಸಾಗಾಣಿಕೆಯಾಗುತ್ತಿದ್ದವು ಎಂಬ ಬಗ್ಗೆ ಹಾಗೂ ಬೇರೆ ಬೇರೆ ವ್ಯಾಪಾರಿಗಳಿಗೆ ಅವು ಹೇಗೆ ವಿತರಣೆಯಾಗುತ್ತಿದ್ದವು ಎಂಬುದನ್ನು ವಿವರಿಸುತ್ತವೆ. ಕ್ರಿ.ಶ. 1430ರ ಇಮ್ಮಡಿ ದೇವರಾಯನ ಶಾಸನವೊಂದು ವಿತರಣೆಯ ಸಂದರ್ಭದಲ್ಲಿ ಎರಡು ಕೇರಿಗಳ ಮಧ್ಯೆ ಆದ ಜಗಳವನ್ನು ಉಲ್ಲೇಖಿಸುತ್ತದೆ. ಅಲ್ಲದೆ ವಿಜಯನಗರ ಕಾಲದಲ್ಲಿ ಘಟ್ಟದ ಮೇಲಿನಿಂದ ಬಂದ ವಸ್ತುಗಳನ್ನು ಸಂಗ್ರಹ ಮಾಡಿಸಲು ಇದ್ದ ವ್ಯವಸ್ಥೆಯ ಬಗ್ಗೆಯೂ ಬೆಳಕು ಚೆಲ್ಲುತ್ತದೆ. ವಿತರಣೆಯ ಬಗ್ಗೆ ಕಟ್ಟು ಕಟ್ಟಳೆಗಳೂ ಆಗ ಪ್ರಚಲಿತವಿದ್ದವು. ಬಾರಕೂರಿನಿಂದ ಅನೇಕ ನಾಣ್ಯಗಳು, ವಿಜಯನಗರ ಕಾಲದಲ್ಲಿ ಹೊರಡಿಸಲ್ಪಟ್ಟವು. ಅವುಗಳಲ್ಲಿ ಪ್ರಮುಖ ಚಿನ್ನದ ನಾಣ್ಯಗಳೆಂದರೆ ಗದ್ಯಾಣ, ವರಾಹ, ಹೊನ್ನು, ಕಾಟಿ ಗದ್ಯಾಣ, ಕಾಟಿ ಪ್ರತಾಪ ಹಣ ಮತ್ತು ಹಾಗ. ಮುಡಿ, ಹಾನೆ, ಹಾಡ, ಸಿದ್ಧೆ ಮುಂತಾದ ತೂಕ ಮತ್ತು ಮಾಪನಗಳು ಉಪಯೋಗಿಸಲ್ಪಟ್ಟಿದ್ದವು. ಮುಡಿ (ಭತ್ತದ ಬೀಜದ ಆಧಾರದ ಮೇಲೆ) ಮತ್ತು ಕ್ಯೊಲು ಮಾಪನದ ಮೂಲಕ ಭೂಮಿಯನ್ನು ಅಳತೆ ಮಾಡಲಾಗುತ್ತಿತ್ತು. ತೆರು ಸಿದ್ಧಾಯ ಮುಂತಾದ ತೆರಿಗೆಗಳು ವಿಜಯನಗರ ಕಾಲದ ಬಾರಕೂರಿನಲ್ಲಿ ಪ್ರಚಲಿತವಿದ್ದವು. ಬೇಸಾಯ ವಿಜಯನಗರ ಕಾಲದ ಪ್ರಮುಖ ವೃತ್ತಿ. ಆಗ ಭೂಮಿಯ ವರ್ಗಾವಣೆಯಾದಾಗ ಭೂಮಿಯೊಂದಿಗೆ ಅದಕ್ಕೆ ಸಂಬಂಧಿಸಿದ ಜನರನ್ನೂ ವರ್ಗಾವಣೆ ಮಾಡುವ ಪದ್ಧತಿ ಇತ್ತು ಎನ್ನುವುದು ಮೂಡುಕೇರಿಯ ತಾಮ್ರ ಶಾಸನದಿಂದ ತಿಳಿದು ಬರುತ್ತದೆ. (ಹೊಲೆಯಾಳು ಬಂಕಿ ಅಂಗರ, ಹೆಣ್ಣಾಳು ಹಗ್ಗು ಅದರ ಸಂತಾನ ಸಹಿತ ಎರೆದು ಕೊಟ್ಟ ಆಳು ಯಿಪ್ಟು.) ಭೂಮಿಯ ಗೇಣಿಯನ್ನು ನಿರ್ಧರಿಸುವಾಗ ಮನೆ ತಾವು ಸಹ ಸೇರಿಸಲಾಗುತ್ತಿತ್ತು.

ಬಾರಕೂರು ಭತ್ತ ಹಾಗೂ ಕಬ್ಬು ಬೆಳೆಗೆ ಪ್ರಸಿದ್ಧವಾಗಿತ್ತು. ವಿಜಯನಗರ ಕಾಲದಲ್ಲಿ ಬಹಳ ವ್ಯವಸ್ಥಿತವಾದ ನೀರಾವರಿ ಸೌಲಭ್ಯವಿತ್ತು. ಗದ್ದೆಗಳು ವಿವಿಧ ಹೆಸರುಗಳಿಂದ ಕರೆಯಲ್ಪಡುತ್ತಿದ್ದವು. ಭೂಮಿಯ ಒಡೆತನದ ಬಗ್ಗೆ ಅನೇಕ ವಿವರಗಳಿವೆ. ಬಾರಕೂರಿನ ವಿಜಯನಗರ ಕಾಲದ ಶಾಸನಗಳಲ್ಲಿ ಕಂಡು ಬರುವ ಇನ್ನೊಂದು ಪ್ರಮುಖ ಉಲ್ಲೇಖವೆಂದರೆ ನಾಯರುಮೂಲ. ಇದು ತುಳುವಿನ ನಾಯರ್‌ನಿಂದ ಬಂದಿರಬೇಕು. ಇದು ಹೆಚ್ಚಾಗಿ ಕಂಡು ಬರುವುದು ಬ್ರಾಹ್ಮಣರು ದೇವಸ್ವ ಭೂಮಿಯನ್ನು ವ್ಯವಸಾಯಕ್ಕಾಗಿ ಪಡೆದುಕೊಂಡಾಗ ಇಲ್ಲಿ ಭೂಮಿಯ ಮಾಲಕ ದೇವಸ್ಥಾನ. ಬ್ರಾಹ್ಮಣರಿಗೆ ವ್ಯವಸಾಯದ ಹಕ್ಕು ಮಾತ್ರ. ಇದು ಬಾರಕೂರು ಭಾಗದಲ್ಲಿ ಹೆಚ್ಚು ಪ್ರಚಲಿತವಿದ್ದ ಒಂದು ವ್ಯವಸ್ಥೆ.

ಬ್ರಾಹ್ಮಣರು, ಆಡಳಿತದಲ್ಲಿ, ಆರ್ಥಿಕ ಚಟುವಟಿಕೆಗಳಲ್ಲಿ, ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಬಾರಕೂರು ಪರಿಸರದ ಎರಡು ಶಾಸನಗಳು ಬ್ರಾಹ್ಮಣರ ಜ್ಯೋತಿಷ್ಯ ವೃತ್ತಿಯ ಬಗ್ಗೆಯೂ ತಿಳಿಸುತ್ತವೆ. ದುಗ್ಗ ಬಿನ್ನಾಣಿತಿಯ ಮಗ ನರಸಿಂಹ ಬಿನ್ನಾಣಿಯ ಜೀವಕ್ಕೆ ಸೂರ್ಯಗ್ರಹಣದಂದು ಅಪಾಯವಿರುವುದಾಗಿ ಜ್ಯೋತಿಷಿಗಳಿಂದ ತಿಳಿದು ಬಂದ ವಿಷಯ ಹಾಗೂ ಅದೇ ದಿನದಂದು ಅವನು ತೀರಿಕೊಂಡ ವಿಷಯ ಶಾಸನದಲ್ಲಿ ಕಂಡು ಬರುವುದು ಇದನ್ನು ಸಮರ್ಥಿಸುತ್ತದೆ. ಜಾತಕ ಭಟ್ಟರ ವಿಷಯವೂ ಶಾಸನದಲ್ಲಿದೆ. ನಾಡವರ ಉಲ್ಲೇಖವೂ ಶಾಸನದಲ್ಲಿದೆ. ಅವರು ಆಡಳಿತದಲ್ಲಿ ಸಾಮಾಜಿಕ, ಆರ್ಥಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಮುಖ್ಯವಾಗಿ ಭಾಗವಹಿಸುತ್ತಿದ್ದರು. ಅವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುತ್ತಿದ್ದರು. ಅವರಲ್ಲಿ ಗೋತ್ರಗಳ ಬದಲಿಗೆ ಬಳಿ ಪ್ರಚಲಿತವಿತ್ತು.

ಬಿಲ್ಲವರು ಮತ್ತು ಮೊಗೇರರು ಸಹ ಮುಖ್ಯ ವಾಹಿನಿಯಲ್ಲಿದ್ದರು. ಗಾಣಿಗರು, ಮಡಿವಾಳರು ಸಮಾಜದ ಇತರ ವರ್ಗಗಳಾಗಿ ಶಾಸನಗಳಲ್ಲಿ ಕಂಡು ಬರುತ್ತಾರೆ. ವಿಜಯನಗರ ಕಾಲದಲ್ಲಿ ಅಳಿಯ ಸಂತಾನ ಪದ್ಧತಿಯಿಂದಾಗಿ, ಮಹಿಳೆಯರು ಪ್ರಮುಖ ಸ್ಥಾನವನ್ನು ಸಮಾಜದಲ್ಲಿ ಹೊಂದಿದ್ದರು. ಭೂಮಿಯ ವ್ಯವಹಾರದಲ್ಲಿ, ಧಾರ್ಮಿಕ ವಿಚಾರದಲ್ಲಿ, ದೇವಸ್ಥಾನದ ಕೆಲಸವನ್ನು ಮಾಡುವಲ್ಲಿ (ಕಸವ ಕಳೆವ ಬೆಸವಿತ್ತೀ) ದೇವದಾಸಿಗಳಾಗಿ, ರಾಜನ ಮಹಿಳಾ ಸಹಾಯಕರಾಗಿ (ಕುಂಚದ ಸರಸು) ಅವರ ಪಾತ್ರದ ವಿವರಗಳು ದಾಖಲೆಯಲ್ಲಿವೆ. ಶೈವ ಧರ್ಮ, ವೈಷ್ಣವ ಧರ್ಮ, ಜೈನ ಧರ್ಮ

ಬಾರಕೂರಿನ ಪ್ರಮುಖ ಧರ್ಮಗಳಾಗಿದ್ದವು. ಗಣೇಶ, ಶಕ್ತಿ, ಬ್ರಹ್ಮನ ಆರಾಧನೆಯೂ ಪ್ರಮುಖವಾಗಿತ್ತು. ಕೋಟೆಕೇರಿಯ ಪಂಚಲಿಂಗೇಶ್ವರ, ಮಣಿಗಾರಕೇರಿಯ ಸೋಮನಾಥೇಶ್ವರ, ಮೂಡುಕೇರಿಯ ಸೋಮೇಶ್ವರ, ವೇಣುಗೋಪಾಲಕೃಷ್ಣ, ಪಟಸಾಲಕೇರಿಯ ವೀರಭದ್ರ, ಚೌಳಿಕೇರಿಯ ಗಣೇಶ, ರಂಗನಕೇರಿಯ ಗಣೇಶ ಪ್ರಮುಖ ದೇವಾಲಯಗಳು. ನಾಥ ಪಂಥವೂ ಬಾರಕೂರಿನಲ್ಲಿ ಪ್ರಚಾರ ಪಡೆದಿತ್ತು. ವಿಜಯನಗರ ಕಾಲದ ಕೋಟೆಯ ಗೋಡೆಯ ಮೇಲೆ ರಕ್ಷಣೆಗಾಗಿ ನಿಲ್ಲಿಸಿದ್ದ ಮೂರ್ತಿಯೂ ಭೈರವನದ್ದು. ಚೌಳಿಕೇರಿಯ ಅನುಪಮನಾಥ ಒಡೆಯರ ಮಠ ಖ್ಯಾತಿ ಪಡೆದಿತ್ತು. ಇಲ್ಲಿಂದ ಗುರುಗಳನ್ನು ಕದ್ರಿಯಲ್ಲಿ ಪಟ್ಟಕ್ಕಾಗಿ ಕರೆದೊಯ್ಯಲು ಬಂದಾಗ ಚೌಳಿಕೇರಿಯವರು ಇಲ್ಲಿನ ನಾಥ ಪಂಥದ ಮಠಕ್ಕೆ ಹೆಚ್ಚಿನ ದತ್ತಿ ನೀಡಿ ಗುರುಗಳು ಇಲ್ಲಿಂದ ಹೋಗದಂತೆ ಮನವೊಲಿಸಿದ ಉಲ್ಲೇಖ ಶಾಸನದಲ್ಲಿ ದೊರೆಯುತ್ತದೆ. ಸೂರಾಲಿನ ತೊಳಹರು ಇಲ್ಲಿ ಮಠಗಳಿಗೆ ದತ್ತಿ ನೀಡಿದ್ದಿದೆ. ದೇವಸ್ಥಾನದ, ಮಠದ ವಿವಿಧ ಕಾರ್ಯಗಳಿಗೆ ಭಕ್ತರು ಮತ್ತು ಅರಸರು ಅಥವಾ ಅವರ ಪ್ರತಿನಿಧಿಗಳು ದಾನ ನೀಡುತ್ತಿದ್ದರು. ಹತ್ತು ಕೇರಿಯ ಪ್ರಧಾನ ದೇವರಾಗಿ ನಾರಾಯಣ ದೇವಸ್ಥಾನ ಹೆಸರು ಮಾಡಿತ್ತು. ಆದರೆ ಅದು ಇಂದು ಹೇಳ ಹೆಸರಿಲ್ಲದಂತಾಗಿದೆ. ಬಾರಕೂರಿನಲ್ಲಿರುವ ಬಸದಿಗಳು, ವಿಜಯನಗರ ಕಾಲದಲ್ಲಿ ನಿರ್ಮಾಣವಾದ ಬಸದಿ ಎಲ್ಲವೂ ಜೈನ ಧರ್ಮದ ಸ್ಥಿತಿಯನ್ನೂ ಸಮರ್ಥಿಸುತ್ತವೆ.

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ದೃಷ್ಟಿಯಿಂದಲೂ ಬಾರಕೂರು ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ. ಗಜಪೃಷ್ಠ ಶೈಲಿಯಲ್ಲಿ ನಿರ್ಮಿಸಲ್ಪಟ್ಟಿರುವ ಪಂಚಲಿಂಗೇಶ್ವರ ಬಾರಕೂರಿನ ಅತ್ಯಂತ ಪ್ರಾಚೀನ ದೇವಸ್ಥಾನಗಳಲ್ಲೊಂದು. ಈ ದೇವಾಲಯದ ದ್ವಾರಮಂಟಪ ವಿಜಯನಗರ ಕಾಲದ ಅಪೂರ್ವ ಕೆತ್ತನೆಗಳನ್ನೂ ಹೊಂದಿದೆ. ಇನ್ನು ಆಳುಪ ಕಾಲದಲ್ಲಿನ ಶಾಸನಗಳಲ್ಲಿ ಉಲ್ಲೇಖವಿರುವ ಅನೇಕ ದೇವಸ್ಥಾನಗಳು ವಿಜಯನಗರ ಕಾಲದಲ್ಲಿ ಧಾರಾಳವಾಗಿ ದಾನಧರ್ಮಗಳನ್ನು ಪಡೆದದ್ದನ್ನು ಕಾಣಬಹುದು, 1380ರಲ್ಲಿ ಕುಮಾರ ಮಾಧವಸ್ವಾಮಿ, ಗೋಪಿನಾಥ ಸ್ವಾಮಿಯನ್ನು ಪ್ರತಿಷ್ಠಾಪಿಸಿದ ಸ್ಪಷ್ಟ ಉಲ್ಲೇಖವಿದೆ. ಪುನರ್ನಿರ್ಮಾಣ, ಜೀರ್ಣೋದ್ಧಾರಗಳನ್ನು ಕಂಡದ್ದನ್ನು ನೋಡಬಹುದು. ವಿಜಯನಗರ ಕಾಲದ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪವನ್ನು ಪ್ರತಿನಿಧಿಸುವ ಅನೇಕ ಸ್ಮಾರಕಗಳು ಬಾರಕೂರಿನಲ್ಲಿ ಇಂದೂ ಇವೆ.

ಹೀಗೆ ಹಲವು ವಿಷಯಗಳಲ್ಲಿ ವಿಶೇಷತೆಯಿಂದ ಕೂಡಿದ ಬಾರಕೂರು ಕರಾವಳಿ ಕರ್ನಾಟಕದ ಇತಿಹಾಸದ ಕೇಂದ್ರ ಸ್ಥಾನ. ಆದರೆ ರಾಜಕೀಯ, ಆರ್ಥಿಕ ಮಹತ್ವ ಕ್ಷೀಣಿಸಿದಾಗ ಬಾರಕೂರು ಕರಾವಳಿಯ ಕಿರು ಹಂಪೆಯಾಗುತ್ತಾ ಸಾಗಿತು. ಬಾರಕೂರಿನ ಅನೇಕ ಐತಿಹಾಸಿಕ ಮಹತ್ವದ ಅವಶೇಷಗಳು ನಾಶವಾಗ ತೊಡಗಿದವು. ಯಾವುದೇ ವಿದೇಶಿ ದಾಳಿಗಾರರ ಹೊಡೆತಕ್ಕೆ ಸಿಗದ ಬಾರಕೂರಿನ ಅನೇಕ ಸ್ಮಾರಕಗಳು ನಾಶದ ಅಂಚಿನಲ್ಲಿವೆ. ಇದಕ್ಕೆ ನಾವೇ ಕಾರಣರು. ನಮ್ಮ ಇತಿಹಾಸನವನ್ನು ಹೇಳುವ ಈ ಸ್ಮಾರಕಗಳನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಳ್ಳಬೇಕೆಂಬ ಪ್ರಜ್ಞೆ ನಮ್ಮಲ್ಲಿ ಇಲ್ಲ. ಇನ್ನು ಜೀರ್ಣೋದ್ಧಾರದ ಹೆಸರಿನಲ್ಲಿ ಆಗುತ್ತಿರುವ ಬದಲಾವಣೆಗಳು ಸಹ ನಮ್ಮ ಕಲೆಯ ನಾಶಕ್ಕೆ ಕಾರಣವಾಗಿವೆ.

ತುಳುನಾಡಿನ ರಾಜಧಾನಿಯಾಗಿದ್ದ ಬಾರಕೂರಿನ ಐತಿಹಾಸಿಕ ಪ್ರಾಮುಖ್ಯತೆಯು ಜನರಿಗೆ ತಿಳಿಯಬೇಕಾದರೆ, ಅದನ್ನು ತಿಳಿಸುವ ಕೆಲಸ ಸಂಬಂಧಪಟ್ಟ ಇಲಾಖೆಗಳಿಂದ, ಸರಕಾರದಿಂದ ಆಗಬೇಕಾಗಿದೆ. ಇದೆಲ್ಲವುದಕ್ಕೆ ಜನರ ಪೂರ್ಣ ಪ್ರಮಾಣದ ಸಹಕಾರದ ಅಗತ್ಯವೂ ಇದೆ. ಇವೆಲ್ಲವೂ ಸಾಕಾರ ಗೊಳ್ಳಬೇಕಾದರೆ ಬಾರಕೂರಿನ ಅಧ್ಯಯನವನ್ನು ಗುರಿಯಾಗಿಟ್ಟುಕೊಂಡು ಸಂಶೋಧನಾ ಕೇಂದ್ರ ಮತ್ತು ವಸ್ತು ಸಂಗ್ರಹಾಲಯವನ್ನು ಬಾರಕೂರಿನಲ್ಲಿ ಸ್ಥಾಪಿಸಬೇಕು. ಈ ನಿಟ್ಟಿನಲ್ಲಿ ಸರಕಾರ ಕಾರ್ಯ ಪ್ರವೃತ್ತವಾಗಲಿ ಎಂಬ ಕೋರಿಕೆ ಎಲ್ಲಾ ಇತಿಹಾಸಪ್ರಿಯರದ್ದು.

ಪ್ರವಾಸಿ ಸಾಹಿತ್ಯ ಮತ್ತು ವಿಜಯನಗರ

ಪ್ರಸಾದ್ ರಾವ್ ಎಂ.

ವಿಜಯನಗರ ಕಾಲದ ಚರಿತ್ರೆಯ ಅಧ್ಯಯನದಲ್ಲಿ ಪ್ರವಾಸಿ ಸಾಹಿತ್ಯಕ್ಕೆ ಬಹಳ ಮಹತ್ವವಿದೆ. ಪೇಸ್, ನ್ಯೂನಿಜ್ ಮುಂತಾದ ವಿದೇಶಿ ಪ್ರವಾಸಿಗರು ನೀಡಿರುವ ವಿವರಗಳಲ್ಲಿ ಕೆಲವು ವರ್ಣನೆಗಳು ಚರಿತ್ರೆಕಾರರಿಗೂ ಪಠ್ಯಪುಸ್ತಕ ರಚನೆ ಮಾಡುವವರಿಗೂ ಆಪ್ತವಾಗಿ ಕಂಡಿರುವುದಕ್ಕೋ ಏನೋ ಆ ವರ್ಣನೆಗಳು ಚರಿತ್ರೆಯೊಳಗೆ ಸೇರಿಕೊಂಡು ಸಂಕೀರ್ಣ ಚಾರಿತ್ರಿಕ ಘಟ್ಟವಾದ ವಿಜಯನಗರ ಸಾಮ್ರಾಜ್ಯದ ಏಕರೂಪೀ ಗ್ರಹಿಕೆಗೆ ಕಾರಣವಾಗಿದೆ. ಉದಾಹರಣೆಗೆ, ಡೊಮಿಂಗೋ ಪೇಸ್‌ನು 'ವಿಜಯನಗರದ ರಸ್ತೆಗಳಲ್ಲಿ ಮುತ್ತು ರತ್ನಗಳನ್ನು ಮಾರುತ್ತಿದ್ದರು" (ಪುಟ 79 ವಿಜಯನಗರ ಪೇಸ್‌ನ ಪ್ರವಾಸಿ ಕಥನ)[1] (ರಾಶಿರಾಶಿಯಾಗಿ?) ಎಂದು ಹೇಳಿರುವನೆಂದು ವ್ಯಾಪಕವಾಗಿ ತಿಳಿಯಲಾಗಿದೆ[2]. ಮತ್ತು ಈ ತಿಳುವಳಿಕೆಯು, 'ಓರ್ವ ವಿದೇಶಿಯನೇ ವಿಜಯನಗರದ ಸಮೃದ್ಧಿಯನ್ನು ಕೊಂಡಾಡಿದ ಮೇಲೆ, ದೇಶ ಪ್ರೇಮಿಗಳಾದ ನಾವೆಲ್ಲರೂ ಎದುರಾಡಬಹುದೇ?' ಎಂಬ ಒತ್ತಾಯಕ್ಕೆ ಹಾಗೂ ಇಡೀ ಸಾಮ್ರಾಜ್ಯದ ಸಮೃದ್ಧಿ ಸುಖಶಾಂತಿಗಳ ಪ್ರಾತಿನಿಧಿಕ ಸ್ವರೂಪದ ಜನಪ್ರಿಯ ಗ್ರಹಿಕೆಗೂ ಕಾರಣವಾಗಿವೆ.

ಅಂದರೆ ವಿಜಯನಗರ ಚರಿತ್ರೆಯ ಅಸಂಖ್ಯಾತ ಆಕರಗಳಲ್ಲಿ ಒಂದಾದ ಡೊಮಿಂಗೋ ಪೇಸ್‌ನ ಪ್ರವಾಸಿ ಕಥನವು, ಅದರಲ್ಲೂ ಅವನು ನೀಡಿರುವ ಅಸಂಖ್ಯಾತ ವಿವರಗಳಲ್ಲಿ ಜನಪ್ರಿಯವಾಗಿ ಉದ್ಧೃತಗೊಳ್ಳುವ ಮೇಲ್ಕಾಣಿಸಿದ ಒಂದು ವಾಕ್ಯವು ವಿಜಯನಗರ (ಅಂದರೆ ಕೃಷ್ಣದೇವರಾಯನ ರಾಜಧಾನಿಯ) ಬಗ್ಗೆ ಹೇಳಿಕೆಯಾಗಿದ್ದರೂ ಅದು ಇಡೀ ಸಾಮ್ರಾಜ್ಯದ ಬಗೆಗಿನ ಪ್ರಾತಿನಿಧಿಕ ಸತ್ಯವಾಗುವ ರೀತಿ ವಿಸ್ಮಯಕಾರಿಯಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪೇಸ್‌ನ ಪ್ರವಾಸೀ ಕಥನದ ಆಯ್ದ ಕೆಲವೇ ವಾಕ್ಯಗಳು ವಿಜಯನಗರದ ಸಾಮ್ರಾಜ್ಯದ ಮೌಲ್ಯಾಂಕನಕ್ಕೆ ತಳಹದಿಯಾಗುತ್ತವೆ. ಆದರೆ ಇದೇ ಕಥನದ ಉಳಿದ ಭಾಗಗಳು ಚರಿತ್ರೆ ಕಟ್ಟುವ ಕೆಲಸದಲ್ಲಿ ನುಪಯುಕ್ತವಾಗಿ ಹೊರಗುಳಿದು ಬಿಟ್ಟಿರುವುದನ್ನು

ಕಾಣಬಹುದಾಗಿದೆ. ಆದುದರಿಂದ ಚರಿತ್ರೆಯ ಕಥನದಲ್ಲಿ ಪಾಲ್ಗೊಳ್ಳುವ ಪ್ರವಾಸಿಕಥನದ ಅಂಶಗಳು ಯಾವ ಕಾರಣಗಳಿಗಾಗಿ ಪ್ರಾಧಾನ್ಯತೆಯನ್ನು ಪಡೆದವು ಎನ್ನುವುದನ್ನೂ ಹಾಗೆಯೇ, ಅವಜ್ಞೆಗೊಳಗಾದ ಕಥನದ ಅಂಶಗಳು ಯಾವ ಕಾರಣಗಳಿಗಾಗಿ ಚರಿತ್ರೆಯ ವಿವರಗಳಾಗಲು ಯೋಗ್ಯವೆನಿಸಲಿಲ್ಲ ಎನ್ನುವುದನ್ನೂ ವಿಶ್ಲೇಷಿಸಬೇಕಾಗುತ್ತದೆ.

ಇದನ್ನು ತಿಳಿಯಲು ಚರಿತ್ರೆ ಎನ್ನುವ ಪರಿಕಲ್ಪನೆಯನ್ನು ನಿರ್ವಚಿಸುವ ರೀತಿಯನ್ನೂ ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಜನಪ್ರಿಯ ಭಾಷೆಯಲ್ಲಿ ಚರಿತ್ರೆಯು ಗತಕಾಲದ ಘಟನೆಗಳ ಬಗೆಗಿನ ಅರಿವು/ಜ್ಞಾನ ಎಂಬ ಗ್ರಹಿಕೆಯಿದೆ. ಆದರೆ ಚರಿತ್ರೆಯ 'ಜ್ಞಾನಕ್ಷೇತ್ರ' ಕೆಲವು ಸೈದ್ಧಾಂತಿಕ ನಿಲುವುಗಳಿಂದಾಗಿ ಕಟ್ಟಲ್ಪಡುವ ಕಥನಗಳ ರಚನೆಯಾಗಿದೆ. ಈ ಕಾರಣದಿಂದಲೇ ಯಾವತ್ತೂ ಸೈದ್ಧಾಂತಿಕ ತಳಹದಿಯಲ್ಲೇ ಕಟ್ಟಲ್ಪಡುವ ಚರಿತ್ರೆಯು ತನ್ನ ಕಥನಗಳಿಗೆ, ದಾಖಲೆಗಳನ್ನು ಆಯ್ಕೆ ಮಾಡುವ, ಒಳಗೊಳ್ಳುವ, ಹೊರಗಿಡುವ ಅಥವಾ ತನಗೆ ಬೇಕಾದಂತೆ ವ್ಯಾಖ್ಯಾನಿಸುವ ಕೆಲಸವನ್ನು ಮಾಡುತ್ತದೆ. ಆದಾಗ್ಯೂ, ಜನಸಾಮಾನ್ಯರು ಚರಿತ್ರೆಯನ್ನು ವಸ್ತುನಿಷ್ಠ, ನಿರ್ಲಿಪ್ತ ಸತ್ಯದ ದರ್ಶನವೆಂದೇ ತಿಳಿದಿರುವುದರಿಂದ, ಅಧಿಕಾರ ರಾಜಕೀಯದಲ್ಲಿ ಚರಿತ್ರೆಯನ್ನು ಬಳಸಿಕೊಳ್ಳುವುದು ಸುಲಭ ಸಾಧ್ಯವಾಗಿದೆ. ಈ ಪ್ರಬಂಧದ ಸಂದರ್ಭದಲ್ಲಿ ಹೇಳುವುದಾದರೆ, ವಿಜಯನಗರ ಸಾಮ್ರಾಜ್ಯದ ಚರಿತ್ರೆಯನ್ನು ವಿಭಿನ್ನ ರೀತಿಗಳಲ್ಲಿ ರಚಿಸಿಕೊಳ್ಳುವ ಸಾಧ್ಯತೆಗಳೂ ಇರುವುದರಿಂದ ಈ ರಚನೆಗಳು ಜನಪ್ರಿಯ ಚರಿತ್ರೆಗೂ ಮತ್ತು ಆ ಚರಿತ್ರೆಯ ರಾಜಕೀಯ ಬಳಕೆಗಳಿಗೂ, ಸವಾಲಾಗಬಹುದಾಗಿದೆ.

ಮೊದಲಾಗಿ ಡೊಮಿಂಗೋ ಪೇಸ್‌ನ ಪ್ರವಾಸಿ ಕಥನವು ವಿಜಯನಗರದ ಸಾಮ್ರಾಜ್ಯ ಚರಿತ್ರೆಯನ್ನು ಕಟ್ಟುವಲ್ಲಿ ಯಾವ ರೀತಿಯಲ್ಲಿ ಬಳಕೆಯಾಗಿದೆಯೆಂದು ಗಮನಿಸಬಹುದು. 1897 ರಲ್ಲಿ ಬೆಳಕಿಗೆ ಬಂದ ಡೊಮಿಂಗೋ ಪೇಸ್ ಹಾಗೂ ನ್ಯೂನಿಜ್‌ರವರ ಪ್ರವಾಸ ಕಥನಗಳನ್ನು, ಚಾರಿತ್ರಿಕ ಆಕರವನ್ನಾಗಿ ಬಳಸಿಕೊಂಡವನು ರಾಬರ್ಟ್ ಸೀವೆಲ್, ವಸುಂಧರಾ ಫಿಲಿಯೊಜೆಟ್‌ರವರು ಹೇಳುವಂತೆ, ವಿಜಯನಗರ ಸಾಮ್ರಾಜ್ಯದ ಕುರಿತು ರಾಬರ್ಟ್ ಸೀವೆಲ್ ಬರೆದ 'ಎ ಫರ್‌ಗಾಟನ್ ಎಂಪಾಯರ್' ಎನ್ನುವ ಕೃತಿ ಮುಖ್ಯವಾಗಿ ಮುಸ್ಲಿಂ ಹಾಗೂ ಯುರೋಪ್‌ನ ಪ್ರವಾಸಿ ಕಥನಗಳನ್ನು ಆಧಾರಿಸಿದುದಾಗಿದೆ. 'ಎ ಫರ್‌ಗಾಟನ್ ಎಂಪಾಯರ್' (ಮರೆತು ಹೋದ ಸಾಮ್ರಾಜ್ಯ) ಎನ್ನುವ ಹೆಸರೇ ಭಾವನಾತ್ಮಕವಾಗಿದ್ದು , ಈ ಗ್ರಂಥದಲ್ಲಿರುವ ವಿವರಗಳು ಕೂಡಾ,

ಚಾರಿತ್ರಿಕ 'ಸತ್ಯ'ಗಳಿಗಿಂತ ಮಿಗಿಲಾಗಿ ಹಂಪಿಯ ಅವಶೇಷಗಳನ್ನು ಕಂಡಾಗಿನ ವಿಷಾದದ ಛಾಯೆಯನ್ನು ಹೊಂದಿದೆ ಎಂದರೆ ತಪ್ಪಾಗಲಾರದು. ಓರ್ವ ಬ್ರಿಟಿಷ್ ಅಧಿಕಾರಿಯಾಗಿದ್ದ ಸಿವೆಲ್‌ರ ಗ್ರಂಥವು, ರಾಷ್ಟ್ರೀಯ ಚರಿತ್ರಕಾರರಿಂದ ವಿಮರ್ಶೆಗೊಳಗಾಗಿ 'ನೆವರ್ ಟು ಬಿ ಫರ್‌ಗಾಟನ್ ಎಂಪಾಯರ್' (ಸೂರ್ಯನಾರಾಯಣ ರಾವ್) ಸಿಟಿ ಆ್ಯಂಡ್ ಎಂಪಾಯರ್ (ನೀಲಕಂಠ ಶಾಸ್ತ್ರಿ) ಮುಂತಾಗಿ ವಿಜಯನಗರ ಚರಿತ್ರೆಯ ನಿರ್ವಚನಗಳಿಗೆ ಕಾರಣವಾಯಿತು ಎನ್ನುವುದನ್ನು ಮನಗಾಣಬೇಕು. ಆದರೆ, ಮುಂದೆ ವಿಜಯನಗರದ ಚರಿತ್ರೆಯ ಬಗ್ಗೆ ಸಾಕಷ್ಟು ಶಾಸನಗಳು, ಕೈಫಿಯತ್ತುಗಳು ಲಭ್ಯವಾದರೂ, ಸಿವೆಲ್ ನೀಡಿದ ಪ್ರವಾಸಿ ಕಥನಗಳ ವ್ಯಾಖ್ಯಾನವೇ ಪ್ರಧಾನ ಧಾರೆಯಾಗಿ ಹೊಮ್ಮುವುದನ್ನು ಕಾಣಬಹುದಾಗಿದೆ.

ಇಲ್ಲಿ ಮತ್ತೆ ಕೆಲಸಮಾಡುತ್ತಿರುವ ಭಾವನೆಯೆಂದರೆ,: ಓರ್ವ ವಿದೇಶಿ ಚರಿತ್ರಕಾರನೇ ವಿಜಯನಗರವನ್ನು ಕೊಂಡಾಡಿದ ಮೇಲೆ, ನಮ್ಮಂತಹ ದೇಶಪ್ರೇಮಿಗಳು, ಕನ್ನಡಿಗರು ವಿರೋಧಿಸುವುದು ಸಮಂಜಸವಲ್ಲ' ಎನ್ನುವುದು. ಅಂದರೆ ಚರಿತ್ರೆಯ ವಿಮರ್ಶಕ, ಚಿಕಿತ್ಸಕ ಮನಸ್ಸನ್ನು ರಾಷ್ಟ್ರೀಯವಾದಿ ಪ್ರಾದೇಶಿಕವಾದಿ ಸಿದ್ಧಾಂತಗಳು ಆಕ್ರಮಿಸಿಕೊಳ್ಳುತ್ತವೆ ಎಂದಂತಾಯಿತು. ಇನ್ನು, ಕೆಲವು ಆಳವಾದ ಅಧ್ಯಯನಗಳು ವಿಜಯನಗರದ ಪ್ರವಾಸಿ ಸಾಹಿತ್ಯದ ಪ್ರಾಧಾನ್ಯತೆಯನ್ನು ಬದಿಗಿಟ್ಟಿದ್ದರೂ ಕೂಡಾ, ಅಂತಹಾ ಅಧ್ಯಯನಗಳು ಜನಪ್ರಿಯ ಚರಿತ್ರೆಯ ಭಾಗವಾಗುವಲ್ಲಿ ವಿಫಲವಾಗಿವೆ ಎನ್ನುವುದನ್ನು ಗಮನಿಸಬೇಕು. ಅಂದರೆ ಅದಾಗಲೇ ನಮ್ಮ ಅಧಿಕಾರ–ರಾಜಕೀಯ ಕ್ಷೇತ್ರವು, ಪ್ರವಾಸಿ ಸಾಹಿತ್ಯ ಹಾಗೂ ಸಿವೆಲ್‌ನಂತಹ ಬ್ರಿಟಿಷ್ ಅಧಿಕಾರಿ- ವಿದ್ವಾಂಸರು ನೀಡಿರುವ ವಿಜಯನಗರದ ಚಿತ್ರಣವನ್ನು ಒಪ್ಪಿಕೊಂಡು, ಶಿಕ್ಷಣ ಹಾಗೂ ಮಾಧ್ಯಮಗಳ ಮೂಲಕ, ಆ 'ಜ್ಞಾನ'ವನ್ನೇ ಸಾಂಸ್ಥೀಕರಣ ಗೊಳಿಸಿರುವದನ್ನೂ ನಾವು ಕಾಣಬಹುದು. ಈ ಕಾರಣದಿಂದಾಗಿಯೇ ಇಂದು ವಿಜಯನಗರ ಸಾಮ್ರಾಜ್ಯದ ಶ್ರೇಷ್ಠತೆಯ ಬಗ್ಗೆ ಹೆಚ್ಚು ಚರ್ಚೆಗೆ ಅವಕಾಶವಿಲ್ಲ ದಂತಾಗಿರುವುದು ಎಂದು ಅಭಿಪ್ರಾಯಪಡಬಹುದಾಗಿದೆ.

ಡೊಮಿಂಗೋಪೇಸ್ ಮುಂತಾದ ಐರೋಪ್ಯ ದೇಶಿಗರ ಪ್ರವಾಸಿಕಥನಗಳ ಕೆಲವೇ ಅಂಶಗಳನ್ನು ಎತ್ತಿಕೊಂಡು, ಅವನ್ನು ನಮ್ಮ ಶ್ರೇಷ್ಠತೆಗೆ ಸಂದ ಗೌರವ ಎಂದು ಭಾವಿಸುವುದು ಸರಿಯಾಗಲಾರದು. ಈ ಶ್ರೇಷ್ಠತೆಯ ನಿರೂಪಣೆಯಲ್ಲಿ

ಪ್ರವಾಸಿಕಥನಗಳ ಯಾವ ಅಂಶಗಳು ಮತ್ತೆ ಮತ್ತೆ ಉಲ್ಲೇಖಗೊಳ್ಳುತ್ತವೆ ಎಂಬುದನ್ನು ಪರಿಶೀಲಿಸಿದಲ್ಲಿ, ಶ್ರೇಷ್ಠತೆ ಎನ್ನುವ ಕಲ್ಪನೆಯೂ ನಿರಚನೆಗಳಾಗುತ್ತದೆ. ವಿಜಯನಗರದ ಕಥನಗಳಲ್ಲಿ ಸಾಮ್ರಾಜ್ಯ ವಿಸ್ತರಣೆ, ಧಾರ್ಮಿಕತೆ, ಕಲೆ, ರಾಜರ ಔದರ್ಯ, ಹಿಂದೂ ಮುಸ್ಲಿಂ ಎನ್ನುವ ಗುರುತುಗಳು ಹಾಗೂ ಯುದ್ಧಗಳು, ರಾಜರ ವಿಲಾಸೀ ಜೀವನದ ಹಾಗೂ ಸ್ವಧರ್ಮ ರಕ್ಷಣೆಯ/ಪೋಷಣೆಯ ವಿವರಗಳನ್ನು ದಾಖಲಿಸಲು ಪ್ರವಾಸಿ ಸಾಹಿತ್ಯದ ವಿವರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ರಾಜಧಾನಿಯ ಆರ್ಥಿಕ ವ್ಯಾಪಾರ–ವ್ಯವಹಾರಗಳ ಬಗೆಗಿನ ತೀರ್ಮಾನಗಳಿಗೂ ಈ ವಿವರಗಳನ್ನು ಬಳಸಿಕೊಳ್ಳಲಾಗಿದೆ.

ಅಂದರೆ ಚರಿತ್ರೆಯ ಜನಪ್ರಿಯ ಮಾದರಿಗಳು ಸಿವೆಲ್‌ರವರ ಕಥನದಂತೆ, ಸಾಮ್ರಾಜ್ಯ ವಿಸ್ತರಣೆಯನ್ನು ಒಂದು ಧನಾತ್ಮಕ ಅಂಶವೆಂಬಂತೆ ಚಿತ್ರಿಸಿರುವುದನ್ನು ನಾವು ಕಾಣಬಹುದು. ಅದೇ ರೀತಿ ಈ ಕಥನಗಳು ರಾಷ್ಟ್ರೀಯತೆ ಮತ್ತು ಸಂಸ್ಕೃತಿಯ ಕಲ್ಪನೆಗಳಿಗೆ ಧರ್ಮದ ಬಣ್ಣವನ್ನು ಹಚ್ಚಿರುವುದನ್ನು ಕಾಣಬಹುದು. ಮಾತ್ರವಲ್ಲ ವೈದಿಕ ಪರಂಪರೆಯನ್ನು 'ಹಿಂದೂ' ಎನ್ನುವ ಅರ್ಥದಲ್ಲಿ ಸಾಮಾನ್ಯೀಕರಣಗೊಳಿಸಿರುವ ಪ್ರಕ್ರಿಯೆಯನ್ನು ಕೂಡಾ ಈ ಕಥನಗಳಲ್ಲಿ ಕಾಣಬಹುದಾಗಿದೆ. ಮುಖ್ಯವಾಗಿ ಹೇಳಬೇಕಾದುದೆಂದರೆ, ಮೇಲೆ ತಿಳಿಸಿದ ಮನೋಭಾವಕ್ಕೆ ಒಗ್ಗುವ ಅಂಶಗಳನ್ನು ಮಾತ್ರ ಪ್ರವಾಸೀ ಕಥನಗಳಿಂದ ಆಯ್ದು ಬಳಸಿಕೊಳ್ಳಲಾಗಿದೆ. ಈ ಕಾರಣದಿಂದ, ಪ್ರವಾಸಿ ಕಥನಗಳ ಸಮಗ್ರ ಅಧ್ಯಯನವೂ, ಚರಿತ್ರೆಯ ಪರಿಪೂರ್ಣ ಅರ್ಥೈಸುವಿಕೆಯೂ ಸಾಧ್ಯವಾಗದೇ ಅಧಿಕಾರದ ನೆಲೆಗಟ್ಟುಗಳನ್ನು ಕಾಪಾಡುವ, ಬೆಳೆಸುವ ರೀತಿಯ ಏಕಮುಖೀ ಚರಿತ್ರೆಯ ನಿರ್ಮಾಣವಾಗಿದೆ ಎನ್ನಬಹುದು.

ಈ ವಿವರಗಳನ್ನು ಗಮನಿಸಿದಾಗ, ಪ್ರವಾಸಿ ಸಾಹಿತ್ಯದಲ್ಲಿ ಹೇರಳವಾಗಿ ಕಂಡು ಬಂದರೂ, ಅವಜ್ಞೆಗೊಳಗಾದ ಕೆಲವೊಂದು ಅಂಶಗಳನ್ನು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವಾಗುತ್ತದೆ. ಉದಾಹರಣೆಗೆ ಸ್ತ್ರೀಯರ ಸ್ಥಾನಮಾನ, ಅರಮನೆಯೊಳಗಿನ ಶ್ರೇಣೀಕೃತ ವ್ಯವಸ್ಥೆ, ಜಾತಿಪದ್ಧತಿ, ಸಾಮಾನ್ಯ ರಸ್ತೆಗಳು, ಜನರು ವಾಸಿಸುವ ಮನೆಗಳ ವಾಸ್ತುಶಿಲ್ಪ, ಆಹಾರದ ರೀತಿನೀತಿಗಳು, ಭ್ರಷ್ಟಾಚಾರ ಇತ್ಯಾದಿ.

ಉದಾಹರಣೆಗೆ ವಿಜಯನಗರದ ಬಗ್ಗೆ ಡೊಮೊಂಗೋಪೇಸ್ ನೀಡಿರುವ ಹೆಚ್ಚಿನ ವಿವರಗಳು ರಾಜಧಾನಿಯ ಉತ್ಸವ, ಅರಮನೆಯ ಜೀವನಗಳಿಗೆ ಸಂಬಂಧಪಟ್ಟದ್ದಾಗಿದೆ. ಅದನ್ನು ಇಡೀ ಸಾಮ್ರಾಜ್ಯದ ಪ್ರಾತಿನಿಧಿಕ ಸತ್ಯವನ್ನಾಗಿ ಬಿಂಬಿಸುವುದರಿಂದ ವಿಜಯನಗರದ ಸಂಕೀರ್ಣ ಚರಿತ್ರೆಯನ್ನು ಸರಳೀಕರಿಸಿ ದಂತಾಗುತ್ತದೆ. ಆದುದರಿಂದಲೇ ಪೇಸ್‌ನ ಕಥನದ, ಕೆಲವೊಂದು ಅಷ್ಟೊಂದು ಚರ್ಚಿತವಲ್ಲದ ವಿವರಗಳನ್ನು ಪರಿಶೀಲಿಸುವುದು ವಿಜಯನಗರ ಕಾಲದ ಜೀವನವನ್ನು ತಿಳಿದುಕೊಳ್ಳುವಲ್ಲಿ, ಸಹಾಯವಾದೀತೆಂಬ ಆಶಯದೊಂದಿಗೆ ಈ ಕೆಳಗಿನ ವಿವರಗಳನ್ನು ದಾಖಲಿಸಲಾಗಿದೆ.

ಕೃಷ್ಣದೇವರಾಯನ ಆಸ್ಥಾನದ ವಿವರಗಳನ್ನು ನೀಡುತ್ತಾ, ಪೇಸ್ ಹೇಳುತ್ತಾನೆ. "ರಾಜನ ಮುಂದೆ ಬಂದ ಕೂಡಲೇ ಸಾಮಂತರೆಲ್ಲರೂ ಆತನಿಗೆ ಕೈಯೆತ್ತಿ ಮುಗಿದು ನಮಸ್ಕರಿಸುತ್ತಾರೆ. ಯಾರೂ ಕೂಡಾ ಕಣ್ಣೆತ್ತಿ ರಾಜನನ್ನು ನೋಡುವುದಿಲ್ಲ. ರಾಜನಿಂದ ದೂರ, ಗೋಡೆಗಳ ಬಳಿ ನಿಂತಿರುತ್ತಾರೆ. ಒಬ್ಬರು ಇನ್ನೊಬ್ಬರೊಂದಿಗೆ ಮಾತಾನಾಡುವುದಿಲ್ಲ. ಅವನ ಮುಂದೆ ವೀಳ್ಯ ಜಗಿಯುವುದಿಲ್ಲ". ಆ ಮೊದಲು ರಾಜನ ದಿನಚರಿಯನ್ನು ವಿವರಿಸುತ್ತಾ ಪೇಸ್ ಹೇಳುವ ಮಾತು ಕೂಡಾ ಮುಖ್ಯ– 'ರಾಜನನ್ನು ಓರ್ವ ಬ್ರಾಹ್ಮಣ ಸ್ನಾನ ಮಾಡಿಸುತ್ತಾನೆ/ರೆ. ಅವನು ಶ್ರೀಮಂತನೂ ರಾಜನು ಗೌರವಿಸುವವನೂ ಆಗಿರುತ್ತಾನೆ'. ಈ ಮಾತುಗಳ ಸಂದರ್ಭದಲ್ಲಿ ಪೇಸ್ ಮತ್ತು ರಾಜನ ಭೇಟಿಯ ವಿವರಗಳನ್ನು ನೋಡಬೇಕಾಗುತ್ತದೆ. ಪೇಸ್ ಹೇಳುತ್ತಾನೆ". ನಾವು ರಾಜರಿಗೆ ಎಷ್ಟೊಂದು ಹತ್ತಿರವಿದ್ದೆವೆಂದರೆ ಅವನ್ನು ನಮ್ಮೆಲ್ಲರನ್ನು ಮುಟ್ಟಿದ ಮತ್ತು ನಮ್ಮನೇ ಮತ್ತೆ ಮತ್ತೆ ನೋಡುತ್ತಿದ್ದ....' ಈ ಮಾತುಗಳಲ್ಲಿ ಪೇಸ್ ತನ್ನ ಶ್ರೇಷ್ಠತೆಯನ್ನು ಹೇಳಿಯೂ ಹೇಳದಂತೆ ಇಲ್ಲವೇ? (ಭಾರತದ ಶ್ರೇಣೀಕೃತ ಸಮಾಜದ ಬಗ್ಗೆ ಹೆಚ್ಚಿನ ಅರಿವಿಲ್ಲದ ಪೇಸ್ ಆಸ್ಥಾನದ ನರ್ತಕಿಯರ ಬಗ್ಗೆ ಹೇಳುವ ಮಾತು ಆಸ್ಥಾನದ ಸಂದರ್ಭವನ್ನೇ ನಿರಚಿಸುತ್ತದೆ ಆತ ಹೇಳುತ್ತಾನೆ 'ಈ ನರ್ತಕಿಯರನ್ನು ಉಳಿದು ಬೇರಾರೂ ರಾಜನ ಸಮ್ಮುಖದಲ್ಲಿ ವೀಳ್ಯ ತಿನ್ನುವಂತಿರಲಿಲ್ಲ' ಈ ನರ್ತಕಿಯರ ಬಗ್ಗೆ 'ಆಶ್ಚರ್ಯವೆಂದರೆ ಇಂಥಹ ವೃತ್ತಿಯ ಈ ಹೆಂಗಸರು ಅಷ್ಟೊಂದು ಸಂಪತ್ತನ್ನು (ಆಭರಣಗಳನ್ನು) ಗಳಿಸಿದ್ದಾದರೂ ಹೇಗೆ? ಮಾತ್ರವಲ್ಲ ಅವರಲ್ಲಿ ಕೆಲವರು ಭೂಮಿಯನ್ನೂ ಕೆಲಸದವರನ್ನೂ ಹೊಂದಿದ್ದರೆನ್ನುವುದೂ ವಿಶೇಷವೇ ಸರಿ') ಈ

ರೀತಿಯ ವಿವರಗಳು, ರಾಜಧಾನಿಯಲ್ಲಿ ರಾಜನು ನಡೆದುಕೊಳ್ಳುವ ರೀತಿ-(ಮುಟ್ಟುವ/ ಮುಟ್ಟಬಾರದ) ಆಚರಣೆಗಳು ಆ ಕಾಲದ ರಾಜಕೀಯ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಏನು ಹೇಳುತ್ತದೆ? ತನ್ನ ಮಂತ್ರಿ ತಿಮ್ಮರಸರೇ ಮುಂತಾದವರನ್ನ ದೂರ ಕುಳ್ಳರಿಸುವ ರಾಜನಗೆ ಪೋರ್ಚುಗೀಸರ ಅಥವಾ ನರ್ತಕಿಯರ ಸಾಮಿಪ್ಯದ ಮೇಲೆ ಯಾಕೆ ಅಷ್ಟೊಂದು ಪ್ರೀತಿ? ಈ ಪ್ರಶ್ನೆಗಳು, ಚರಿತ್ರೆಯ ಮಹಾಕಥನಕ್ಕೆ ಉಪಯುಕ್ತ ಎನಸದಿದ್ದರೂ, ವಿಜಯನಗರದ ಒಳ ಜೀವನವನ್ನು ತಿಳಿಯಲು ಸಹಕಾರಿಯಾಗುತ್ತವೆ ಎನ್ನಬಹುದು. (ಪುಟ 95 - 99 ವಿಜಯನಗರ ಪೇಸ್‌ನ ಪ್ರವಾಸಿ ಕಥನ)

ಅದೇ ರೀತಿಯಲ್ಲಿ ಡೊಮಿಂಗೋಪೇಸ್ ನೀಡುವ ಅರಮನೆಯ ವಿವರಗಳನ್ನು ನೋಡೋಣ. ತೊಟ್ಟಿಮನೆಯಂತಹ ರಚನೆಗಳಿರುವ ಅರಸುಮನೆಗಳನ್ನು ವಿವರಿಸಿದ ಮೇಲೆ, ರಾಜನ ಸಂಸಾರದ ವಿವರಗಳನ್ನು ನೀಡುತ್ತಾರೆ. 'ಈ ರಾಜನಿಗೆ ಹನ್ನೆರಡು ಕಾನೂನುಬದ್ಧ ಪತ್ನಿಯರಿದ್ದಾರೆ. ಅವರಲ್ಲಿ ಮೂವರು ಮಹಾರಾಣಿಯರು... ಅವರಲ್ಲಿ ಓರ್ವ ಪತ್ನಿ ಅವನ ಆಸ್ಥಾನ ನರ್ತಕಿಯೇ ಆಗಿದ್ದು ಅವನ ಯೌವ್ವನದ ಪ್ರೇಯಸಿಯಾಗಿ, ಅವನು ರಾಜನಾದಾಗ ಅವಳನ್ನು ಪತ್ನಿಯಾಗಿ ಸ್ವೀಕರಿಸುವೆನೆಂದು ಭಾಷೆ ಪಡೆದವಳಾಗಿದ್ದಳು. ಈ ಪ್ರತಿಯೊಬ್ಬ ಪತ್ನಿಗೂ ತನ್ನದೇ ಸ್ವಂತ ಮನೆಯಿದೆ ಹಾಗೂ ಸೇವಕಿಯರಿದ್ದಾರೆ. ಇವರಿಗೆ ಕಾವಲುಗಾರರೂ ಮಹಿಳೆಯರಾಗಿರುತ್ತಾರೆ. ಇವರಿರುವಲ್ಲಿ ಯಾವ ಪುರುಷನೂ ಪ್ರವೇಶಿಸುವಂತಿಲ್ಲ, ಪಹರೆಯ ಹಿಜಡಾಗಳು ಮಾತ್ರ ಇವರ ಮನೆಯೊಳಗೆ ತೆರಳಬಲ್ಲರೂ.. ಇವರು ಹೊರಗೆ ಹೋಗಬೇಕಾದಲ್ಲಿ ಮುಚ್ಚಿದ ಪಲ್ಲಕಿಗಳಲ್ಲಿ, (ಯಾರೂ ನೋಡದಂತೆ) ಎತ್ತಿಕೊಂಡು ಸಾಗುತ್ತಾರೆ. ಅವರ ಸುತ್ತ ಹಿಜಡಾಗಳ ದಂಡೇ ಇರುತ್ತದೆ..... '' ಎಂದು ಹೇಳುತ್ತಾ ಪೇಸ್ ರಾಣಿಯರ ಹಾಗೂ ಅವರ ಸಖಿಯರ ವಜ್ರವೈಡೂರ್ಯದ ಆಭರಣಗಳನ್ನು ವಿಸ್ಮಯದಿಂದ ಕೊಂಡಾಡುತ್ತಾನೆ. ಹಬ್ಬದ ದಿನದಂದು ಮಾತ್ರ ರಾಣಿಯರ ದರ್ಶವಾಗುವುದು ಎನ್ನುತ್ತಾನೆ. "ರಾಜನಿಗೆ ಯಾವುದೇ ರಾಣಿಯನ್ನು ಕರೆಯಬೇಕೆನಿಸಿದಾಗ ಆತ ಒಬ್ಬ ಹಿಜಡಾನನ್ನು ಕಳುಹಿಸುತ್ತಾನೆ. ಆ ಹಿಜಡಾ ರಾಣಿಯ ದಾಸಿಗೆ ಸಂದೇಶ ರವಾನಿಸುತ್ತಾನೆ ಮತ್ತು ರಾಣಿಯೇ ರಾಜನಿರುವಲ್ಲಿಗೆ ಬರುತ್ತಾಳೆ.... ಈ ವಿಷಯ ಉಳಿದವರಿಗೆ ತಿಳಿಯುವುದು ಶಕ್ಯವಿಲ್ಲ" ಎನ್ನುತ್ತಾನೆ. (ಪುಟ 71 -73 ವಿಜಯನಗರ ಪೇಸ್‌ನ ಪ್ರವಾಸಿ ಕಥನ)

ಈ ಚಿತ್ರಣವು ಅರಮನೆಯೊಳಗಿನ ಹೆಣ್ಣಿನ ಸ್ಥಾನ, ಅವಳ ಸ್ವಾತಂತ್ರ್ಯ ನಿರ್ಬಂಧಗಳ ಬಗ್ಗೆ ರಾಜನು ವಹಿಸುವ ಎಚ್ಚರಿಕೆಗಳು ಅಭದ್ರತೆಯ ಭಾವನೆಯನ್ನೂ ಸೂಚಿಸುವುದಿಲ್ಲವೆ? ಅರಮನೆಯ ರಾಣಿಯರಿಗೇಕೆ ಅಷ್ಟೊಂದು ಕಾವಲು? ವಿದ್ವೇಷದ ಭಯವೇ? ಅಥವಾ ಅವರ ಬಗ್ಗೆ ಅಪನಂಬಿಕೆಯೆ? ಎನ್ನುವ ಪ್ರಶ್ನೆಗಳು ಬಂದಾಗ, ಈ ವಿಚಾರಗಳಲ್ಲಿ ವಿಜಯನಗರ ಸಾಮ್ರಾಟರು ಬೇರೆ ಸಾಮ್ರಾಟರಿಗಿಂತ ತೀರಾ ಭಿನ್ನವಾಗಿರಲಿಲ್ಲ ಎನ್ನುವುದೂ ಸ್ಪಷ್ಟವಾಗುತ್ತದೆ.

ವಿಜಯನಗರ ಸಾಮ್ರಾಜ್ಯದ ಸಂಪತ್ತು ಸಮೃದ್ಧಿಯನ್ನು ಕೊಂಡಾಡುವ ಪೇಸ್‌ನ ಪ್ರವಾಸೀ ಕಥನ, ಆ ರಾಜಧಾನಿಯ ವ್ಯಾಪಾರ ವಹಿನಾಟಿನ ಕೆಲವು ಚಿತ್ರಗಳನ್ನು ನೀಡುತ್ತದೆ. ಒಂದು ಕೋಳಿಯ ಬೆಲೆ ಹಳ್ಳಿಗಳಿಗಿಂತ ವಿಜಯನಗರ ಪೇಟೆಯಲ್ಲೇ ಜಾಸ್ತಿ ಎಂದು ಅಭಿಪ್ರಾಯಪಡುವ ಪೇಸ್, ನಗರದಲ್ಲಿ 'ದುಡ್ಡಿನ' ಬೆಲೆ ಹಾಗೂ ಅದರ ಕಾರ್ಯಗಳನ್ನು ಗುರುತಿಸುವ ಕೆಲಸವನ್ನು ಮಾಡಿದ್ದಾನೆ. ನಗರದ ವಿಂಗಡನೆ ಜಾತಿ ಆಧಾರಿತ ವಿಂಗಡನೆಯೆಂದು ಸೂಚಿಸುತ್ತಾನಾದರೂ ಪ್ರಬಲ ಬ್ರಾಹ್ಮಣ ವರ್ಗವೇ ದೇವಸ್ಥಾನಗಳನ್ನು ಆಳುತ್ತಿತ್ತೆಂದು ಸೂಚಿಸುತ್ತಾನೆ. ವಿಜಯ ನಗರದಲ್ಲಿ ಮುಸ್ಲಿಂ ವಾಸಿಗಳಿಗಾಗಿಯೇ ಪ್ರತ್ಯೇಕ ಪ್ರದೇಶವಿದ್ದುದ್ದನ್ನು ಗುರುತಿಸುತ್ತಾ ಅದನ್ನು ಸಹಜವೆನ್ನುವಂತೆ ಚಿತ್ರಿಸಿದ್ದಾನೆ. ಅಂದರೆ ಕೋಮು ವೈಷಮ್ಯವು ವಿಜಯ ನಗರ ಕಾಲದ ರಾಜಕೀಯ ಲಕ್ಷಣ ಆಗಿರಲಿಲ್ಲ ಎನ್ನುವುದೂ ಹಿಂದೂ ಮುಸ್ಲಿಂ ಸಮೀಕರಣವನ್ನು ವಿಜಯನಗರ ಬಹಮನಸಾಮ್ರಾಜ್ಯಗಳಿಗೆ ಅನ್ವಯಿಸಿರುವುದು ಆ ನಂತರದ ಚರಿತ್ರೆಯ ಕಥನಗಳೇ ಎನ್ನುವುದು ಈ ಮೂಲಕ ಶ್ರುತವಾಗುತ್ತದೆ. (ಪುಟ 78 –82 ವಿಜಯನಗರ ಪೇಸ್‌ನ ಪ್ರವಾಸಿ ಕಥನ)

ವೈದಿಕ ಪುರೋಹಿತರಿಂದಲೇ ಮಾರ್ಗದರ್ಶನಕ್ಕೊಳಗಾಗುತ್ತಿದ್ದ ವಿಜಯನಗರದ ದೇವಾಲಯಗಳಿಗೆ ಪ್ರವೇಶ ಪಡೆಯುವ ಬಗ್ಗೆ ಪೇಸ್‌ನ ಮಾತು ಕುತೂಹಲಕಾರಿಯಾಗಿದೆ. ಪ್ರಖ್ಯಾತ ದುರ್ಗಾ ದೇವಸ್ಥಾನಕ್ಕೆ ಅಧಿಕಾರದಲ್ಲುಳ್ಳ ಬ್ರಾಹ್ಮಣರನ್ನುಳಿದು ಯಾರೂ ಪ್ರವೇಶ ಪಡೆವಂತಿರಲಿಲ್ಲವೆಂದೂ, ಆದಾಗ್ಯೂ ಕಾವಲುಗಾರರಿಗೆ 'ಏನನ್ನೋ' ನೀಡಿ ತಾನು ಒಳ ಪ್ರವೇಶಿಸಿದೆನೆಂದೂ ಹೇಳುವ ಪೇಸ್, ಆ ದೇವಾಲಯದ ಗರ್ಭಗುಡಿಯ ಒಳಗಿನ ವಿವರಗಳನ್ನು ನಿಖರವಾಗಿ ನೀಡುತ್ತಾನೆ. ಈ ಮೂಲಕ ನಗರದ ಕೆಲ ವ್ಯಕ್ತಿಗಳು ತಮ್ಮ ಬ್ರಾಹ್ಮಣ ವರ್ಗ

ಶ್ರೀಮಂತಿಕೆಯು ಹೊರತಾಗಿಯೂ ಲಂಚಕ್ಕೆ ಕೈಯೊಡ್ಡುತ್ತಿದ್ದರೆಂದು ತಿಳಿಯುತ್ತದೆ. ಭ್ರಷ್ಟತೆಗೆ ಜಾತಿ ಇಲ್ಲವೆಂದೂ ಯಾವುದೇ ಉಚ್ಚ ವರ್ಗವೂ ಅದಕ್ಕೆ ಹೊರತಲ್ಲವೆಂದೂ ನಿರೂಪಿಸುವ ಇಂತಹಾ ಘಟನೆಗಳು ಪೇಸ್‌ನ ಪ್ರವಾಸ ಸಾಹಿತ್ಯಕ್ಕೆ ಜೀವಂತಿಕೆಯನ್ನು, ನಂಬಲರ್ಹತೆ ಯನ್ನು ನೀಡಿವೆ. (ಪುಟ 86 -87 ವಿಜಯನಗರ ಪೇಸ್‌ನ ಪ್ರವಾಸಿ ಕಥನ)

ಅಷ್ಟಕ್ಕೂ ಪೇಸ್‌ನ ಕಥನವನ್ನು ವಸ್ತುನಿಷ್ಠ ಎಂದು ತಿಳಿಯುವಂತಿಲ್ಲ, ಓರ್ವ ವಿದೇಶೀಯನಾಗಿ, ಭಾರತ ಪ್ರವಾಸ ಕೈಗೊಂಡ ಪೇಸ್ ಸಮಗ್ರ ವಿವರಗಳನ್ನು ನೀಡಿದ್ದಾನೇನೋ ಸರಿ, ಆದರೆ ಈ ವಿವರಗಳನ್ನು ದಾಖಲಿಸುವ ಅವನ ಮನೋಸ್ಥಿತಿಯಲ್ಲೇ ಹಣ, ಬಂಗಾರ, ಸಂಪತ್ತಿನ ಬಗ್ಗೆ ವಿಶೇಷ ಮಮಕಾರ ಇರುವುದೂ ಕಂಡುಬರುತ್ತದೆ. ದೇವಾಲಯವೇ ಇರಲಿ, ರಾಜ ರಾಣಿಯರೇ ಇರಲಿ, ಅಥವಾ ಸೇನೆಗಳ ಲಾಂಛನಗಳೇ ಇರಲಿ, ಅಲ್ಲಿರುವ ವಿವರಗಳಲ್ಲಿ ಪೇಸ್‌ನಿಗೆ ಎದ್ದು ಕಾಣುವುದು ಬಂಗಾರ, ಸಂಪತ್ತಿನ ಅಂಶಗಳೇ. ಅಂದರೆ ಪೇಸ್‌ನ ದೃಷ್ಟಿಯಲ್ಲಿ ಧನ ಸಂಪತ್ತು ಮುಖ್ಯ ಪಾತ್ರ ವಹಿಸುತ್ತಿತ್ತು ಎನ್ನುವ ಕಾರಣಕ್ಕಾಗಿಯೇ, ಅವನು ಬರೆದ ಕಥನದಲ್ಲಿ ಇನ್ನುಳಿದ ಅನೇಕ ಅಂಶಗಳು ದಾಖಲೆಗೆ ಒಳಗಾಗದೇ ಇರುವ ಸಾಧ್ಯತೆಯನ್ನೂ ತಿಳಿದುಕೊಳ್ಳಬೇಕು.

ಅದೇ ರೀತಿ, ವಸಾಹತು ಶಾಹಿ ಆಡಳಿತ ವ್ಯವಸ್ಥೆಯ ಓರ್ವ ಅಧಿಕಾರಿಯಾಗಿದ್ದ ಸೀವೆಲ್, ಯುರೋಪ್‌ನಾದ್ಯಂತ ಪ್ರಚಲಿತವಿದ್ದ, ಪಾಶ್ಚಾತ್ಯ ರಾಷ್ಟ್ರಗಳು ರಚಿಸಿದ ಓರಿಯಂಟಲಿಸ್ಟ್ ಕಥನಗಳಿಗೆ (ಸಮೃದ್ಧಿ, ವಿಲಾಸಿ ಜೀವನ, ಧಾರ್ಮಿಕ ವಿಷಮತೆಗಳುಳ್ಳ ಪೌರಾತ್ಯದೇಶಗಳು ಎನ್ನುವ ಕಥನಗಳಿಗೆ) ಒಗ್ಗಿ ಹೋಗಿದ್ದರಿಂದಲೇ, ಹಾಗೂ 'ಸಾಮ್ರಾಜ್ಯ'ದ ಕನಸ್ಸನ್ನು ಒಪ್ಪಿಕೊಂಡಿದ್ದರಿಂದಲೇ ಫರ್‌ಗಾಟನ್ ಎಂಪಾಯರ್‌ನಂತಹ ಕೃತಿ ಹೊರ ಹೊಮ್ಮಲು ಸಾಧ್ಯವಾಯಿತು. ಈ ಬಗೆಯ ಸೈದ್ಧಾಂತಿಕ ಕಥನಗಳಲ್ಲಿ ಪೇಸ್‌ನಂತಹ ಪ್ರವಾಸಿಗರು ನೀಡಿದ ವಿವರಗಳಲ್ಲಿ 'ಸಮೃದ್ಧಿ ಹಾಗೂ ವಾಣಿಜ್ಯೀಕರಣ, ಹಾಗೂ ಸಾಮ್ರಾಜ್ಯ ಹಾಗೂ ವೈದಿಕ ಶಾಹಿಯ ವೈಭವಗಳೇ ಆಯ್ಕೆಗೊಳಗಾಗಿ ಮತ್ತೆ ಮತ್ತೆ ಕಥನಕ್ಕೊಳಗಾದವು. ದೇಶೀಯ ಕಥನಗಳನ್ನು ರಚಿಸುವಾಗ ನಮ್ಮ ವಿದ್ವಾಂಸರಿಗೂ ಓರಿಯಂಟಲಿಸ್ಟ್ ಕಥನಗಳೇ ಮಾದರಿಯಾದ ಕಾರಣದಿಂದ ಪೇಸ್‌ನ ಕಥನದ ಕೆಲವೇ ವಿವರಗಳು ಚಾರಿತ್ರಿಕ ಸತ್ಯಗಳಾಗಿ ರೂಪುಗೊಂಡವು ಎನ್ನಬಹುದು.

ಮಾತ್ರವಲ್ಲ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಕೂಡಾ 150 ಕ್ಕೂ ಹೆಚ್ಚು ನಾಟಕ, ಕಾದಂಬರಿ ಮುಂತಾದ ಕಥನಗಳು ಈ ವಿಷಯದ ಬಗ್ಗೆಯೇ ಮೂಡಿ ಬರಲು ಭಾರತದ ಸ್ವಾತಂತ್ರಕಾಲದ ರಾಷ್ಟ್ರೀಯವಾದವೂ, ಆರ್ಥಿಕ ಪ್ರಗತಿಯ ಕನಸುಗಳೂ ಕಾರಣವಾದವು ಎಂದೂ ತಿಳಿಯಬಹುದು.

ಇನ್ನೊಂದು ವಿಚಾರವನ್ನು ಪ್ರಸ್ತಾಪಿಸಿ ಈ ಪ್ರಬಂಧಕ್ಕೆ ಅಂತ್ಯನೀಡುತ್ತೇನೆ. ಕರ್ನಾಟಕದಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಕ್ಷಯ ತೃತೀಯವನ್ನು ಮಾಧ್ಯಮಗಳು ವಿಜ್ರಂಭಣೆಯಿಂದ ಪ್ರತಿಫಲಿಸುತ್ತಿವೆ. ವಿಲಾಸಿ ಜೀವನದ ಪ್ರಮುಖ ಅಂಶವಾದ ಬಂಗಾರವನ್ನು ದೇವರೆಂದು ತಿಳಿದು ಆರಾಧಿಸುವ ಈ ಹಬ್ಬವು ಮಾರುಕಟ್ಟೆಯ ಅವಶ್ಯಕತೆಗಳಿಗನುಗುಣವಾಗಿ ಅತೀ ಹೆಚ್ಚು ಪ್ರಚಾರ ಹಾಗೂ ಜಾಹೀರಾತುಗಳನ್ನು ಗಳಿಸಿ ಮಾದ್ಯಮಗಳಿಗೂ ಆದಾಯಕಾರಕವಾಗಿದೆ. ಇಂದು ನಡೆಯುತ್ತಿರುವಂತಹ ಇಂತಹಾ ವಿಚಾರ ಸಂಕಿರಣದಂತಹಾ ಘಟನೆಗಳನ್ನು ಮಾಧ್ಯಮಗಳು ಯಾವ ರೀತಿ ವರದಿ ಮಾಡುವುದೋ ತಿಳಿದಿಲ್ಲ. ಆದರೆ, ಕಳೆದ 4 ದಿನಗಳ ಹಿಂದೆ ಅಕ್ಷಯ ತೃತೀಯದ ಸಂದರ್ಭದಲ್ಲಿ ಕನ್ನಡದ ದೈನಿಕಗಳು ನೀಡಿದ ವಿವರಗಳೇ ಚರಿತ್ರೆಯ ದಾಖಲೆಗಳಾಗಿ ಉಳಿಯುವ ಸಾಧ್ಯತೆಗಳಂತೂ ಇವೆ. ಪ್ರಮುಖ ದಿನ ಪತ್ರಿಕೆಯಂದು ಮುದ್ರಿಸಿದ ವರದಿಯೊಂದನ್ನು ಉಲ್ಲೇಖಿಸಲು ಇಚ್ಛಿಸುತ್ತೇನೆ. ಪ್ರಥಮ ಪುಟದಲ್ಲಿ ಮುದ್ರಿತವಾದ ಆ ಸುದ್ಧಿ ಅಕ್ಷಯ ತೃತೀಯಾದ ದಿನದಂದು ಕರ್ನಾಟಕದಲ್ಲಿ ಸುಮಾರು ಒಂದು ಟನ್ ಬಂಗಾರ ಮಾರಾಟವಾಗಿದೆ ಎಂದು ಹೇಳಿತ್ತು. ಈ ವಿವರಗಳನ್ನೇ ಆಯ್ದು ಚರಿತ್ರೆಯ ಕಥನವನ್ನು ಕಟ್ಟಿದಲ್ಲಿ ನಾವು ಇಂದು ಕರ್ನಾಟಕದಲ್ಲಿ ಸುವರ್ಣಯುಗದಲ್ಲಿದ್ದೇವೆ ಎಂದು ಭವಿಷ್ಯದ ಚರಿತ್ರೆಯ ಓದುಗರಿಗೆ ಅನ್ನಿಸ ಬಹುದಲ್ಲವೇ? ಜನರ ಜೀವನ ಕಿರು ವಿವರಗಳನ್ನು ಗೌಣವಾಗಿಸಿ ಕರ್ನಾಟಕದ ಬಗ್ಗೆ ಇಂತಹ ಒಂದು ಕಥನವನ್ನೇ ಕಟ್ಟಬಹುದಲ್ಲವೇ? ಈ ಅರ್ಥದಲ್ಲಿ ನಮ್ಮ ಇಂದಿನ ವರ್ತಮಾನ ಕೂಡ ವಿಜಯನಗರದಂತೆ ಸುವರ್ಣಯುಗವೇ ಅಲ್ಲವೇ?

1. ಈ ಪ್ರಬಂಧಕ್ಕೆ ಮುಖ್ಯ ಆಕರವಾಗಿ ವಸುಂದರಾ ಫಿಲಿಯೋಝಟ್ ಅವರು ಸಂಪಾದಿಸಿದ ವಿದೇಶೀ ಪ್ರವಾಸಿಗರ ಕಥನ ವಿಜಯ ನಗರ ಗ್ರಂಥವನ್ನು ಬಳಸಿಕೊಳ್ಳಲಾಗಿದೆ. ಪುಟ ಸಂಖ್ಯೆಗಳು ಈ ಗ್ರಂಥದ ಪುಟ ಸಂಖ್ಯೆಗಳಾಗಿವೆ.

ಈ ಇಂಗ್ಲೀಷ್ ಗ್ರಂಥದ ಭಾಗಗಳನ್ನು ಅಗತ್ಯವಿದ್ದಲ್ಲಿ ಕನ್ನಡಕ್ಕೆ ಅನುವಾದ ಮಾಡಿ ಬಳಸಲಾಗಿದೆ.

ವಸುಂದರಾ ಫಿಲಿಯೋಝಟ್ ವಿಜಯ ನಗರ ನ್ಯಾಶನಲ್ ಬುಕ್ ಟ್ರಸ್ಟ್ ಇಂಡಿಯಾ ನವ ದೆಹಲಿ 1997.

2 ಈ ಬಗೆಯ ಕಥನಗಳು ಕಾಲಾನುಕ್ರಮದಲ್ಲಿ ತಮ್ಮದೇ ಸ್ವಂತ ಅಸ್ತಿತ್ವವನ್ನು ಸತ್ಯವನ್ನು ಗಳಿಸಿಕೊಳ್ಳುವುದನ್ನು ಇಲ್ಲಿ ಪ್ರಸ್ತಾಪಿಸಬಹುದು. ಉದಾಹರಣೆಗೆ ಮುತ್ತು ರತ್ನಗಳನ್ನು ಸಂತೆಗಳಲ್ಲೆಂಬಂತೆ ರಸ್ತೆ ಬದಿಗಳಲ್ಲಿ ರಾಶಿ ರಾಶಿಯಾಗಿ ಮಾರುತ್ತಿದ್ದರು ಎನ್ನುವುದು ಒಂದು ಚಾರಿತ್ರಿಕ ಸತ್ಯಕ್ಕಿಂತ ಭಿನ್ನವಾಗಿ ಕಾಲ್ಪನಿಕ ಕನಸಿನ ರಚನೆಗಳ ತೋರ್ಪಡಿಕೆಯಾಗಿ ಕಥನಗಳಲ್ಲಿ ಮೂಡಿ ಬರುವ ಪ್ರಕ್ರಿಯೆಯನ್ನು ಸೂಚಿಸುತ್ತದೆ.

ಡೊಮಿಂಗೋ ಪೇಸ್‌ನ ಮಾತುಗಳನ್ನು ಈ ರೀತಿ ಕನ್ನಡದಲ್ಲಿ ಹೇಳಬಹುದು “ಮುಂದಕ್ಕೆ ಹೋದಂತೆ ನಮಗೆ ಅಗಲವಾದ ಮತ್ತು ಸುಂದರವಾದ ರಸ್ತೆಯೊಂದು ಸಿಗುತ್ತದೆ. ಇದು ನಾನು ಮೊದಲೇ ವಿವರಿಸಿದಂತೆ ಸಾಲಾದ ಚಂದದ ಮನೆಗಳಿಂದ ಕೂಡಿದೆ. ಇಂತಹ ಮನೆಗಳನ್ನು ಹೊಂದಿರುವವರು ಸಾಕಷ್ಟು ಶ್ರೀಮಂತರೆಂದೇ ತಿಳಿದುಕೊಳ್ಳಬೇಕು. ಈ ರಸ್ತೆಯಲ್ಲಿ ಅನೇಕ ವ್ಯಾಪಾರಸ್ಥರು ವಾಸಿಸುತ್ತಾರೆ. ಮತ್ತು ಇಲ್ಲಿ ಎಲ್ಲಾ ರೀತಿಯ ಮಾಣಿಕ್ಯಗಳು, ವಜ್ರಗಳು, ಪಚ್ಚೆಗಳು, ಮುತ್ತುಗಳು, ಹವಳಗಳು ಮತ್ತು ಬಟ್ಟೆಗಳು ಹಾಗೂ ನೀವು ಖರೀದಿಸ ಬಯಸುವ ಭೂಮಿಯಲ್ಲಿರುವ ಯಾವುದೇ ರೀತಿಯ ವಸ್ತುಗಳು ಕಾಣಸಿಗುತ್ತವೆ”. (ಪುಟ 79 ವಿಜಯನಗರ, ಪೇಸ್‌ನ ಪ್ರವಾಸಿ ಕಥನ) ಈ ವಿವರಣೆಯಲ್ಲಿ ಮುತ್ತು ರತ್ನಗಳು ರಸ್ತೆ ಬದಿ ಸಿಗುತ್ತಿದ್ದವು ಎನ್ನುವ ತೀರ್ಮಾನಕ್ಕೆ ಬರಲು ಸಾಧ್ಯವೇ? ಅಥವಾ ಮುತ್ತು ರತ್ನಗಳ ವ್ಯಾಪಾರಿಗಳು ವಾಸಿಸುವ ಬೀದಿ ಅದಾಗಿತ್ತು ಎನ್ನುವುದು ಸರಿಯೇ?

ಕೃಷ್ಣ ದೇವರಾಯನ ಗೃಹ ಜೀವನದ ಕಿರುನೋಟ

ತುಕಾರಾಂ ಪೂಜಾರಿ

ಇತಿಹಾಸದ ಪುಟಗಳಲ್ಲಿ ಅವಿತಿರುವ ರಾಜ ಮಹಾರಾಜರುಗಳ ಅಸಾಮಾನ್ಯ ಸಾಹಸಗಾಥೆಗಳು, ಕಲೆ – ಸಾಹಿತ್ಯ ಸಂಗೀತಾದಿ ಲಲಿತಕಲೆಗಳ ಬೆಳವಣಿಗೆ, ಆರ್ಥಿಕ-ಧಾರ್ಮಿಕ ಕ್ಷೇತ್ರಗಳ ಪ್ರಗತಿ ಮೈನವಿರೇಳಿಸುವ ಕದನ – ಕರಾರುಗಳ ಸರಮಾಲೆಗಳಿಗೆ ಕೊರತೆಯೇನಿಲ್ಲ. ಅದರಲ್ಲೂ, ಸಾವಿರಾರು ವರ್ಷಗಳ ಐತಿಹಾಸಿಕ ಹಿನ್ನೆಲೆಯನ್ನೊಳಗೊಂಡಿರುವ ಕರ್ನಾಟಕ ಇತಿಹಾಸದ ಹರಿವಿನ ಕತೆಯಂತೂ ಬಹಳ ರೋಚಕ ಹಾಗೂ ಸ್ವಾರಸ್ಯಕರವಾದುದು. ಕರ್ನಾಟಕದ ಇತಿಹಾಸದಲ್ಲಿ ಸುವರ್ಣ ಕಾಲವೆಂದು ದಾಖಲಿಸಿಕೊಂಡ ಕೃಷ್ಣದೇವರಾಯನ ಆಡಳಿತಾವಧಿಯಂತೂ ಭಾರತೀಯ ಇತಿಹಾಸಕ್ಕೆ ಕಲಶಪ್ರಾಯವಾಗಿದೆ. “ಕರ್ನಾಟಕ ರಾಜ್ಯ ರಮಾರಮಣ”, “ಯವನ ರಾಜ್ಯ ಸ್ಥಾಪನಾಚಾರ್ಯ” “ನೆನಿಸಿಕೊಂಡ”, ಕೃಷ್ಣ ದೇವರಾಯ ಹೊತ್ತಂತಹ ಬಿರುದಾವಳಿಗಳು ಹತ್ತಾರು. “ಮಹಾರಾಜಾಧಿರಾಜ” “ರಾಜ ಪರಮೇಶ್ವರ” “ವೀರ ಪ್ರತಾಪ”, “ಕೃಷ್ಣ ಮಹಾರಾಯ ”; “ಸ್ವಸ್ತಿಶ್ರೀ ಭುವನಾಧೀಶ್ವರ” “ಶ್ರೀಮಾನ್ ಮಹಾಮೇದಿನೀ” “ಮೀಸರಗಂಡ” “ಕಠಾರಿ ಸಾಳ್ವ” “ಶ್ರೀಮದ್ದಕ್ಷಿಣ” ,“ಸಮುದ್ರಾಧಿಪತಿ”, “ನರಸಿಂಹ ವರ್ಮ” “ಮಹಾರಾಜ ತನೂಭವ”; ಪ್ರಾಬಲ್ಯ ಪ್ರತಾಪ ಸಕಲ ಭೂಮೀಶ್ವರ ನಿಕರ ಮಕುಟ ವಿನ್ಯಸ್ತ ಚರಣಾರವಿಂದ ಯುಗಳ ಸರ್ವಭುವನ ಪ್ರಚಾರ ಕುತೂಹಲಿತ ಕೀರ್ತಿ ಕುಲದೇವತಾ ಸಹಚಾರಚಾತುರ್ದಂತ ಬಲಾನ್ವಿತ ವೀರಲಕ್ಷ್ಮೀ ಸಮಾಕರ್ಷಣ ಶ್ರೀಮತ್ ಕೃಷ್ಣದೇವರಾಯ. ಇವೆಲ್ಲವುಗಳು ಅವನ ಸಾಹಸ ಹಾಗೂ ಸಾಧನೆಯ ವಿವಿಧ ಮುಖಗಳ ಪರಿಚಯವನ್ನೀಯುತ್ತವೆ. ರಾಯನು ಉತ್ತಮ ಯೋಧನು, ಹಾಗೂ ದಕ್ಷ ಆಡಳಿತಗಾರನೂ ಆಗಿದ್ದನು. ರಾಜ್ಯಕ್ಕಾಗಿ ತಮ್ಮ ಜೀವನವನ್ನು ತ್ಯಾಗ ಮಾಡಲು ಸಿದ್ಧರಾಗಿರುವ ಸೈನಿಕರನ್ನು ತನ್ನ ಮಕ್ಕಳಂತೆಯೇ ನಡೆಸಿ ಕೊಂಡವನು. ತನ್ನ ಪ್ರಜಾಕೋಟಿಯ ಸುಖ ದು:ಖಗಳಿಗೆ ಸದಾ ಸ್ಪಂದಿಸುತ್ತಿದ್ದ ಮೃದು ಹೃದಯಿ.

ರಾಜ ಮಹಾರಾಜನಾದರೇನು, ದೀನ ದರಿದ್ರನಾದರೇನು ಕಷ್ಟ ಕೋಟಲೆಗಳು ದು:ಖ-ದುಮ್ಮಾನಗಳು ಯಾರನ್ನೂ ಬಿಟ್ಟಿಲ್ಲ. ಇದಕ್ಕೆ ಕೃಷ್ಣದೇವರಾಯನೂ ಹೊರತಾಗಲಿಲ್ಲ. ತನ್ನ ಗ್ರಹಜೀವನ ಸುಖಕರವಾಗಿಯೇ ಇತ್ತಾದರೂ, ತನ್ನ ಕೊನೆಯ ದಿನಗಳಲ್ಲಿ ಪಡಬಾರದ ಪಾಡೂ ಪಡಬೇಕಾಯಿತು. ರಾಯನಿಗೆ ಹನ್ನೆರಡು ಜನ ರಾಣಿಯರು. ಅವರಲ್ಲಿ ತಿರುಮಲಾದೇವಿ ಮತ್ತು ಚಿನಾದೇವಿಯರು ಪಟ್ಟಾಮಹಿಷಿಯರು. ಒರಿಸ್ಸಾದ ರಾಜ ಪ್ರತಾಪರುದ್ರನ ಮಗಳಾದ ಜಗನ್ಮೋಹಿನಿ ರಾಯನ ಮೂರನೇ ಪಟ್ಟಮಹಿಷಿಯಾಗಿದ್ದಳು. ತಿರುಮಲಾದೇವಿಯು ಶ್ರೀರಂಗಪಟ್ಟಣದ ರಾಜನಾದ ಕುಮಾರ ವೀರಯ್ಯನ ಮಗಳು. ಮೂವರು ರಾಣಿಯರು ಬಹಳ ಅನ್ಯೋನ್ಯತೆಯಿಂದಿದ್ದರೂ, ಪ್ರತ್ಯೇಕ ಪ್ರತ್ಯೇಕವಾದ ಅರಮನೆಗಳನ್ನು ಹೊಂದಿ ಸಂಘರ್ಷಕ್ಕೆಡೆಯಿಲ್ಲದೆ ರಾಯನ ಪ್ರಗತಿಗೆ ಪೂರಕವಾಗಿ, ಸಾಂಸಾರಿಕ ನೆಮ್ಮದಿಯ ರೂವಾರಿಗಳಾಗಿದ್ದರು. ಆದರೂ ಜಗನ್ಮೋಹಿನಿಯು ಮಾತ್ರ ರಾಜೋಚಿತವಾದ ಎಲ್ಲಾ ಸವಲತ್ತು ಸೌಲಭ್ಯಗಳ ಮಧ್ಯೆಯೂ ವೈರಾಗ್ಯದ ಬದುಕು ನಡೆಸಿರುವುದಾಗಿ ಸಮಕಾಲೀನ ಗ್ರಂಥಗಳಾದ ಕುಮಾರ ಧೂರ್ಜಟಿಯು ಬರೆದಿರುವ " ಕೃಷ್ಣ ದೇವರಾಯ ವಿಜಯಮು " ಮತ್ತು ನಾದಿಂಡ್ಲ ಗೋಪಮಂತ್ರಿ ರಚಿಸಿರುವ "ಪ್ರಭೋಧ ಚಂದ್ರೋದಯ ವ್ಯಾಖ್ಯ" ಹಾಗೂ ಜಗನ್ಮೋಹಿನಿಯ ಹೆಸರಿನಲ್ಲಿ ರಚಿಸಲ್ಪಟ್ಟಿರುವ "ತುಕ್ಕಾ ಪಂಚಕಮ್ " ಎಂಬ ಸಂಸ್ಕೃತ ಶ್ಲೋಕಗಳಿಂದಲೂ ತಿಳಿದು ಬರುತ್ತದೆ. ತನ್ನ ಬಗೆಗಿನ ಚಕ್ರವರ್ತಿಯ ಅನಾದಾರವೇ ಅವಳ ದು:ಖಕ್ಕೆ ಮೂಲವಾಗಿತ್ತು. ಕೃಷ್ಣದೇವರಾಯನಿಗೆ ಮೂವರಿಂದಲೂ ಸಂತಾನಭಾಗ್ಯ ಒದಗಿ ಬಂದಿತ್ತು. ಹಿರಿಯ ಪಟ್ಟಮಹಿಷಿಯಾದ ತಿರುಮಲಾದೇವಿಗೆ ಇಬ್ಬರು ಮಕ್ಕಳು. ಇವರೇ ರಾಜಕುಮಾರ ತಿರುಮಲದೇವ ಮತ್ತು ತಿರುಮಲಾಂಬೆ. ತಿರುಮಲಾಂಬೆ ರಾಮರಾಯನನ್ನು ಮದುವೆಯಾದಳು. ಮುಂದೆ ಇವನು ಅಳಿಯ ರಾಮರಾಯನೆಂದೇ ಪ್ರಖ್ಯಾತನಾದ.

ರಾಜ್ಯ ರಾಜಕೀಯದ ಷಡ್ಯಂತ್ರಗಳ ಅರಿವಿದ್ದ ಕೃಷ್ಣದೇವರಾಯ ತನ್ನ ಜೀವಿತಾವಧಿಯಲ್ಲೇ ಎಳೆಯ ತಿರುಮಲನಿಗೆ ಬಹಳ ವೈಭವದಿಂದ ಪಟ್ಟಾಭಿಷೇಕ ಸಮಾರಂಭವನ್ನೇರ್ಪಡಿಸಿ ಸಮಸ್ತ ಜವಾಬ್ದಾರಿಯನ್ನು ವಹಿಸಿಕೊಟ್ಟು ತಾನು ಬೆಂಗಾವಲಾಗಿ ನಿಂತು ನಿಮಿತ್ತ ಮಾತ್ರನಾಗಿ ಅಧಿಕಾರ ನಡೆಸುತ್ತಿದ್ದನು. ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬಂತೆ, ಏನು ಆಗಬಾರದೆಂದು ಯೋಚಿಸಿ

ಇದೆಲ್ಲವನ್ನು ಮಾಡಲಾಗಿತ್ತೋ ಅದು ನಡೆದೇ ಹೋಯಿತು. ಅನಾರೋಗ್ಯದಿಂದ ತಿರುಮಲನ ಮರಣ ಸಂಭವಿಸಿತು. ಇದು ಮೇಲ್ನೋಟಕ್ಕೆ ನೈಜ ಸಾವಾದರೂ ಇದರ ಹಿಂದೆ ಪ್ರಧಾನಿ ತಿಮ್ಮರಸನ ಅಧಿಕಾರದ ಲೋಭ ಬಾಲಕನ ಸಾವಿಗೆ ಕಾರಣವೆಂಬ ಗುಲ್ಲು ಹಬ್ಬ ತೊಡಗಿತು. ತನಗೆ ಪ್ರಾಣ ದಾನ ಮಾಡಿದ ತಂದೆಗೆ ಮೀರಿದ ಪ್ರೀತಿಗೆ ಪಾತ್ರನಾದ ತಿಮ್ಮರಸನೇ ಈ ಸಾವಿಗೆ ಕಾರಣನಾಗಿದ್ದ ಎಂಬ ವಿಚಾರ ಅರಸನಿಗೆ ವಜ್ರಾಘಾತ ನೀಡಿತು. ಇದನ್ನು ಅರಗಿಸಿಕೊಳ್ಳಲಾರದೆ ಹೋದ ರಾಜ ಭ್ರಾಂತನಾದ.

ಮುಂದಿನ ಎಲ್ಲಾ ರಾಜಕೀಯ ಬೆಳವಣಿಗೆಗಳು ಹಿತಕರವಾಗಿರಲಿಲ್ಲ. ಈ ಘಟನೆಯಿಂದ ಚಕ್ರವರ್ತಿಯ ಮನೋಸ್ಥೈರ್ಯವೇ ಉಡುಗಿ ಹೋಗಿತ್ತು. ತಪ್ಪಿತಸ್ಥರಿಗೆ ಶಿಕ್ಷೆಯಾದರೂ ಈ ನೋವಿನಿಂದ ಚೇತರಿಸಿ ಕೊಳ್ಳಲಾರದೆ ಹೋದ. ಮಗನಿಗೆ ಅಧಿಕಾರ ವಹಿಸಿ ಕಲೆ ಸಾಹಿತ್ಯ ಸಂಗೀತಾದಿ ಲಲಿತಕಲೆಗಳ ವಿಶೇಷ ಬೆಳವಣಿಗೆಗೆ ಮನ ಮಾಡಿದ ರಾಯನ ಆಲೋಚನೆ ನೇರವಿರಲಿಲ್ಲ. ಮೇಲ್ನೋಟಕ್ಕೆ ಶಾಂತವಾಗಿ ಕಂಡರೂ ಒಳಗಿಂದೊಳಗೆ ರಾಯ ಕೊರಗುತ್ತಿದ್ದ ಕರಗುತ್ತಿದ್ದ. ತನ್ನ ಒಡಲಾಳದ ನೋವನ್ನು ನುಂಗಿಕೊಳ್ಳುವಂತಿಲ್ಲ, ಹಾಗೆಂದು ಅದನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸುವ ಹಾಗೂ ಇಲ್ಲ. ಇಡೀ ಸಾಮ್ರಾಜ್ಯದ ಜವಾಬ್ದಾರಿಯನ್ನು ಹೊತ್ತ ತಾನು ತನ್ನ ದೌರ್ಬಲ್ಯವನ್ನು ಹೊರಹಾಕಿದರೆ , ಆಗಬಹುದಾದ ಅನಾಹುತದ ಪೂರ್ಣ ಅರಿವನ್ನು ಹೊಂದಿದ್ದ. ಇದು ಕೇವಲ ರಾಯನ ಕತೆಯಲ್ಲ. ಇತಿಹಾಸದ ಉದ್ದಕ್ಕೂ ಕಂಡುಬರುವ ಕಟು ಸತ್ಯ. ತಮ್ಮ ಅವಿರತ ಶ್ರಮ , ಶೌರ್ಯದ ಫಲವಾಗಿ ಮೂಡಿಬಂದ ವಿಸ್ತಾರವಾದ ಸಾಮ್ರಾಜ್ಯ ತಮ್ಮೊಂದಿಗೆ ಅಳಿದು ಹೋಗುವ ಭಯದ ಬೀತಿಯಲ್ಲೇ ಕರಗಿ ಹೋದವರು ಹೆಚ್ಚು. ಈ ಸಾಲಿಗೆ ತಾನು ಸೇರಿ ಹೋಗುವೆನೆಂಬ ಕೊರಗು ಆವನನ್ನು ಮತ್ತಷ್ಟು ಅಧೀರನನ್ನಾಗಿಸುತ್ತಿತ್ತು. ಈ ಮಧ್ಯೆ ಶತ್ರು ಕಾಟವು ನಿರಂತರ ವಾಗಿ ಕಾಡುತ್ತಿತ್ತು. ಬೆಳಗಾವಿಯ ಮುತ್ತಿಗೆಯನ್ನಾರಂಭಿಸಬೇಕೆಂದಿರು ವಷ್ಟರಲ್ಲಿ ಹಟಾತ್ತಾಗಿ ರೋಗ ಪೀಡಿತನಾಗಿ ಹಾಸಿಗೆ ಹಿಡಿದ ಕೃಷ್ಣ ದೇವರಾಯ , ಈಗಾಗಲೇ ಕೌಟುಂಬಿಕ ಸಮಸ್ಯೆಯಿಂದ ಜರ್ಜರಿತನಾಗಿ, ಮಾನಸಿಕವಾಗಿ ಖಿನ್ನನಾಗಿದ್ದವನು.

ಈ ರೋಗದಿಂದ ಮತ್ತೆ ಚೇತರಿಸಿಕೊಳ್ಳಲಾರದೆ ಹೋದ. ಅಪ್ರತಿಮ ಸಾಹಸಿ, ಅಸಾಮಾನ್ಯ ಸಾಧಕ ಕೊನೆಗೂ ವಿಧಿಯ ತೀರ್ಪಿಗೆ ಶಿರಬಾಗಲೇ ಬೇಕಾಯಿತು.

ಪರಾಮರ್ಶನ ಗ್ರಂಥಗಳು :

- ತ್ರಿವಿಕ್ರಮ (1954) , **ಕೃಷ್ಣ ದೇವರಾಯ**
  ಸುದರ್ಶನಂ ಆಂಡ್ ಕಂಪೆನಿ, ಬೆಂಗಳೂರು

- ರೈ ವಿವೇಕ ಬಿ.ಎ. (2005), **ಪ್ರವಾಸಿ ಕಂಡ ವಿಜಯನಗರ (ಸಂ)**,
  ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಅಲಿಷೇಕ್ ಬಿ. ಮತ್ತು ಕೆ.ಎಸ್ ಶಿವಣ್ಣ (1997), **ಕರ್ನಾಟಕ ಚರಿತ್ರೆ (ಮಾಲೆ 3)**, ಕನ್ನಡ ವಿಶ್ವ ವಿದ್ಯಾಲಯ, ಹಂಪಿ

- ರಾವ್ ಹನುಮಂತ ಮತ್ತು ಬಸವೇಶ್ವರ (1979),
  ಇಂಡಿಯನ್ ಹಿಸ್ಟರಿ ಆಂಡ್ ಕಲ್ಚರ್

Temples of Vijayanagara – Under the Tuluvas

Dr Aravind Kumar

The foundation of the Vijayanagara kingdom in the south was laid down by two brothers Harihara and Bukka of the five sons of Sangama. They were the ministers in the state of Kampili. When Sultan Muhammad Tughluq conquered Kampli, he imprisoned these two brothers, took to Delhi and forced them to embrace Islam. Afterwards when there occurred a revolt in Kampili, Muhammad Tughluq sent them there to suppress that revolt. They failed in their attempt because of the resistance of the people of Kampili who were inspired by the spirit of independence. The founding of the kingdom and also the city of Vijayanagara in A.D. 1336 was an event of remarkable consequences in the history of South India, particularly in Andhra Pradesh. Saint Vidyaranya encouraged them to accept Hinduism once again and pleaded to his guru, Vidyatirtha, who converted them, back to Hinduism and they decided to liberate their people from Muslim domination. This very small state grew up as the mighty Kingdom of Vijayanagara afterwards. Four dynasties namely Sangama, Saluva, Tuluva and Aravidu, ruled one after other. The Vijayanagara Empire was one of the successful results of political contests of the Hindus against Muslim aggression in south India.

Krishnadevaraya belonged to Tuluva dynasty, ruled the Vijayanagara from A.D.1509 to A.D.1529, proved himself as the greatest ruler of Vijayanagara. The empire reached at the Zenith of its power and prosperity during his reign. Literature and fine arts progressed within Vijayanagara Empire. The rulers encouraged Sanskrit, Tamil, Telugu and Kannada literature. The rule of Krishnadevaraya marked the zenith of, the growth of various literature and fine arts. The temples of Vithalaswami and the Hazara temple built by Krishnadevaraya have

been regarded as the finest specimens of Hindu architecture. During the period of Vijayanagara, temple building activity was given due importance by the rulers as well as their sub ordinates. During the period new temples were built and new adjuncts like gopura, Kalyanamandapa, minor shrines etc... were added to the existing temples. In the Vijayanagara temple architecture, the Raya gopuras (the temple gateway) becomes more predominant when compared to the sikhara (temple tower) built over the sanctum. The Vimana is less in height and belongs to the class of sikharas dominated by a square or octagonal or circular stupi, tipped by a Vase shaped Kalasa or a finial. Most of the, larger temples possess an open courtyard or prakara of a vast size. Generally the entrance are built of stone, the gateway is wide, lofty and massive. As in architecture so even in the field of sculpture, the Vijayanagara artist often indulged in creating mega sculptures of gigantic proportions. An attempt is made in the present paper to make a brief survey of the contributions made, to temple architecture under the Tuluvas of Vijayanagara Empire.

In the part of the sixteenth century, the rulers of Tuluva dynasty constructed many new temples and repaired many older monuments. Building of new temples was undertaken, at almost all of the important religious centres in southern India. Such unprecedented architectural activity was only possible, because of the sustained patronage by the Tuluvas and their representatives in the different provincial centres. Another factor which facilitated temple construction on this scale was the overall standardization of building techniques and designs. Temples became larger and more complicated in terms of their overall planning, with almost precisely the same Vimanas, mandapas and gopuras. This unified idioms skillfully integrated the Tamil inspired elements that had first appeared in the religious architecture of the Sangamas and Saluvas.

Tuluva architecture is distinguished by the emphasis on open mandapas, with elaborate, treated columns. Prominent among the

different types of mandapas that became popular at this time is the Kalyana mandapa, or marriage hall. This has a small raised dais in the middle or at one end for displaying richly dressed images of gods and goddesses on the occasion of their ritual marriage. A second type of mandapa constructed for the purpose of conducting religious activities such as rendering religious music and dance dramas and also for sermons and recital of sacred scriptures. The third type of mandapas generally, a lofty construction with four slender columns was used as a swing pavilion metal chains attached to a hook, set into the ceiling carried a swing in which sacred images were placed. Another characteristic of Tuluva architecture is the evolution of the gopura as a dominant feature of religious complex. From this period onwards entrance gateways surpassed vimanas in height and elaboration, as is evident from the finely sculptured details of granite basements, walls and door jambs and the fully modelled plaster sculptures of pyramidal towers.

Among constructions carried by Krishnadevaraya, the first one was the enlargement of the Virupaksha complex at Hampi. In A.D.1510 he added a long open mandapa, the aisles of which surround a spacious inner hall. The outer piers of mandapas have cluster of cutouts, except for 'Yali' (animal motif with lion body and elephant face). The same animal motifs occur on the piers that define the cultural hall; the piers at the corner have double Yalis with diminutive riders. Krishnadevaraya was also responsible for the gopura designed with the mandapa to the east. This modest structure has a pyramidal double storied tower capped with shala roof.

Another addition to the Virupaksha complex that may be ascribed to Tuluva era is the ceremonial avenue that approaches the temple from the east. Religious architecture at Vijayanagara appears with new inventions, as is seen in the Ananthashayana complex near Hospet, a suburb some 12 Kilometers, south-west of the royal capital. Dating from 1524 in the later years of Krishnadevaraya's reign, the temple has

a large rectangular sanctuary with three doors through which the reclining image of Visnu could be viewed from the adjoining ante chamber. The sanctuary roofed with a lofty brick and plaster vault, no less than 10 meters high, with semi-circular ends to achieve an almost elliptical plan, its outer walls are divided into storeys with regularly spaced arched niches.

Temple architecture during the reign of Achutaraya shows an increasing concern for over all planning. The Tiruvengalanatha complex, a short distance east of Hampi was erected in 1534, by the Hiriya Tirumala brother-in-law, to the raya. This monument resembles the Krishna temple in almost all respects except for the two rectangular enclosures arranged in concentric formation.

The climax of architectural development at Vijayanagara is best represented by the Vittala complex. The main structure may back to saluvas times, Tuluvas made additions to the temple as per the record of the inscription. The glory of the monument is the outer open mandapa appended to the main shrine in 1554, during the era of Sadasiva. Its magnificent conception is still evident. Even though the ceiling is badly broken and the columns smashed. The floor of the mandapa is elevated on an ornate basement adorned with a frieze of horses and attendants, interrupted by miniature niches, accommodating figures of gods, elephants and Yali balustrades flanked by the freestanding kalyana mandapa. South-east of the main temple within the Vittala complex is an elegantly designed structure. The outer piers have pairs of rearing beasts in the middle of each side and clusters of colonnades at the corners. The structure is provided with stone wheels imitating those of an actual chariot used in temple ceremonies. The brick and plaster tower with a hemispherical roof that appears in the Nineteenth century photographs is no longer preserved.

Temple of Tuluvas in Telugu region: the religious projects of Tuluva period beyond the capital are by no means inferior in scale or in quality. The towered gateway at Kalahasti , erected by Krishnadevaraya in 1516 A.D. on his visit to this pilgrimage site in the extreme south-east of Telugu region gives the best possible idea of the gopura conception in this era. The lower granite structure had (the whole monument is collapsed now), a high double basement with well articulated mouldings. The wall above presented a sequence of shallow pilastered niches alternating with single pilasters standing in pots. The brick tower which was raised above had seven diminishing storeys, each with a sequence of pilastered niches capped by miniature roof forms. Central projections in the middle of the long sides have windows flanked by guardian figures. The tower is roofed with an enlarged shala of usual type. Pot like finials is aligned along the crest. While fierce monster masks created in pilaster adorn the arched ends (the whole structure is collapsed now, nothing is there now to see).

Many religious projects of the Tuluva period were initiated by provincial governors and commanders, especially in the Telugu areas. China Timmanayaḍu, a sub-ordinate of Krishnaraya erected the Chintala Venkataramana temple at Tadipatri, on the banks of Penna River, in the Ananthpur district. The walls of the Vimana and enclosed mandapa of this monument are covered with carvings of epic scenes placed between the pilasters. Porches sheltering the doorways to the enclosed mandapa of this monument have piers sculptured with pairs of leaping beasts. An open mandapa with raised floor areas defining a long central hall extends to the east. Its external piers have single or triple pilasters clustering around the shafts those in the middle of each side are carved with rearing animals or attendant maiden, Yalis with riders adorn the piers living central small masonry chariot, complete with wheels pilastered wall and a hemispherical roof is located immediately outside the hall. A goddess's temple to the north is approached through a mandapa, the over hanging eaves of which are enlivened with carved monkeys in

croaching and leaping postures. The ornate ceiling within is treated as a dome like lotus. A miniature shrine wedged between the two temples is built on a polygonal plan that is almost circular its outer walls are packed with finely worked detail.

A gopura of the standard type marks the east entrance to the Chintala Venkankataramana temple complex. This gate way however is far exceeded in elaboration by the two unfinished examples in the Ramalingeshwara temple, situated a short distance away, on the bank of Pennar. Though the main shrine of this monument is an earlier foundation, probably going back to the Saluva times, the entrance towers clearly belongs to the Tuluva era. The grey-green granite portions of the gopuras present an intricate bled of lotus mouldings, pilastered walls, niches with cusped arches and pilasters standing in pots. They are all encrusted with sharply cut friezes of jewels , petals and scroll works as well as with fully modeled animals and birds, the resulting sculptural density is unparalleled in Vijayanagara art.

Another outstanding example of temple architecture under Tuluva is that dedicated to Virabhadra at Lepakshi. This complex was thoroughly renovated by Virupanna, governor of Penukonda province under Achyutaraya. The Temple is built on an uneven granite outcrop, strewn with boulders. At its core is a group of small shrines that predate the Tuluva period as is clear from their plain walls and modest brick towers. In their original context, the shrines probably stood freely in an open court defined by enclosure walls with narrative and animal friezes carved on to the outer surfaces. In the renovations of the sixteenth century this compound was covered over, the slabs roofing the central space being supported on squat piers was added to the north. The open hall in the middle of this mandapa is framed by twelve piers each with a large scale figured composition, dome like lotus vault rises above vividly coloured painting cover the ceilings above the side aisles. Access to the mandapa is through a pair of gateways positioned uncomfortably

close together, they delimit the two approximately rectangular enclosure of the temple one inside the other. A large but unfinished columned hall occupies the south-west corner of the inner enclosure. Another interesting monument is the Chennakeshava temple at Somapalem, a remote village near Madnapalle of Chittoor district. No historical records are available; the monument appears to be contemporary with that at Lapakshi. Out side the temple stands an elegant lamp-column some 18 meters high, its shaft is adorned with undulating stalks flanked by delicate scrollwork. A small mandapa projects outer from the enclosure on the east side, its columns have multifaceted shafts and donor figures. A gopura with an incomplete pyramidal brick tower leads directly to open mandapa of the main temple. The outer piers have colonetts and are overhung by doubled curved eves with a brick and plaster parapet above. The un-adorned walls of the adjoining enclosed mandapa and vimana contrast with the highly decorated kalyana mandapa in the south-west corner of the complex. The four central columns of this small painting are raised on a low square dais and have cut out pilasters, attendant, maidens, mythical beast and lotus ornaments, all in intricately worked grey-green granite. The basement of the dais is ornamented with friezes so too, the dome like ceiling with miniature figures and central pendant lotus.

Conclusions: thus under the Tuluva dynasty witnessed the maximum development in Vijayanagara temple architecture, unlike in the earlier period, the temples were small and medium in size. The period under Tuluvas left behind a rich legacy of large, medium and as well as small temples. The patrons of these temples were kings, queens, nobles and sub-ordinate officials. The size and quality of of the work depended on the wealth and status of the donor and his intentions in constructing the particular structure. Krishnadevaraya had erected innovative and large structures as well as simple ones such as the shrine of Lakshmi-Narasimha in Krishnapura. The period saw the introduction of many types of structures such as the hundred pillar hall, chariot-street and so on into the repertoire of Vijayanagara temple architecture.

No doubt, the temples in this century were predominantly in the Tamil style, yet certain feature of the earlier, local architecture appear every now and then in certain constructions. Much of what architectural historians in general write about the features of Vijayanagara temple architecture is based, predominantly, on the temples of this phase.

Reference / Bibliography :

1. Basavaraja, K.R. History and culture of Karnataka: Early times to unification, Chalukya publications, Dharwad, 1984.
2. Brown.P, Indian Architecture (Buddhist and Hindu period), D.B. Taraporevalasons and co. Bombay, 1976.
3. Chidanandamurti. M, Two Masti Temples in Karnataka, in Memorial stones: A study of their origin, significance and variety, institute of Indian Art History, Karnataka university Dharwada, 1982.
4. Dallapiccola. A, and Anila Vergheese, sculture at vijayanagara, Iconography and style, Manohar Publications, New Delhi, 1998.
5. George Michell. Architecture And Art of Southern India New Cambridge History of India. Cambridge University Press. 1991.
6. Fillozat. P. and Filliozat. V. Hampi – Vijayanagar: the temple of Vithala, Sitaram Bhartia Institute of Scientific Research New Delhi, 1988.
7. Venkataramanayya. N. Studies in Third dynasty of Vijayanagara, University of Madras, Madras 1935.
8. Verghese. Anila. Archaeology, Art and Religion, New perspectives on Vijayanagara, Oxford university press, New Delhi. 2000.

George Michell, Architecture and Art of Southern India. The New Cambridge History of India.

ಬೆನ್ನುಡಿ

ವಿಜಯನಗರ ಸಾಮ್ರಾಜ್ಯವು ಮಧ್ಯಕಾಲೀನ ಭಾರತದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಹೊಂದಿತ್ತು. ಭಾರತದ (ದಕ್ಷಿಣ) ಪ್ರದೇಶದಲ್ಲಿ ವಿಜಯನಗರವು ಒಂದು ದೊಡ್ಡ ಸಾಮ್ರಾಜ್ಯವಾಗಿತ್ತು. ವಿಜಯನಗರದ ಕೀರ್ತಿ ಹೆಚ್ಚಿರುವುದು ಬರಿಯ ವ್ಯಾಪಾರದಿಂದಲ್ಲ. ಅಲ್ಲಿನ ರಾಜಕೀಯ ಸ್ಥಿರತೆಯಿಂದ ಎನ್ನಬಹುದು. ಎಲ್ಲಕ್ಕಿಂತಲೂ ಮಿಗಿಲಾಗಿ ವಿಜಯನಗರದ ಆಳ್ವಿಕೆಯು ಹಿಂದೂ ಧಾರ್ಮಿಕ ಕಟ್ಟು ಪಾಡುಗಳನ್ನು ಮೀರಿದ್ದುದರಿಂದ ಅದನ್ನು ಹಿಂದೂ ಸಾಮ್ರಾಜ್ಯ ಎನ್ನುವಂತಿಲ್ಲ.ಆದರೆ ಸಂಪೂರ್ಣ ವಿಜಯನಗರದ ಔನ್ನತ್ಯ ಹಾಗೂ ಸಾಮ್ರಾಜ್ಯಕ್ಕೆ ಮೆರುಗು ನೀಡಿರುವುದು ಶ್ರೀ ಕೃಷ್ಣ ದೇವರಾಯನ ಆಡಳಿತ.

ವಿಜಯನಗರದ ಊಳಿಗಮಾನ್ಯ ಪದ್ಧತಿಯಲ್ಲಿದ್ದ ಅದೆಷ್ಟೋ ಗೊಂದಲಗಳಿಗೆ ಪರಿಹಾರ ಸಿಕ್ಕಿರುವುದು ಕೃಷ್ಣದೇವರಾಯನ ಕಾಲದಲ್ಲಿ. ಕಲೆ, ಸಂಗೀತ ವಾಸ್ತುಶಿಲ್ಪಗಳ ಪೋಷಕನಾಗಿ ಕೃಷ್ಣದೇವರಾಯನು ಜನಮಾನಸದಲ್ಲಿ ನೆಲೆಸಿದ್ದಾನೆ. ಕೃಷ್ಣದೇವರಾಯನು ಒಂದು ಐತಿಹಾಸಿಕ ಚಿತ್ರಣಕ್ಕಿಂತಲೂ ಜನಪದೀಯ ನೆನಪಾಗಿ ನಮ್ಮೊಂದಿಗಿರುವುದು ವಿಶೇಷ.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ವತಿಯಿಂದ ಉಡುಪಿಯಲ್ಲಿ ನಡೆದ ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕದ 500ನೇ ವರ್ಧ್ಯಂತ್ಸವ ಸಮಾರಂಭದ ಗೋಷ್ಠಿಗಳಲ್ಲಿ ವಿದ್ವಾಂಸರುಗಳು ಮಂಡಿಸಿದ ಪ್ರಬಂಧಗಳನ್ನು ಸಂಪಾದಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಲು ಅಕಾಡೆಮಿಗೆ ಅನುವು ಮಾಡಿಕೊಟ್ಟ ಪ್ರಾಧ್ಯಾಪಕ ಡಾ.ದುಗ್ಗಪ್ಪ ಕಜೆಕಾರ್ ಅವರ ಸಾಧನೆ ಪ್ರಶಂಸನೀಯ.

ಪ್ರೊ. ಸುರೇಂದ್ರ ರಾವ್
ನಿವೃತ್ತ ಪ್ರಾಧ್ಯಾಪಕರು
ಮಂಗಳೂರು ವಿಶ್ವವಿದ್ಯಾನಿಲಯ